ಪುಸ್ತಕ ಪ್ರಪಂಚ

ಜನವರಿ ೨೦೦೦



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೫೦   ಜನವರಿ ೨೦೦೦   ಸಂಚಿಕೆ ೪

ಪರಿವಿಡಿ

ಮುಖಪುಟ ಚಿತ್ರ : ಬಾಬಾ ಆಮಟೆ ದಂಪತಿಗಳು

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿ ಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–570 006

ನೂತನ ಸಹಸ್ರಮಾನದ ಹೊಸ್ತಿಲಲ್ಲಿ

ಅಮೀಬದಿಂದ ಹಿಡಿದು ಮನುಷ್ಯವರ್ಗದವರೆಗಿನ ಜೀವಜಾಲ ಅಥವಾ ಜೀವ ಸರಪಳಿಯಲ್ಲಿ ಪ್ರತಿಯೊಂದು ಜೀವಿಗೂ ಸ್ಥಾನವಿದೆ. ಎಲ್ಲ ಜೀವಿಗಳು ಪರಸ್ಪರಾವಲಂಬಿಗಳು. ಆ ಸರಪಳಿಯಲ್ಲಿ ಒಂದು ಕೊಂಡಿ ಕಳಚಿಕೊಂಡರೂ ಅಪಾಯ ಖಚಿತ. ಆದ್ದರಿಂದಲೇ ಪರಿಸರ ಮೈತ್ರಿಯ ಬಗ್ಗೆ ಮಾನವ ಎಚ್ಚರದಿಂದಿರಬೇಕಾಗಿದೆ.

ನಿಸರ್ಗದ ನಿಗೂಢ ರಹಸ್ಯಗಳನ್ನು ಭೇದಿಸುವಲ್ಲಿ, ತನ್ನ ಪ್ರಯೋಜನಕ್ಕಾಗಿ ಅದನ್ನು ಬಳಸಿಕೊಳ್ಳುವಲ್ಲಿ, ಅದಕ್ಕೂ ಮಾನವನಿಗೂ ಸ್ಪರ್ಧೆ ಪ್ರತಿಸ್ಪರ್ಧೆ ನಡೆಯುತ್ತಿರುವಂತೆ ತೋರುತ್ತದೆ. ಸೃಷ್ಟಿ ಪ್ರತಿಸೃಷ್ಟಿಗಳು ನಿರಂತರವಾಗಿ ಸಾಗುತ್ತಿರುವಂತೆ, ನಿಸರ್ಗವೂ ಸ್ವಯಂ ಪ್ರಭೆಯಿಂದ, ಜತೆಗೆ ತನ್ನದೇ ಕೂಸಾದ ಮಾನವನ ಮುಖಾಂತರ ಸದಾ ರೂಪಾಂತರ ಹೊಂದುತ್ತಿರುವಂತೆ ಗೋಚರವಾಗುತ್ತಿದೆ.ಆದಿಮಾನವ ಕಾಲದಿಂದ ಆಧುನಿಕ ಕಾಲದವರೆಗೆ, ಅದರಲ್ಲಿಯೂ ಇಪ್ಪತ್ತನೆಯ ಶತಮಾನದಲ್ಲಿ ನಡೆದಿರುವ ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯನ್ನು ಗಮನಿಸಿದಾಗ, ಮಾನವನ ಅದ್ಭುತ ಬುದ್ಧಿಶಕ್ತಿಯ ಬಗೆಗೆ, ನಿಸರ್ಗದ ಒಡಲಲ್ಲಿ ಅಡಗಿರುವ ಚಮತ್ಕಾರಗಳ ಬಗೆಗೆ ಯಾರಿಗಾದರೂ ವಿಸ್ಮಯವಾಗದಿರದು. ನಿಸರ್ಗದ ರಹಸ್ಯಗಳನ್ನೆಲ್ಲ ಹೊರ ಹಾಕುತ್ತೇನೆಂದು ಜಲ್ಪಿಸುವ ಮಾನವನ ಇತಿಮಿತಿಗಳೂ ಅರ್ಥವಾಗದಿರವು. ಆದರೂ ಸತ್ಯಶೋಧನೆ ಮಾನವನ ಸಹಜಗುಣ ಎನ್ನುವುದನ್ನು ಮರೆಯಲಾಗದು. ಅಷ್ಟೇ ಅಲ್ಲ, ಸಂಶೋಧನಾ ಲಬ್ಧ ಅವಕಾಶಗಳನ್ನು ನಿಸರ್ಗ ಧರ್ಮಕ್ಕೆ ಭಂಗ ಬರದಂತೆ ಮನುಕುಲದ ಕ್ಷೇಮಕ್ಕಾಗಿ ಬಳಸಿಕೊಳ್ಳಬೇಕಾದ್ದೂ ಮಾನವನ ಸಹಜ ಧರ್ಮವೆಂಬುದರಲ್ಲಿ ಸಂದೇಹವಿಲ್ಲ.

ಹಲವು ಶತಮಾನಗಳ ನಿರಂತರ ಶೋಧನೆಗಳೇ ಇಪ್ಪತ್ತನೆಯ ಶತಮಾನದಲ್ಲಿ ಅಪೂರ್ವ ಫಲ ನೀಡಿವೆಯಲ್ಲದೆ, ಮುಂದಿನ ಶತಮಾನಗಳಲ್ಲಿ ಮಾನವ ಆಕಾಶವನ್ನು ಗೆದ್ದುಕೊಳ್ಳಬಲ್ಲ, ಆ ಗೆಲವಿನೊಡನೆ ಅಪಾಯ ಶತಗಳೂ ಸಂಭವಿಸಬಹುದೆಂಬ ಊಹೆಗೂ ಅವಕಾಶ ಮಾಡಿಕೊಡುತ್ತವೆ. ರೇಡಿಯೋ ದೂರದರ್ಶನ ವೈದ್ಯಕೀಯ ಉಪಕರಣಗಳಿಗೆ ಬೇಕಾದ ಕ್ಷಕಿರಣ, ಎಲೆಕ್ಟ್ರಾನ್, ವಿಕಿರಣಕ್ರಿಯೆ, ಸಾಪೇಕ್ಷ ಸಿದ್ಧಾಂತ, ಪರಮಾಣು

ಶಕ್ತಿ ಸ್ಫೋಟ, ರಾಕೆಟ್ ತಂತ್ರ, ಕೃತಕ ಉಪಗ್ರಹಗಳ ಹಾರಾಟ, ಆಕಾಶ ನಿಲ್ದಾಣ, ಅಂತರಿಕ್ಷ ವಿಜ್ಞಾನ, ಮಾಹಿತಿ ತಂತ್ರವಿಜ್ಞಾನ, ಗಗನಜಾಲ, ಗಣಕಯಂತ್ರ, ಹೈಡ್ರೋಜನ್ ಬಾಂಬು, ಕ್ವಾರ್ಕ್ ಕಲ್ಪನೆ, ಡಿ.ಎನ್.ಎ. ತಳಿ ವಿಜ್ಞಾನ, ಜೀನ್ ಕ್ರಾಂತಿ, ಕೋಶಾಧಾರಿತ ಜೀವಸೃಷ್ಟಿ, ತದ್ರೂಪಿ ಪ್ರಾಣಿ ಸೃಷ್ಟಿ, ಪ್ಲಾಸ್ಟಿಕ್ ಕ್ರಾಂತಿ, ಯಾನಯಂತ್ರ ಪ್ರಗತಿ- ಇಂಥ ನೂರಾರು ಸಹಸ್ರಾರು ಶೋಧಗಳು ನಿಸರ್ಗ ಶಕ್ತಿಯ ಅನಂತತೆಗೆ ಸಂಕೇತವಾಗಿ, ಮಾನವನ ಮತಿ ಸಾಮರ್ಥ್ಯಕ್ಕೆ ಕುರುಹಾಗಿ, ವಿಶ್ವಪ್ರಜ್ಞೆಯ ಅಪರಂಪಾರತೆಗೆ ತೋರು ಬೆರಳಾಗಿ ಮುಂದಿನ ಶತಮಾನ ಸಹಸ್ರಮಾನಗಳಿಗೆ ಶಕುನ ಸೂಚನೆಗಳಾಗಿ ವಿರಾಜಮಾನವಾಗಿವೆ. ಇವುಗಳ ಸಾಧಕ ಬಾಧಕಗಳ ನ್ನರಿತುಕೊಂಡು, ನಿರ್ವಹಣೆ ನಿಯಂತ್ರಣ ತಂತ್ರಗಳನ್ನು ಕಲಿತುಕೊಂಡು ಅವುಗಳೊಡನೆ ಬಾಳುವ ಕಲೆಯನ್ನು ವಶಪಡಿಸಿಕೊಂಡರೆ ಮಾತ್ರ ಮನುಷ್ಯನ ಬದುಕು ಶುಭವಾಗುತ್ತದೆ, ಸಾರ್ಥಕವಾಗುತ್ತದೆ.

ಸ್ವಾರ್ಥ ಸಾಧನೆಗಾಗಿ, ದ್ವೇಷ ಸಾಧನೆಗಾಗಿ, ನೀತಿರಹಿತ ಸ್ಪರ್ಧೆಗಾಗಿ ಮನುಷ್ಯ ಪರಿಸರ ತತ್ವವನ್ನು ಗೌರವಿಸದೆ, ವೈಜ್ಞಾನಿಕ ಶೋಧಗಳನ್ನು ಅಪವ್ಯಯ ಮಾಡುತ್ತಿದ್ದಾನೆ, ನಿಸರ್ಗವನ್ನು ಲೂಟಿ ಮಾಡುತ್ತಿದ್ದಾನೆ. ತಾನು ಸೃಷ್ಟಿಸಲಾಗದ ಸುಂದರವಾದ ಬಂಡೆಗಳನ್ನು ಪುಡಿ ಪುಡಿ ಮಾಡಿ ದೂರ ಸಾಗಿಸುತ್ತ, ಚೆಲುವು ಕಾಡುಗಳನ್ನು ಬೆತ್ತಲೆಗೊಳಿಸಿ ಜೀವಜಾಲ ವನ್ನು ಹಾಳು ಮಾಡಿ ಭೂಕುಸಿತವನ್ನು ತೀವ್ರಗೊಳಿಸುತ್ತ, ವಿವೇಕರಹಿತ ವಾಗಿ ಕೃಷಿ ಭೂಮಿಯನ್ನು ಯಂತ್ರಾಗಾರ ನಗರ ನಿರ್ಮಾಣಗಳಿಗೆ ಬಳಸುತ್ತ, ಹೊಗೆ ಉಗುಳುವ ಕಾರ್ಖಾನೆ ವಾಹನಗಳ ಮೂಲಕ ನೀರು ಗಾಳಿಯನ್ನು ಮಲಿನಗೊಳಿಸುತ್ತ, ಓಜೋನ್ ಪದರವನ್ನು ಬಿರುಕು ಗೊಳಿಸುತ್ತ, ವರ್ಷದಿಂದ ವರ್ಷಕ್ಕೆ ಹವಾಮಾನವನ್ನು ಬದಲಾಯಿಸು ತ್ತಿರುವ ಪರಿಸ್ಥಿತಿಯಲ್ಲಿ ಮುಂದಿನ ಶತಮಾನದ ಭವಿಷ್ಯ ಭಯಂಕರವಾಗಿ ಕಾಣುತ್ತದೆ. ಮಾನವನ ಆಘಾತಗಳನ್ನು ಸಹಿಸಿಕೊಳ್ಳದ ನಿಸರ್ಗ ಅವನ ಮೇಲೆ ಮುನಿಸಿಕೊಂಡು ಸೇಡು ತೀರಿಸಿಕೊಳ್ಳುತ್ತದೆಂಬುದಕ್ಕೆ ಟರ್ಕಿ, ತೈವಾನ್, ಲಾಟೂರ್, ಒರಿಸ್ಸಾಗಳಲ್ಲಿ ಈಚೆಗೆ ಸಂಭವಿಸಿದ ಭೂಕಂಪ ಪ್ರಚಂಡಮಾರುತಗಳೇ ಜ್ವಲಂತ ನಿದರ್ಶನಗಳು. ಯಂತ್ರ ನಾಗರಿಕತೆಯ ಭಸ್ಮಾಸುರನ ಬಗ್ಗೆ ಮಾನವ ಸಂಯಮ ತಾಳದಿದ್ದಲ್ಲಿ ಅದೇ ಅವನನ್ನು ನುಂಗಿ ನೊಣೆಯುತ್ತದೆಂದು ಗಾಂಧೀಜಿ ನುಡಿದ ಭವಿಷ್ಯವಿಂದು ನಿಜವಾಗಿದೆ. ಪ್ರತಿನಿತ್ಯವೂ ಜಗತ್ತಿನ ನಾನಾ ಭಾಗಗಳಲ್ಲಿ ನಡೆಯುತ್ತಿರುವ ವಾಹನಾಪಘಾತಗಳು, ಯಂತ್ರಾಗಾರ ಕೈಗಾರಿಕೆಗಳಲ್ಲಿ ಘಟಿಸುವ ಅವಗಡ ಗಳು ಅವರ ಭವಿಷ್ಯವಾಣಿಗೆ ರುಜುವಾತುಗಳಾಗಿವೆ.

ಶಾಂತಿಯು ಪರದೆಯ ಹಿಂಗಡೆ
ಕ್ರಾಂತಿಯು ರಣಸನ್ನಾಹ !

ನರನೀಚತೆ ಮಾರೀಚತೆ
ದೇಶಪ್ರೇಮದ ನೆವದಿ

ದಂಷ್ಟ್ರಾಶ್ರಿತ ರಾಷ್ಟ್ರಂಗಳ
ಅಸು ಹಿಂಡುತ್ತಿದೆ ಜವದಿ !

* * *

ಭುವಿಗರ್ಭಕೆ ರವಿಗರ್ಭಕೆ
ನೀಹಾರಿಕೆಗೂ ಹೊಕ್ಕು
ಸತ್ಯದ ಕರುಳನೆ ಕಿತ್ತಿದೆ

ವಿಜ್ಞಾನದ ರಣಹದ್ದಿನ
ನೆತ್ತರು ಬಸಿಯುವ ಕೊಕ್ಕು

— — —

ತನ್ನಾತ್ಮವ ತಾನರಿಯುವ
ಸಾಧನೆಯೊಂದನು ಒಲ್ಲ !

—ಅಗ್ನಿಹಂಸ, ಪು. ೮೨–೮೩

ಈ ಕವಿವಾಣಿ ಇಂದಿನ ಜಗತ್ತಿನ ಪರಿಸ್ಥಿತಿಯನ್ನು ನೈಜವಾಗಿ ಚಿತ್ರಿಸುತ್ತಿದೆ.

ಮುಂದಿನ ಶತಮಾನದಲ್ಲಿ ಚಂದ್ರ ಮಂಗಳಾದಿ ಗ್ರಹಗಳಿಗೆ ಮಾನವ ವಲಸೆ ಹೋಗುವ ಸಂಭವವಿದೆ. ಬೇರೆ ಗ್ರಹಗಳಲ್ಲಿ ಜೀವಿಗಳಿದ್ದಾರೊ ಇಲ್ಲವೊ, ಇದ್ದರೆ ಮನುಷ್ಯರಂಥ ಜೀವಿಗಳಿದ್ದಾರೋ ಹೇಗೋ ಗೊತ್ತಿಲ್ಲ. ಹಾರಾಡುವ ತಟ್ಟೆಗಳಲ್ಲಿ ವಿಶ್ವಾಸವುಳ್ಳವರು ಭೂಲೋಕದ ಮಾನವರಿಗಿಂತ ಬುದ್ಧಿವಂತರಾದ ಜೀವಿಗಳಿದ್ದಾರೆಂದು ಹೇಳುತ್ತಾರೆ. ಇದ್ದ ಪಕ್ಷದಲ್ಲಿ ಗ್ರಹಗ್ರಹಗಳ ನಡುವೆ ಯುದ್ಧ ಸಂಭವಿಸಬಹುದೆ ಎಂಬ ಶಂಕೆಯೂ ಇದೆ. ವಿಜ್ಞಾನ ವಿಕಾಸ ಹೊಂದಿದಂತೆಲ್ಲ, ಮತಮೌಢ್ಯ ಉಲ್ಬಣಗೊಳ್ಳುತ್ತದೆ, ರಾಷ್ಟ್ರರಾಷ್ಟ್ರಗಳ ನಡುವಣ ದ್ವೇಷ ದಳ್ಳುರಿಯಾಗುತ್ತಿದೆ; ಕೆಲವು ಶ್ರೀಮಂತ ರಾಷ್ಟ್ರಗಳ ಏಕಸ್ವಾಮ್ಯ ನೀತಿ ಅಪಾಯಕಾರೀ ಮಟ್ಟವನ್ನು ಮುಟ್ಟುತ್ತಿದೆ;

ಪ್ರಜಾಪ್ರಭುತ್ವದ ಹೆಸರಿನಲ್ಲಿ ಕ್ರೂರ ಸರ್ವಾಧಿಕಾರಿಗಳು ಆರ್ಥಿಕ ನೀತಿಯ ಮೂಲಕ ಅನ್ಯರಾಷ್ಟ್ರಗಳನ್ನು ಗುಲಾಮೀಕರಿಸಲು, ತಮ್ಮ ಹಿಡಿತ ದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿವೆ; ಕೆಲವು ರಾಷ್ಟ್ರಗಳು ಮಾತ್ರವೇ ಬಾಂಬಿನ ಬಣವೆಯನ್ನೇರಿಸುತ್ತ ಉಳಿದ ರಾಷ್ಟ್ರಗಳನ್ನು ನಿಶ್ಶಸ್ತ್ರೀಕರಣ ಗೊಳಿಸಲು ಹುನಾರು ಹೂಡಿವೆ; ನಾವು ಪುರಾಣಗಳಲ್ಲಿ ಕಂಡಿರುವ ರಾಕ್ಷಸರಿ ಗಿಂತಲೂ ಕ್ರೂರಿಗಳಾದ ಉಗ್ರಗಾಮಿಗಳನ್ನು ಎಲ್ಲೆಲ್ಲೂ ನೋಡುತ್ತಿದ್ದೇವೆ; ಹೊಸ ಹೊಸ ರಾಷ್ಟ್ರಗಳು ತಲೆಯೆತ್ತುತ್ತಿವೆ; ಎಲ್ಲೆಲ್ಲೂ ಶೀತಲ ಯುದ್ಧ ನಡೆಯುತ್ತಿದೆ, ನರಹೃದಯವೇ ರಣರಂಗವಾಗಿದೆ; ಧರ್ಮದೇವರುಗಳ ಹೆಸರಿನಲ್ಲಿ ಎಲ್ಲೆಲ್ಲೂ ಶೋಷಣೆ ನಡೆಯುತ್ತಿದೆ. ಹಿಂದಿನ ಸಾಮಾಜಿಕ ಜೀವನ ಮೌಲ್ಯಗಳೆಲ್ಲ ತಲೆಕೆಳಗಾಗುತ್ತಿವೆ: ಒಂದು ಕಡೆ ವೇಶ್ಯಾವೃತ್ತಿ ನಿಷಿದ್ಧವಾದರೆ, ಮತ್ತೊಂದು ಕಡೆ ಸಲಿಂಗರತಿ ಹಾಗೂ ವಿವಾಹಗಳು ಜಾರಿಗೆ ಬರುತ್ತಿವೆ; ಏಡ್ಸ್ ಮೊದಲಾದ ಹತ್ತು ಹಲವು ಭಯಂಕರ ಲೈಂಗಿಕ ರೋಗಗಳು ಸರ್ವತ್ರ ಹರಡುತ್ತಿವೆ. ಜತೆಜತೆಗೆ ಏಡ್ಸ್ ಮಾರಮ್ಮನ ದೇವಾಲಯಗಳೂ ನಿರ್ಮಾಣಗೊಳ್ಳುತ್ತಿವೆ. ಪರರ ವೀರ್ಯಾಣುಗಳಿಗೆ ಆಶ್ರಯವನ್ನು ನೀಡಿ, ಅವರಿಗಾಗಿ ಮಕ್ಕಳು ಹೆರುವ ಬಾಡಿಗೆ ಹೆಂಗಸರೂ ದೊರೆಯುತ್ತಾರೆ. ಬುದ್ಧ ಕ್ರಿಸ್ತ ರಾಮ ಕೃಷ್ಣ ಜೊರಾಷ್ಟರ್ ಮುಹಮ್ಮದ್ ಬಸವೇಶ್ವರ ಶ್ರೀರಾಮಕೃಷ್ಣ ಪರಮಹಂಸ ಮೊದಲಾದ ಅವತಾರಗಳು ಬಂದರೂ, ಬರ್ಬರ ಸಂಸ್ಕೃತಿ ಅಳಿದು ಹೋಗಿಲ್ಲ.

ಇಳಿತಂದುದು ಈ ಭೂಮಿಗೆ
ಅವತಾರದ ಮೇಲವತಾರ!
ಆದುದ್ಧಾರಕೆ ಸಾವಿರ
ಮಡಿಯಿಹುದಾಗುವ ಉದ್ಧಾರ
—ಅಗ್ನಿಹಂಸ ಪು. ೮೫

ಎಂದು ಹೇಳುವ ಕವಿ

ಮತ್ತೆ ಇದೇನು?
ಯಾವಾಗಲು ನಿನಗಿದೆ ಗತಿಯೇನು?

ಎಂದು ಶಿಲುಬೆಯ ಮೇಗಡೆ ನೇತಾಡುವ ಅವತಾರಿ ಕ್ರಿಸ್ತನನ್ನು ಪ್ರಶ್ನಿಸು ತ್ತಾರೆ. ಬರುವ ಶತಮಾನದಲ್ಲಾದರೂ ಈ ಪ್ರಶ್ನೆಗೆ ಉತ್ತರ ಸಿಗುವುದೆ?

ಜಾಗತಿಕ ಮಟ್ಟದಲ್ಲಿ ಎಲ್ಲ ರಾಷ್ಟ್ರಗಳ ವ್ಯವಹಾರಗಳು ನಡೆಯಬೇಕೆನ್ನು ವಾಗ, ಇಡೀ ಜಗತ್ತೇ ಈಗ ಒಂದು ಹಳ್ಳಿಯಾಗಿದೆ ಎನ್ನುವಾಗ, ಸ್ವದೇಶಿ– ವಿದೇಶಿವಾದಕ್ಕೆ ಬೆಲೆಯೇ ಇಲ್ಲದಂತಾಗಿದೆ ಜಾಗತೀಕರಣದಿಂದ, ಜಾಗತಿಕ

ವಾಣಿಜ್ಯ ಮಂಡಲಿಯಿಂದ, ಪೇಟೆಂಟ್ ವಂಚನೆಗಳಿಂದ, ಸಿಟಿಬಿಟಿಯಿಂದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಮುಂದಿನ ಶತಮಾನದಲ್ಲಿ ಏನೇನಪಾಯ ಕಾದಿದೆಯೊ ಯಾರೂ ಹೇಳಲಾರರು.

ಜಾತಿಮತ ಮೌಢ್ಯಗಳ ಭಾರವನ್ನು, ನಿರಕ್ಷರತೆ ಸಾಮಾಜಿಕ ರೋಗರುಜಿನಗಳ ಹೊರೆಯನ್ನು, ಭ್ರಷ್ಟಾಚಾರದ ಅರ್ಬುದ ವ್ರಣವನ್ನು ಹೊತ್ತುಕೊಂಡೇ ಭಾರತೀಯರು ನೂತನ ಸಹಸ್ರಮಾನವನ್ನು ಪ್ರವೇಶಿಸುತ್ತಿರುವುದು ದೊಡ್ಡ ದೌರ್ಭಾಗ್ಯ. ಭಾರತೀಯರ ಸರ್ವಕ್ಷೇಮಾಭ್ಯುದಯಗಳಿಗೆ ಪೂರ್ವೋಕ್ತ ಲೋಪದೋಷಗಳಿಂದ ಮುಕ್ತಗೊಂಡ ವಾತಾವರಣದ ಜತೆಗೆ ಕಾಯಕವೇ ರಾಜಮಾರ್ಗ ; ಅದೊಂದೇ ಸತ್ಯ ಹಾಗೂ ನಿತ್ಯ. ಮುಂದಿನ ಶತಮಾನದಲ್ಲಿ ತಾಯಿ ಭಾರತಿ ಅಂಥ ಸತ್ಯದ ಕಡೆಗೆ, ಪುಣ್ಯದ ಕಡೆಗೆ ಭಾರತೀಯರನ್ನು ಮುನ್ನಡಸಲೆಂದು ಪುಸ್ತಕ ಪ್ರಪಂಚ ಪ್ರಾರ್ಥಿಸುತ್ತದೆ.

ಜಯ್ ಜಗತ್! ಜಯ್ ಹಿಂದ್! ಜಯ್ ಕರ್ನಾಟಕ!

ಒರಿಸ್ಸಾ ಹಾಗೂ ಭಾರತೀಯರ ಮಾನವೀಯತೆ

ನರನೀಚತೆ ರೂಕ್ಷತೆ ಬರ್ಬರತೆಗಳ ಪರಿಣಾಮವೊ ಎನ್ನುವಂತೆ ಪ್ರಕೃತಿ ಆಗಾಗ್ಗೆ ಅಗ್ನಿಮುಖಿಯಾಗಿ ರಕ್ತನಖಿಯಾಗಿ ಮಹಾಮಾರಿಯಾಗಿ ಪ್ರಲಯಶಿಖಿಯಾಗಿ ಸೇಡು ತೀರಿಸಿಕೊಳ್ಳುತ್ತಾಳೆ. ಇದಕ್ಕೆ ಸ್ವಲ್ಪ ಕಾಲದ ಹಿಂದೆ ಲಾಟೂರಿನಲ್ಲಿ ನಡೆದ ಭೂಕಂಪರೂಪದ ಮಾರಿಗುಣಿತ, ೧೯೯೯ ರ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಒರಿಸ್ಸಾವನ್ನು ಮುಕ್ಕಿಕೊಂಡ ಕ್ರೂರ ಪ್ರಚಂಡ ಮಾರುತ ಮೃತ್ಯು ಸಾಕ್ಷಿಗಳಾಗಿವೆ. ಬಂಗಾಳ ಕೊಲ್ಲಿಯಲ್ಲಿ ಮೃತ್ಯು ದೇವತೆಯ ಕೋಲಾಹಲವೆಂಬಂತೆ ಜಗಿದೆದ್ದ ಮಹಾ ಜಂಝಾನಿಲ ೨೬೦ ಕಿ. ಮಿ. ವೇಗದಲ್ಲಿ ಕರಾವಳಿಯನ್ನಪ್ಪಳಿಸುತ್ತದೆ. ಹನ್ನೊಂದು ಜಿಲ್ಲೆಗಳು ಆ ರುದ್ರತಾಂಡವಕ್ಕೆ ಆಹುತಿಯಾಗುತ್ತವೆ. ಮನೆಮಠ ಬೆಳೆಗಳನ್ನು, ಸಹಸ್ರ ಸಹಸ್ರ ಬಂಧು ಮಿತ್ರರನ್ನು, ಮಕ್ಕಳು ಮರಿಗಳನ್ನು, ಲಕ್ಷಾಂತರ ಜಾನುವಾರುಗಳನ್ನು ಕಳೆದುಕೊಂಡ, ಎಪ್ಪತ್ತೈದು ಲಕ್ಷ ಜನರ ಜೀವನ ಅಸ್ತವ್ಯಸ್ತವಾಗಿದೆ. ಅವರಿಗೆ ಇರಲು ಸೂರಿಲ್ಲ, ತಿನ್ನಲು ಕುಡಿಯಲು ಅನ್ನ ನೀರುಗಳಿಲ್ಲ, ಹೊದೆಯಲು ಬಟ್ಟೆಯಿಲ್ಲ. ಸಾಯದೆ ಉಳಿದಿರುವವರು ಸಹ ತಾವೇಕೆ ಬದುಕಿರಬೇಕೆಂದು ಯೋಚಿಸುವಂತಾಗಿದೆ. ಸಂಪರ್ಕ ಸಾರಿಗೆ ವ್ಯವಸ್ಥೆಗಳೆಲ್ಲ ಹಾಳಾಗಿವೆ. ಸಾಂಕ್ರಾಮಿಕ ರೋಗಗಳಿಂದಲೇ ಹಲವು ಜನ ಸಮಾಧಿ ಕಾಣುತ್ತಾರೆ. ಅದೊಂದು ಜಲಪ್ರಲಯ, ರಾಷ್ಟ್ರೀಯ ದುರಂತ. ಪ್ರಕೃತಿ ಮುನಿದರೆ ಮಾನವನನ್ನು ಯಾವ ಶಕ್ತಿಯೂ ಪೊರೆಯಲಾರದೆಂಬುದಕ್ಕೆ ಅನ್ಯ ಸಾಕ್ಷಿ ಅನಾವಶ್ಯಕ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ

ಜಗತ್ತಿನ ಹಲವು ಧಾರ್ಮಿಕ ಸಂಸ್ಥೆಗಳು ಯಥಾಶಕ್ತಿಯಾಗಿ ನಾನಾ ರೀತಿಯಲ್ಲಿ ನೆರವು ನೀಡುತ್ತಿವೆ, ನಿಜ. ಆ ನೆರವುಗಳೆಲ್ಲ ರಾವಣನ ಹೊಟ್ಟೆಗೆ ಒಂದು ಲೋಟ ಮಜ್ಜಿಗೆ ಎರೆದಂತಾಗಿದೆ; ಹೆಗ್ಗಣದ ಬಿಲಗಳಿರುವ ಗದ್ದೆಗೆ ನೀರು ಕಟ್ಟಿದಂತಾಗಿದೆ.

ಪತ್ರಿಕಾ ವರದಿಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾದರೆ, ಒರಿಸ್ಸಾ ಸರ್ಕಾರ ಹೊರಗಿನಿಂದ ಹರಿದುಬರುತ್ತಿರುವ ನೆರವನ್ನು ಸಮರ್ಥವಾಗಿ ಬಳಸುತ್ತಿಲ್ಲವೆನಿಸುತ್ತದೆ. ನೀತಿ ಶೀಲ ಮಾನವೀಯತೆ ಇಲ್ಲದ ಅಧಿಕಾರಿಗಳಿಗೆ,ವ್ಯಾಪಾರಸ್ತರಿಗೆ, ದಳ್ಳಾಳಿಗಳಿಗೆ, ಸುಲಿಗೆಗಾರರಿಗೆ ಸಾಕಷ್ಟು ಬಾಚಿಕೊಳ್ಳಲು ಇದೇ ಸುಸಮಯವೆಂದು ತೋರುತ್ತದೆ. ದೇಶದಲ್ಲಿ ಇಂಥ ಕ್ರೂರ ಸನ್ನಿವೇಶಗಳು ಆಗಾಗ್ಗೆ ಒದಗುತ್ತಿರಲೆಂದು ನಾಡಿನ ಶಕ್ತಿದೇವತೆಗಳನ್ನವರು ಅತ್ಯಂತ ಶ್ರದ್ಧೆಯಿಂದ ಪೂಜಿಸುತ್ತಾರೆ.

ಇಂಥ ಸಂದರ್ಭಗಳಲ್ಲಿ ಭಾರತೀಯರ ಮಾನವೀಯತೆಯ ಪರೀಕ್ಷೆಯೂ ನಡೆಯುತ್ತದೆ. ಪ್ರತಿಯೊಬ್ಬ ಪ್ರಜೆಯೂ ಕೈಲಾದಷ್ಟು ಸಂತ್ರಸ್ತ ಪರಿಹಾರ ನಿಧಿಗೆ ದೇಣಿಗೆ ಕೊಡಬೇಕಾದ್ದು ಧರ್ಮ. ಕೊಡಲಿಲ್ಲ, ಅದಕ್ಕಿಂತ ಮಿಗಿಲಾದ ದೇಶದ್ರೋಹ ಮತ್ತೊಂದಿಲ್ಲ. ದೇಶದ ಯಾವ ಮೂಲೆಯಲ್ಲಿ ಸಂಕಟವುಂಟಾದರೂ, ತನಗೆ ತನ್ನ ಕುಟುಂಬಕ್ಕೊದಗಿದ ವಿಪತ್ತೆಂದೇ ಭಾವಿಸಿ ಎಲ್ಲರೂ ಸಕ್ರಿಯವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿದಾಗ, ಶ್ರೀಮಂತರು ಧಾರಾಳವಾಗಿ ಧನ ಸಮರ್ಪಣೆ ಮಾಡಿದಾಗ, ತೊಂದರೆಗೀಡಾದ ಭಾಗ ಬಹುಬೇಗ ಚೇತರಿಕೊಳ್ಳುತ್ತದೆ. ಯಾವೊಂದು ಅಂಗಕ್ಕೆ ರೋಗ ತಗುಲಿದರೂ ಇಡೀ ದೇಹವೇ ಸಂಕಟವನ್ನನುಭವಿಸಬೇಕಾಗುತ್ತದೆ. ಅಂತೆಯೇ ಯಾವೊಂದು ಪ್ರದೇಶವೂ ದುರ್ಬಲವಾದರೂ ಇಡೀ ದೇಶವೇ ರೋಗಗ್ರಸ್ತವಾಗುತ್ತದೆ. ಸುತ್ತಮುತ್ತಣವರೆಲ್ಲ ಕೂಡಿಕೊಂಡು ಆರಿಸದಿದ್ದರೆ ನೆರೆಮನೆಯ ಬೆಂಕಿ ಎಲ್ಲ ಮನೆಗಳನ್ನು ಕಬಳಿಸುತ್ತದೆ. ಇಡೀ ದೇಶ ಇಚ್ಛಿಸಿದ್ದಾದರೆ, ಆರು ತಿಂಗಳಲ್ಲಿ ಒರಿಸ್ಸಾವನ್ನು ಸುಸ್ಥಿತಿಗೆ ತರಬಹುದು. ಮಾನವೀಯತೆಯೇ ನಿಜವಾದ ಧರ್ಮ ಹಾಗೂ ಸಂಸ್ಕೃತಿಯೆಂಬುದನ್ನು ರಾಷ್ಟ್ರಕ್ಕೆ ವಿಪತ್ತೊದಗಿದಾಗ ತಾವೆಲ್ಲರೂ ಸರ್ವಭೇದಗಳನ್ನು ಮರೆತು, ಪ್ರಾಣದ ಹಂಗು ತೊರೆದು, ಒಮ್ಮನಸ್ಸಿನಿಂದ ಸರ್ವತ್ಯಾಗಕ್ಕೂ ಸಿದ್ಧರಾಗಿರುವ ಸಂಶಪಥವನ್ನು ಭಾರತೀಯರು ಮುಂದಿನ ಶತಮಾನಕ್ಕೆ ಪದಾರ್ಪಣೆ ಮಾಡುವ ಸಂದರ್ಭದಲ್ಲಿ ಪ್ರದರ್ಶಿಸಬೇಕಾಗಿದೆ.

ದೇಜಗೌ

ನೆರಡಿ ರೋಗ

ಡಾ|| ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ
ಬಾಗಲಕೋಟೆ ೫೮೭ ೧೦೧

ನೆರಡಿ ರೋಗದ ಇಂಗ್ಲಿಷ್ ಹೆಸರು ಆ್ಯಂಥ್ರಾಕ್ಸ್. ಇದು ಬ್ಯಾಕ್ಟೀರಿಯಾದಿಂದ ಬರುವುದು. ಈ ಬ್ಯಾಕ್ಟೀರಿಯಾದ ಹೆಸರು ಬ್ಯಾಸಿಲೆಸ್ ಆಂಥ್ರಾಸಿಸ್. ಹದಿನೆಂಟು–ಹತ್ತೊಂಬತ್ತನೆಯ ಶತಮಾನದಲ್ಲಿ ಈ ನೆರಡಿ ಕುರಿಗಳನ್ನು ಕೊಲ್ಲುವ ರೋಗಗಳಲ್ಲಿ ಪ್ರಮುಖ ರೋಗವಾಗಿತ್ತು. ಒಂದು ರೀತಿಯಿಂದ ಈ ರೋಗ ಕೊಲ್ಲುವ ಮುಖ್ಯ ಸೇನಾಪತಿಯಾಗಿತ್ತು. ರಾಬರ್ಟ್ ಕಾಕ್ ಹಾಗೂ ಲೂಯಿ ಪಾಶ್ಚರರ ಸಂಶೋಧನೆಗಳು ಬೆಳಕಿಗೆ ಬಂದ ಮೇಲೆ ಸಂಪೂರ್ಣ ನಿಯಂತ್ರಣದಲ್ಲಿ ಬಂದಿತು. ಮುಂದುವರೆದ ದೇಶಗಳಲ್ಲಿ ಹೇಳ ಹೆಸರಿಲ್ಲದಂತೆ ಅಡಗಿ ಹೋಗಿದೆ, ನಿರ್ಮೂಲವಾಗಿದೆ. ಆದರೆ ಭಾರತದಲ್ಲಿ ಈ ರೋಗ ಆಗೊಮ್ಮೆ ಈಗೊಮ್ಮೆ ತಲೆ ಎತ್ತುತ್ತದೆ. ಗಾಬರಿ ಹುಟ್ಟಿಸುತ್ತದೆ. ಮತ್ತೆ ತನ್ನ ತಲೆಯನ್ನು ಕಾಣದಂತೆ ಹುದುಗಿಸಿಕೊಳ್ಳುತ್ತದೆ.

'ಆ್ಯಂಥ್ರಾಕ್ಸ್' ಪದದ ಸರಳ ಅರ್ಥ ಇದ್ದಲು. ಮಾನವ ಚರ್ಮದಲ್ಲಿ ಈ ರೋಗ ಒಂದು ಹುಣ್ಣಿನಂತೆ ಕಾಣುತ್ತದೆ. ಇದು ನೋಡಲು ಇದ್ದಲಿನಂತೆ ಕಪ್ಪಗೆ ಕಾಣುವುದು. ಕಾರಣವೇ ರೋಗಕ್ಕೆ 'ಇದ್ದಲು ಹುಣ್ಣು' ಎನ್ನಬೇಕಾಯಿತು. ಇದೇ ಆ್ಯಂಥಾಕ್ಸ್.

ಈಗಾಗಲೇ ಹೇಳಿದಂತೆ ಇದೊಂದು ಸೋಂಕು ರೋಗ. ಇದು ಬ್ಯಾಕ್ಟೀರಿಯಾದಿಂದ ಹರಡುತ್ತದೆ. ಆಧುನಿಕ ಜಗತ್ತಿಗೆ ಮೊತ್ತಮೊದಲು ಗೊತ್ತಾದ ಸೋಂಕು ರೋಗವಿದು. ಇದನ್ನು ಪ್ರಯೋಗಗಳಿಂದ ಖಚಿತಪಡಿಸಿ ಇಡೀ ಜಗತ್ತಿನ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದವನು ರಾಬರ್ಟ್ ಕಾಕ್ ಎಂಬ ಹಳ್ಳಿಯ ವೈದ್ಯ. ರಾಬರ್ಟ್‌ಕಾಕ್‌ನಿಗಿಂತ ಮೊದಲು ಹಲವಾರು ವಿಜ್ಞಾನಿಗಳು ಸಾಹಸಮಯ ಪ್ರಯೋಗಮಾಡಿದ್ದರು. ಒಂದಿಲ್ಲೊಂದು ಪ್ರಮೇಯಗಳನ್ನು ಎದುರಿಸಲಾರದೇ ಸೋತಿದ್ದರು. ರಾಬರ್ಟ್‌ಕಾಕ್‌ನ ಜಿಗುಟುತನ, ಚುರುಕು ಬುದ್ಧಿಗಳು ಯಶಸ್ಸಿನಮಾಲೆ ಅವನ ಕೊರಳಿಗೆ ಬೀಳುವಂತೆ ಮಾಡಿದುವು. ಅವನ ಯಶಸ್ಸಿನಿಂದ ಇಡೀ ಜಗತ್ತೇ ಆಶ್ಚರ್ಯದಲ್ಲಿ ಮುಳುಗಿತು. ರೋಗ ಬರುವ ಕಾರಣ ತಿಳಿಯಿತು. ರೋಗ ಬರಿಸುವ ರೋಗಾಣುವಿನ ಪತ್ತೆಯಾಯಿತು. ಆದರೆ ಪ್ರಾಣಿಗಳನ್ನು ಈ ರೋಗದಿಂದ

ರಕ್ಷಿಸುವ ಬಗೆ, ವಿಧಾನ ಗೊತ್ತಿರಲಿಲ್ಲ. ಈ ಸುಮಾರಿಗೆ ಲೂಯಿ ಪಾಶ್ಚರ್ ಕೋಳಿಗಳಿಗೆ ಬರುತ್ತಿದ್ದ ಕಾಲರಾ ರೋಗ ತಡೆಯಲು ಒಂದು ಲಸಿಕೆ ತಯಾರಿಸಿದ್ದ. ಮದ್ಯ ಹಾಳಾಗುತ್ತಿದ್ದುದರ ಕಾರಣ ಕಂಡು ಹಿಡಿದು ಮದ್ಯ ತಯಾರಕರನ್ನು ಹಾನಿಯಿಂದ ತಪ್ಪಿಸಿದ್ದ. ಈ ಎರಡೂ ಸಾಧನೆಗಳು ಲೂಯಿಗೆ ಪ್ರಸಿದ್ಧಿ ಹಾಗೂ ಐಶ್ವರ್ಯ ತಂದಿದ್ದವು. ಕಾರಣವೇ ಫ್ರಾನ್ಸ್ ಹಾಗೂ ಜರ್ಮನ್ ದೇಶಗಳ ಕುರುಬರು ಲೂಯಿಗೆ ವಿನಂತಿ ಸಲ್ಲಿಸಿ. ತಮ್ಮ ಕುರಿಗಳನ್ನು ನೆರಡಿ ರೋಗದಿಂದ ರಕ್ಷಿಸಬೇಕೆಂದು ಪ್ರಾರ್ಥಿಸಿದರು. ಲೂಯಿ ಪಾಶ್ಚರ್ ತನ್ನ ಪ್ರಯೋಗಗಳನ್ನು ನಡೆಸಿದ್ದ. ಕೊನೆಗೆ ಒಂದು ದಿನ ಅವನು ಹೊಸ ಲಸಿಕೆ ತಯಾರಿಸಿದ. ಈ ಲಸಿಕೆ ಕುರಿಗಳನ್ನು ಸಂರಕ್ಷಿಸುತ್ತದೆ ಎಂಬುದನ್ನು ಕಂಡುಕೊಂಡ. ಈ ಸಂಗತಿಯನ್ನು ಪ್ರಸಿದ್ಧಿಸಿದ. ಜನರು ಸಂತೋಷದಿಂದ ಅವನಿಗೆ ಜಯಕಾರ ಹಾಕಿದರು. ಅವನ ಪ್ರಸಿದ್ಧಿ ಬಹಳ ಹೆಚ್ಚಾಯಿತು. ಇದು ಜರ್ಮನಿಯವರಿಗೆ ಅಪಥ್ಯವಾಯಿತು. ಅವರು ಅವನ ಸಾಧನೆಯನ್ನು ಪ್ರಶ್ನಿಸಿದರು. ತಮ್ಮ ಎದುರಿಗೆ ಅದನ್ನು ಸಿದ್ಧಪಡಿಸಲು ಆಹ್ವಾನ ಇತ್ತರು. ಇದಕ್ಕೊಂದು ಊರು (ಪೌಲಿ ಲೆಪೊರ್ಟ್) ಹಾಗೂ ವೇಳೆ ನಿರ್ಧರಿಸಲ್ಪಟ್ಟವು. ಪ್ರಯೋಗ ಊರ ಹೊರಗಿನ ಬಯಲಲ್ಲಿ ನಡೆಯಬೇಕು. ಜರ್ಮನಿಯಿಂದ ರಾಬರ್ಟ್ ಕಾಕ್‌ನ ಅನುಯಾಯಿಗಳು ಪರೀಕ್ಷರೆಂದು ನಿಂತರು.

ಲೂಯಿ ಪಾಶ್ಚರನ ಅನುಯಾಯಿಗಳು ತಮ್ಮ ಲಸಿಕೆ ತಂದರು. ಪ್ರಯೋಗ ಮಾಡಿದರು. ಲಸಿಕೆ ಉಪಚಾರ ಹೊಂದಿದ ಎಲ್ಲ ಕುರಿಗಳು ಬದುಕಿ ಉಳಿದುವು. ಲಸಿಕೆ ಉಪಚಾರ ಪಡೆಯದ ಕುರಿಗಳೆಲ್ಲವೂ ಸತ್ತು ಹೋದವು. ಇದು ಲೂಯಿಯ ಬಹು ದೊಡ್ಡ ವಿಜಯವೆನಿಸಿತು. ರಾಬರ್ಟ್ ಕಾಕ್ ಹಾಗೂ ಜರ್ಮನಿಯ ವಿಜ್ಞಾನಿಗಳು ಸೋತರು. ಈ ಪ್ರಯೋಗ ನಡೆದದ್ದು ೧೮೮೧ ರಲ್ಲಿ. ಆಮೇಲೆ ಯೂರೋಪ್ ದೇಶದ ಎಲ್ಲ ಕುರುಬರು ಲೂಯಿಯ ತಂತ್ರದಿಂದ ತಮ್ಮ ಕುರಿಗಳಿಗೆ ಲಸಿಕೆ ಉಪಚಾರ ಮಾಡಿಸಿದರು. ಕುರಿಗಳು ನೆರಡಿ ರೋಗದಿಂದ ಸಾಯುವುದು ನಿಂತುಹೋಯಿತು. ಕುರುಬರಿಗೆ ದೊಡ್ಡ ಲಾಭವಾಯಿತು. ಅವರು ಲೂಯಿಗೆ ಸನ್ಮಾನ ಮಾಡಿದರು. ದೊಡ್ಡ ಬಹುಮಾನ ಕೊಟ್ಟರು. ಮನುಷ್ಯರಲ್ಲಿ ನೆರಡಿ ರೋಗ ಬರುವುದು ಕ್ವಚಿತ. ಬಂದರೆ ಅದು ಅವನಿಗೆ ಪ್ರಾಣಿಗಳ ಸಂಪರ್ಕದಿಂದ ಬರಬೇಕು. ಅದು ಮೂರು ವಿಧಗಳಲ್ಲಿ ಕಾಣುತ್ತದೆ.

೧. ತ್ವಚೆಯ ಮಾರ್ಗದಿಂದ : ಕುರಿಗಳ ಉಣ್ಣೆಯನ್ನು, ಚರ್ಮವನ್ನು ಎತ್ತಿ ಹಾಕುವಾಗ ಚಿಕ್ಕ ಪುಟ್ಟ ಗಾಯಗಳು ಆಗುವುದು ಸಹಜ. ಇಂಥ ಉಣ್ಣೆ ಅಥವಾ ಚರ್ಮ ನೆರಡಿ ರೋಗಾಣುವಿನಿಂದ ಕಶ್ಮಲಗೊಂಡಿದ್ದರೆ ಗಾಯಗಳಲ್ಲಿ ಈ ಸೂಕ್ಷ್ಮಾಣು ಸೇರಿ ಅಲ್ಲಿ ಒಂದು ಹುಣ್ಣು ಹುಟ್ಟುವುದು.

೨. ಎರಡನೆಯದಾಗಿ ಈ ರೋಗಾಣು ಆಹಾರದ ಮೂಲಕ ಅನ್ನ ಮಾರ್ಗದಲ್ಲಿ ಸೇರುವುದು. ಕುರಿಗಳಲ್ಲಿ ರೋಗ ಪ್ರಸಾರವಾಗುವುದು ಈ ಮಾರ್ಗದಿಂದಲೇ. ಅವು ನೆಲದ ಮೇಲಿನ ಹುಲ್ಲನ್ನು ತಿನ್ನುವಾಗ ಹುಲ್ಲಿನ ಮೇಲೆ ರೋಗಿ ಪ್ರಾಣಿ ವಿಸರ್ಜಿಸಿದ

ಹಿಕ್ಕೆಗಳಲ್ಲಿಯ ರೋಗಾಣುವನ್ನು ತಿಂದು ಬಿಡುತ್ತವೆ. ಮನುಷ್ಯರಲ್ಲಿ ಇಂಥ ಪ್ರಮೇಯ ಸಾಧ್ಯವಿಲ್ಲ. ಆದರೆ ನಮ್ಮ ಆದಿವಾಸಿಗಳಲ್ಲಿ ಸತ್ತ ಪ್ರಾಣಿಯ ಮಾಂಸ ತಿನ್ನುವ ಪದ್ಧತಿ ಇದೆ. ರೋಗದಿಂದ ಬಳಲುತ್ತಿದ್ದ ಪ್ರಾಣಿಗಳ ಮಾಂಸ, ಯಕೃತ್ ಹಾಗೂ ಪ್ಲೀಹಗಳು ರೋಗಾಣುವಿನಿಂದ ತುಂಬಿರುತ್ತವೆ, ಕಾರಣ ಭಾರತದಲ್ಲಿ ಮಾನವನಿಗೆ ಈ ಮಾರ್ಗದಿಂದಲೂ ಸೋಂಕು ಸಾಧ್ಯ.

೩. ಮೂರನೆಯ ಮಾರ್ಗವೆಂದರೆ ರೋಗಾಣು ಹವೆಯ ಮೂಲಕ ಶ್ವಾಸ ಮಾರ್ಗ ಸೇರುವುದು. ಉಣ್ಣೆಯನ್ನು ಹಿಂಜುವ ಕಾರ್ಯ ಮಾಡುವವರಲ್ಲಿ ಈ ರೋಗ ಬರುವುದು. ಪುಪ್ಪುಸಗಳು ಗಾಯಗೊಂಡು ತೀವ್ರತಮ ರೋಗ ಕಾಣುವುದು. ಸುಮಾರಾಗಿ ಇದು ಮರಣಾಂತಿಕವಾಗಿರುತ್ತದೆ.

ಮೊದಲು ಕ್ಷೌರ ಮಾಡಿಸಿಕೊಳ್ಳುವ ಬ್ರಶ್‌ಗಳನ್ನು ಪ್ರಾಣಿಗಳ ಕೂದಲುಗಳಿಂದ ತಯಾರಿಸುತ್ತಿದ್ದರು. ಆಕಸ್ಮಾತ್ತಾಗಿ ಈ ಕೂದಲು ನೆರಡಿ ರೋಗಾಣುವಿನಿಂದ ಕಶ್ಮಲಗೊಂಡಿದ್ದರಿಂದ ರೋಗದ ಸೋಂಕು ತಗುಲಿ ಮುಖದ ಮೇಲೆ ಹುಣ್ಣು ಹುಟ್ಟುತ್ತಿತ್ತು. ಈಗ ಕೃತಕ ಕೂದಲಿನ ಬ್ರಶ್ ಬಳಕೆಗೆ ಬಂದು ಅಂಥ ರೋಗ ಕಾಣಲಾರದು. ಮನುಷ್ಯರಲ್ಲಿ ರೋಗ ಕೇವಲ ಚರ್ಮಕ್ಕೆ ಸೀಮಿತವಾಗಿದ್ದರೆ ಜೀವದ ಭಯವಿಲ್ಲ. ಪೆನ್ಸಿಲಿನ್ ಮದ್ದಿನಿಂದ ಗುಣವಾಗುವುದು. ಒಂದು ವೇಳೆ ರೋಗ ಅನ್ನಮಾರ್ಗ ಅಥವಾ ಶ್ವಾಸಮಾರ್ಗ ಹಿಡಿದು ರಕ್ತದಲ್ಲಿ ಸೇರಿದರೆ ಜೀವ ಅಪಾಯದ ಸೆಳವಿನಲ್ಲಿ ಸಿಕ್ಕಂತೆಯೇ. ಬೇಗನೆ ಯಾವ ಔಷಧಕ್ಕೂ ಮಣಿಯದು.

ಹೆಗ್ಗಡದೇವನಕೋಟೆಯ ಕೆಂಚನಹಳ್ಳಿಯ ಆದಿವಾಸಿಗಳು ಮರಣಿಸಿದ್ದ ಸತ್ತ ದನಗಳ ಮಾಂಸ ಸೇವಿಸಿ ಅವರಿಗೆ ಬರುವ ರೋಗಲಕ್ಷಣಗಳು ಉಳಿದ ಹಲವಾರು ರೋಗಗಳಿಗೂ ಸಾಮಾನ್ಯವಾಗಿ ರೋಗ ನಿಧಾನ ಗಲಿಬಿಲಿಗೊಳ್ಳುತ್ತದೆ.

ಪ್ರಸ್ತುತ ಘಟನೆಯಲ್ಲಿಯ ಸಮಸ್ಯೆಗಳೆಂದರೆ ಸತ್ತ ದನಗಳೆಷ್ಟು? ಅವು ಸಾಯುವ ಮುಂಚೆ ಯಾವ ಸ್ಥಳದಲ್ಲಿ ಮೇಯುತ್ತಿದ್ದವು? ಎಲ್ಲಿ ಎಲ್ಲಿ ಅವುಗಳ ಜೊಲ್ಲು, ಸೆಗಣಿ ಬೀಳುತ್ತಿತ್ತೋ ಆ ಸ್ಥಳಗಳಲ್ಲಿ ಅಸಂಖ್ಯ ರೋಗಾಣುಗಳು ಇರಲಿಕ್ಕೆ ಸಾಕು. ಇಂಥ ಸ್ಥಳಕ್ಕೆ ಮೇಯಲು ಬರುವ ಬೇರೆ ಪ್ರಾಣಿಗಳಿಗೆ ರೋಗ ತಗಲುವುದು ನಿಶ್ಚಿತ. ಇದನ್ನು ತಪ್ಪಿಸಬೇಕು. ರೋಗಾಣುಗಳಿಂದ ಹುಟ್ಟುವ ಬೀಜ ಜೀವಿಗಳು ನಿಸರ್ಗದಲ್ಲಿ ಹಲವು ವರ್ಷಗಳವರೆಗೆ ಸಜೀವವಾಗಿ ಉಳಿಯುತ್ತವೆ. ಇದು ಬಹಳ ಹಾನಿಕಾರಕ.

ಹೆಗ್ಗಡದೇವನಕೋಟೆಯ ಅರಣ್ಯದಲ್ಲಿ ವಿಚಿತ್ರ ಮರಣ ಹೊಂದಿದ ಆನೆಗಳೂ ಬಹುಶಃ ನೆರಡಿಯಿಂದಲೇ ಸತ್ತಿರಲು ಸಾಕು. ಅವುಗಳ ಮರಣದ ಮೇಲೆ ತೆರೆ ಎಳೆದು ಮುಚ್ಚುವುದನ್ನು ಬಿಟ್ಟು ಮುಕ್ತವಾಗಿ ಹಲವು ಸಲ ಪರೀಕ್ಷಿಸಿ ಖಚಿತಪಡಿಸಬೇಕು.

ಪ್ರಾಣಿಗಳಿಗೆ ಉಪಯೋಗಿಸಲ್ಪಡುವ ಲಸಿಕೆ ಮಾನವರಿಗೆ ಯುಕ್ತವಿಲ್ಲ. ಮಾನವರ ರೋಗ ನಿಯಂತ್ರಿಸುವುದು ಅವರಿಗೆ

ಕೊಡುವ ಮಾಹಿತಿಯ ಮೇಲೆ ಹಾಗೂ ಅವರ ವಾತಾವರಣದ ಮೇಲೆ,

ನೆರಡಿ ರೋಗವನ್ನು ನಾವು ನಮ್ಮ ದೇಶದಿಂದ ನಿರ್ಮೂಲ ಮಾಡಿಲ್ಲ. ಆಗೊಮ್ಮೆ ಈಗೊಮ್ಮೆ ಈ ರೋಗ ತಲೆ ಎತ್ತುತ್ತಲೇ ಇರುವುದು. ಹುಲ್ಲುಗಾವಲುಗಳಲ್ಲಿ ಅರಣ್ಯದಲ್ಲಿ ಈ ರೋಗ ಆಟವಾಡುತ್ತಲೇ ಇದೆ. ಒಂದು ಸಲ ಸಿರಸಿಯ ಅರಣ್ಯ, ಇನ್ನೊಂದು ಸಲ ಹಳಿಯಾಳದ ಅರಣ್ಯ ಈ ಸಲ ಹೆಗ್ಗಡದೇವನಕೋಟೆಯ ಹುಲ್ಲುಗಾವಲು. ಈ ರೀತಿ ರೋಗ ಸುಳಿದಾಡುತ್ತಲೇ ಇದೆ.



ಅಹಿಂಸೆ

ಅಹಿಂಸೆ ಅತುಚ್ಚ ಭಾವನೆಯಿಂದ ಕೂಡಿದುದು. ಇದು ಧೈರ್ಯಶಾಲಿಗಳ ಅಸ್ತ್ರವೇ ಹೊರತು, ಹೇಡಿಗಳಿಗಲ್ಲ.

ಅಹಿಂಸೆ ಘಾಸಿ ಮಾಡುವ ಅಥವಾ ಕೊಲ್ಲುವ ಮನೋಭಾವವನ್ನು ಮೂಲೋತ್ಪಾಟನೆ ಮಾಡುತ್ತದೆ.

ಅಹಿಂಸೆ ವಿಶ್ವದ ಮೂಲತತ್ವಗಳಲ್ಲಿ ಒಂದು ಅದನ್ನು ಯಾವ ಶಕ್ತಿಯೂ ಅಳಿಸಿ ಹಾಕಲಾಗುವುದಿಲ್ಲ.

ನಿಜವಾದ ಅಹಿಂಸೆ ಮನುಷ್ಯನನ್ನು ಎಲ್ಲಾ ವಿಧವಾದ ಕೆಟ್ಟ ಮನೋಭಿಪ್ರಾಯಗಳಿಂದ ಮತ್ತು ಕೋಪದಿಂದ ಮುಕ್ತಿಗೊಳಿಸುತ್ತದೆ.

—ಗಾಂಧೀಜಿ

ಮಲೇರಿಯಾದಿಂದ ಮಾರಣಹೋಮ

ಡಾ|| ಮಲಕರೆಡ್ಡಿ ಅವರಿಗೆ ಮೊದಲು ಸವಾಲು

ಡಾ|| ಸ. ಜ. ನಾಗಲೋಟಿಮಠ

ಮಸರಕಲ್ಲು ಎಂಬುದು ಒಂದು ಚಿಕ್ಕ ಹಳ್ಳಿ. ರಾಯಚೂರ ಜಿಲ್ಲೆಯ ಹಾಲೂರಿನಲ್ಲಿ ಅಕ್ಟೋಬರ್ ತಿಂಗಳ ಮೂರನೇ ವಾರದಲ್ಲಿ ಆ ಹಳ್ಳಿಯ ಖಾಜಾಸಾಬ ಎಂಬ ಬಡವ ಸತ್ತನು. ಮರಣದ ಕಾರಣ ಮಲೇರಿಯಾ ಜ್ವರ. ಸುದ್ದಿ ಪತ್ರಿಕೆಗಳಲ್ಲಿ ಬಂದದ್ದು ಖಾಜಾಸಾಬ ಒಬ್ಬನೇ ಸತ್ತನೆಂದು. ಆ ಹಳ್ಳಿಯಲ್ಲಿ ೨೫೦ ಜನರು ಮಲೇರಿಯಾ ರೋಗದಿಂದ ಮಲಗಿದ್ದಾರಂತೆ. ಅಂದರೆ ಪ್ರತಿ ಕುಟುಂಬದಲ್ಲಿ ಒಬ್ಬರಿಗಿಂತ ಜಾಸ್ತಿ ಜನ ಬಳಲುತ್ತಿರುವರು. ಆ ಊರಿನ ಸ್ಥಿತಿ ಚಿಂತಾಜನಕವೆಂದೇ ಅನ್ನಬೇಕು.

ಹಾಗಾದರೆ ಆ ಊರಿನ ಪ್ರತಿ ಕುಟುಂಬ ಎಷ್ಟು ಸೊಳ್ಳೆಗಳನ್ನು ಸಾಕಿರಬಹುದು ? ಆ ಊರಿನಲ್ಲಿ ಸಾರ್ವಜನಿಕ ಸೊಳ್ಳೆಗಳು ಎಷ್ಟಿರಬಹುದು ? ಇಂಥ ಸೊಳ್ಳೆಗಳ ದೇಹದಲ್ಲಿ ಬೆಳೆಯುತ್ತಿರುವ ಮಲೇರಿಯಾ ಪರಾವಲಂಬಿ ಜೀವಿಗಳು ಅಸಂಖ್ಯ. ಒಂದು ರೀತಿಯಿಂದ ಮಸರಕಲ್ಲು ಹಳ್ಳಿಯ ವಾತಾವರಣವು ಮಲೇರಿಯಾ ರೋಗಾಣುಗಳಿಂದ ತುಂಬಿದೆ. ರೋಗವು ಇಷ್ಟು ಸಮೃದ್ಧವಾಗಿ ಬೆಳೆಯಬೇಕಾದರೆ ಊರಿನ ನಿರ್ಮಲತೆ ಹೇಗಿರಬೇಕು ? ಹೆಜ್ಜೆ ಹೆಜ್ಜೆಗೆ ಕೊಳಚೆ ಗುಂಡಿಗಳಿರಬೇಕು. ಸುತ್ತಲಿನ ಗಟಾರಗಳಲ್ಲಿ ನೀರು ನಿಂತಿರಬೇಕು. ಗುಂಗಾಡುಗಳು ಲಕ್ಷ ಸಂಖ್ಯೆಯಲ್ಲಿ ಬೆಳೆಯುತ್ತಿರಬೇಕು. ಒಂದು ರೀತಿಯಿಂದ ಮಸರಕಲ್ಲು ಗುಂಗಾಡುಗಳ ಸಾಮ್ರಾಜ್ಯವೆಂದು ಹೇಳಬೇಕು. ಮಾನವರು ಅಲ್ಲಿ ಇದ್ದದ್ದು ಪರದೇಶದವರಂತೆ.

ಈ ಸೊಳ್ಳೆಗಳು ಸುಖವಾಗಿ ಇದ್ದಂತೆ ಕಂಡರೂ ನಿಜವಾಗಿ ಸುಖವಾಗಿಲ್ಲ. ಮಾನವರಂತೆ ಸೊಳ್ಳೆಗಳು ಮಲೇರಿಯಾದಿಂದ ಬಳಲುತ್ತಿವೆ. ಮಲೇರಿಯೊದಿಂದ ಸೊಳ್ಳೆಗಳಿಗೆ ಗಂಟಲುನೋವು, ಗಂಟಲು ತಡೆ, ವಾಂತಿ ಆಗುತ್ತದೆ. ಅವುಗಳ ಶಕ್ತಿ ಕುಂದುತ್ತದೆ. ಸೊಳ್ಳೆಯ ದೇಹದ ಅಂಗಾಂಶಗಳ ಸತ್ವ ಹೀರಿಕೊಂಡು ಮಲೇರಿಯಾ ಪರಾವಲಂಬಿ ಬೆಳೆಯುತ್ತದೆ.

ಮನುಷ್ಯರು ಹಾಗೂ ಸೊಳ್ಳೆಗಳೆರಡೂ ಮಲೇರಿಯಾದಿಂದ ಬಳಲುತ್ತವೆ. ಮರಣ ಹೊಂದುತ್ತವೆ. ಮಲೇರಿಯಾ ಪರಾವಲಂಬಿಗಳನ್ನು ಪಡೆದ ಸೊಳ್ಳೆ ರಕ್ತವನ್ನು ಹೀರಬೇಕೆಂದರೆ ಗಂಟಲಲ್ಲಿ ಮಲೇರಿಯಾ ಜೀವಿಗಳು ಅಡ್ಡಿಪಡಿಸುತ್ತವೆ. ತಮ್ಮ ಗುಂಪನ್ನು ಮಾನವನ ದೇಹದಲ್ಲಿ ಸೇರಿಸಬೇಕು ಎಂಬ ಹಟ ಅವುಗಳದು. ಸೊಳ್ಳೆ ಅವುಗಳ ಹಟದ ಮುಂದೆ ಸೋತು ಕೆಮ್ಮಿ ಕೇಕರಿಸಿ ಮಲೇರಿಯಾ ಪರಾವಲಂಬಿಗಳ ಉಂಡೆ ಮಾಡಿ ಮಾನವನ ರಕ್ತದಲ್ಲಿ ಉಗುಳುತ್ತವೆ. ಅನೇಕ ಸಲ ವಾಂತಿ ಮಾಡಿಕೊಳ್ಳುತ್ತವೆ. ಕಫದಲ್ಲಿ ಹಾಗೂ ವಾಂತಿಯಲ್ಲಿದ್ದ ಮಲೇರಿಯಾ

ಪರಾವಲಂಬಿಗಳು ದೇಹ ಸೇರಿ ಮಾನವರಿಗೆ ಮಲೇರಿಯಾ ತರುವುವು.

ಮಲೇರಿಯಾ ರೋಗ ಒಂದೊಂದು ಸಲ ಮಿದುಳನ್ನು ಹಿಡಿಯುತ್ತದೆ. ಕೆಲವೊಮ್ಮೆ ಕರಳನ್ನು ಹಿಡಿಯುತ್ತದೆ. ಇಂಥ ಪ್ರಸಂಗಗಳಲ್ಲಿ ಮಾನವರು ಸಾಯುತ್ತಾರೆ. ಕ್ವಚಿತ್ತಾಗಿ ರಕ್ತವೆಲ್ಲ ನೀರಾಗಿ ಮೂತ್ರ ಕರಿಬಣ್ಣ ಪಡೆಯುವುದು. ಈ ದಾರಿಯೂ ಮಾನವನನ್ನು ಮೃತ್ಯು ಮಾರ್ಗದಲ್ಲಿ ನಡೆಸುವುದು.

ಭಾರತಕ್ಕೆ ಇದೇನೂ ಹೊಸತಲ್ಲ ಬೆಳಕಿಗೆ ಬಂದದ್ದು ಮುಸರಕಲ್ಲು ಒಂದೇ ಹಳ್ಳಿ. ಅಂಥ ಎಷ್ಟು ಹಳ್ಳಿಗಳು ಇವೆಯೋ ಅಂದಾಜಿಸಲಾಗದು. ಮಲೇರಿಯಾ ರೋಗದಿಂದ ಏಡ್ಸ್ ರೋಗಕ್ಕಿಂತ ನೂರು ಪಟ್ಟು ಜನರು ಸಾಯುತ್ತಲಿದ್ದಾರೆ. ಏಡ್ಸ್ ಹಣವಂತರ ರೋಗ, ಸೊಕ್ಕು ಹೆಚ್ಚಿದವರ ರೋಗ. ಹಾಗೂ ಆಮಂತ್ರಿತ ರೋಗ. ಆದರೆ ಮಲೇರಿಯಾ ಬಡವರ ರೋಗ. ಆಮಂತ್ರಿಸದೇ ಬರುವ ರೋಗ. ಬೇಗನೆ ಕೊಲ್ಲುವ ರೋಗ. ಮಲೇರಿಯಾ ಗುಡಿಸಲುಗಳಲ್ಲಿ ಅಡಗಿಕೊಳ್ಳುವ ರೋಗ. ಏಡ್ಸ್ ಶ್ರೀಮಂತರ ಬಂಗಲೆಗಳಲ್ಲಿ ಸುಳಿದಾಡುವ ರೋಗ.

ಮಲೇರಿಯಾ ರೋಗಕ್ಕೆ ಉತ್ತಮ ಮದ್ದುಗಳಿವೆ. ಉಪಚಾರ ಸರಳ ಹಾಗೂ ಸುಲಭ. ಇಷ್ಟೆಲ್ಲ ಇದ್ದರೂ ಈ ರೋಗ ಭಾರತದಲ್ಲಿ ಉಳಿದಿರುವುದು ಯಾಕೆ? ಮಲೇರಿಯಾ ಭಾರತೀಯ ವೈದ್ಯರಿಗೊಂದು ಕುಂದು. ಮಲೇರಿಯಾ ಮರಣಗಳು ಭಾರತೀಯ ವೈದ್ಯಕೀಯ ವ್ಯವಸ್ಥೆಗೆ, ಅದರ ಕ್ರಿಯಾಹೀನತೆಗೆ ಕರಿ ಪ್ರಮಾಣ ಪತ್ರ. ಜಗತ್ತಿನ ಇತರ ದೇಶಗಳು ನಮ್ಮನ್ನು ನೋಡಿ ನಗುವಂತಾಗಿದೆ. ಸಾರ್ವಜನಿಕ ವೈದ್ಯಕೀಯ ವಿಭಾಗದವರ ಸೋಮಾರಿತನಕ್ಕೆ ಮಲೇರಿಯಾ ಒಂದು ಉದಾಹರಣೆ. ಸಂಬಳ ಹೆಚ್ಚಿಸಿರೆಂದು ಸಂಪು ಮಾಡುವ ಈ ವೈದ್ಯ ಅಧಿಕಾರಿಗಳು ನಾಡಿನ ಆರೋಗ್ಯ ಕಾಪಾಡಲು ಮುಂದಾಗುವರೇ ? ಯಾರು ಸವಾಲನ್ನು ಎದುರಿಸಬೇಕು ?

ಕರ್ನಾಟಕ ರಾಜ್ಯಕ್ಕೆ ಹೊಸ ಮಂತ್ರಿ ಮಂಡಲ ಬಂದಿದೆ. ಸಂತೋಷದ ಸಂಗತಿ ಎಂದರೆ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳು ವೈದ್ಯರು. ಅವರೇ ಡಾ|| ಮಲಕರೆಡ್ಡಿ. ಅವರು ಒಳ್ಳೆಯ ವಿದ್ಯಾರ್ಥಿ ಎಂದೂ ಒಳ್ಳೆಯ ಶಿಕ್ಷಕರೆಂದೂ ಒಳ್ಳೆಯ ವೈದ್ಯರೆಂದೂ ಆಡಳಿತಗಾರರೆಂದೂ ಹೆಸರು ಪಡೆದವರು. ಒಳ್ಳೆಯ ಸಂಶೋಧಕರೂ ಹೌದು. ಇಂಥವರಿಗೆ ಮಲೇರಿಯಾ ಸವಾಲು ಎಸೆದಿದೆ. ಜಂಗುಗಟ್ಟಿದ ಸಾರ್ವಜನಿಕ ವೈದ್ಯಕೀಯ ವಿಭಾಗವನ್ನು ಅವರು ಸರಿಪಡಿಸಬೇಕಾಗಿದೆ. ಅಧಿಕಾರಿಗಳ ಸೇವೆ ಸರಿಯಾಗಿ ನಡೆಯುವಂತೆ ಮಾಡಬೇಕಾಗಿದೆ. ಅದಕ್ಷತೆ ಮರೆಯಾಗಿ ದಕ್ಷತೆ ಬರಬೇಕಾಗಿದೆ. ಇದು ಜರುಗಿದಾಗ ಮಾತ್ರ ಬಡವರಿಗೆ, ಹಳ್ಳಿಗಳಲ್ಲಿ ವಾಸಿಸುವವರಿಗೆ ಆರೋಗ್ಯ ಸಿಗಬಹುದು. ಈ ಸಾಹಸದಲ್ಲಿ ಡಾ|| ಮಲಕರೆಡ್ಡಿ ಅವರಿಗೆ ಯಶ ಸಿಗಲೆಂದು ಹಾರೈಸೋಣ.

ಕರ್ನಾಟಕಕ್ಕೂ ಕಾಲಿಟ್ಟ ಇಲಿ ಜ್ವರ

ಡಾ|| ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿ
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ ೫೮೭೨೦೧, ಬಾಗಲಕೋಟೆ

ದೇರಳಕಟ್ಟೆಯ ಲೋಕು ಕೂಲಿನಾಲಿ ಮಾಡಿಕೊಂಡು ಬದುಕಿದ್ದ. ಮೈಕೈ ನೋವು, ಸುಸ್ತುಗಳು ಅವನ ಸುತ್ತಗಸ್ತು ಹೊಡೆದವು. ಜ್ವರಕ್ಕೆ ತುತ್ತಾದ. ಊರಲ್ಲಿಯ ಪಂಡಿತರಲ್ಲಿಗೆ ಬಂದ. ಅವರು ಕೊಟ್ಟ ಕಷಾಯಿಯನ್ನು ಕುಡಿದ. ಕಡಿಮೆಯಾಗಲಿಲ್ಲ. ಐದಾರು ಚುಚ್ಚುಮದ್ದುಗಳನ್ನು ತನ್ನ ಹಳ್ಳಿಗೆ ಬರುತ್ತಿದ್ದ ಜೊಗಳೆ ವೈದ್ಯರಿಂದ ಪಡೆದ. ಜ್ವರ ಇನ್ನೂ ಜಾಸ್ತಿ ಆಯಿತು. ಕ್ಲಿನಿಕ್‌ಗಳ ಕಟ್ಟೆ ಹತ್ತಿದ. ಮಲೇರಿಯಾದ ತವರೂರಿನವನಾದ್ದರಿಂದ ಅದರ ಚಿಕಿತ್ಸೆಯನ್ನು ನೀಡಿದರು. ಫಲಪ್ರದವಾಗಲಿಲ್ಲ. ಟೈಫಾಯ್ಡ್ ಇರಬಹುದೆಂದು ವೈದ್ಯರು ಶಂಕಿಸಿದರು. ಮಾರುಕಟ್ಟೆಯಲ್ಲಿರುವ ಬ್ರಹ್ಮಾಸ್ತ್ರಗಳನ್ನು ಲೋಕುನ ಮೇಲೆ ಬಳಸಿದರು. ಜ್ವರ ನಿಯಂತ್ರಣಕ್ಕೆ ಬರಲಿಲ್ಲ. ಹತ್ತಾರುಪರೀಕ್ಷೆಗಳಿಗೆ ಒಳಗಾದ. ಅಶಕ್ತಿಯ ಆಗರವಾದ. ವೈದ್ಯರು ಲೋಕುನ ಕುರಿತು ಚರ್ಚಿಸಿದರು. ವೈದ್ಯಕೀಯ ಆಕರ ಗ್ರಂಥಗಳ ಪುಟಗಳನ್ನು ತಿರುವಿ ಹಾಕಿದರು. ಮತ್ತೆ ಲೋಕುನ ರಕ್ತನಾಳಕ್ಕೆ ಸೂಜಿ ಚುಚ್ಚಿದರು. ರಕ್ತ ಸಂಗ್ರಹಿಸಿದರು. ಕೆ.ಎಂ.ಸಿ. ಮಣಿಪಾಲಕ್ಕೆ ಕಳಿಸಿಕೊಟ್ಟರು.

....ವರದಿಗಳು ಬಂದಾಗ ವೈದ್ಯರ ಹುಬ್ಬು ಗಂಟಿಕ್ಕಿದವು. ಹಣೆಯಲ್ಲಿ ಅಚ್ಚರಿಯ ಗೆರೆಗಳು ನಿಚ್ಚಳವಾದವು. ಲೋಕು 'ಇಲಿಜ್ವರ' ಎಂಬ ರೋಗಕ್ಕೆ ತುತ್ತಾಗಿದ್ದ. ವರದಿ ವೈದ್ಯರ ಕೈಸೇರುವ ಹೊತ್ತಿಗೆ ಲೋಕು ಅಂತಿಮಯಾತ್ರೆ ಮುಗಿಸಿದ್ದ. ಸುರತ್ಕಲ್ ಸುತ್ತುಮುತ್ತಲಿನ ಖಾಸಗಿ ವೈದ್ಯರು, ಸರಕಾರಿ ಆಡಳಿತ ಯಂತ್ರಕ್ಕೆ ಕೂಗಿ ಹೇಳಿದರು. ಅದು ಯಾರ ಕಿವಿಯ ತಮ್ಮಟೆಯನ್ನೂ ತಟ್ಟಲಿಲ್ಲ. ಚುನಾವಣೆಯ ಗದ್ದಲದಲ್ಲಿ ಸುದ್ದಿಯೂ ಆಗಲಿಲ್ಲ.

ದಿನಗಳು ಉರುಳಿದವು. ಇಂಥ ಪ್ರಕರಣಗಳು ಅಲ್ಲಿ ಇಲ್ಲಿ ಕಾಣಿಸಿಕೊಳ್ಳ ಹತ್ತಿದವು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಎಚ್ಚೆತ್ತುಕೊಳ್ಳುವ ಹೊತ್ತಿಗೆ ಕೃಷ್ಣಾಪುರ, ಕಿನ್ನಿಗೋಳಿ, ಜೇಳ್ಯಾರು, ಕಾಜಿಪಾಳ್ಯ, ಕುಳಾಯಿ, ಬೈಕಂಪಾಡಿ, ಬಾಳ, ಪಡ್ರೆ, ಕುತ್ತೆತ್ತೂರು, ಮುಲ್ಕಿ, ತಡುಬೈಲು, ಕೊಲ್ನಾಡು, ಬಪ್ಪನಾಡು, ಕಮ್ರಾಲುಗಳನ್ನು ಇಲಿಜ್ವರ ಆವರಿಸಿತು; ಅಧಿಕೃತವಾಗಿ ೨೭ ಪ್ರಕರಣಗಳು ದಾಖಲಾಗಿದ್ದವು.

ಇಬ್ಬರ ಪ್ರಾಣಪಕ್ಷಿ ಹಾರಿಹೋಗಿದ್ದವು. "ಇದು ವಾಸ್ತವ ಸ್ಥಿತಿಯಲ್ಲ. ರೋಗದ ಹಾವಳಿಯು ಹರವು ಇನ್ನೂ ಹೆಚ್ಚಿದೆ. ದಾಖಲಾಗದೇ ಇರುವ ಪ್ರಕರಣಗಳೇ ಸಾಕಷ್ಟಿವೆ. ಹೀಗಾಗಿ ಈ ಅಂಕಿ ಸಂಖ್ಯೆ ಮಂಜುಗಡ್ಡೆಯ ಮೇಲ್ನೋಟ ಮಾತ್ರ ಎನ್ನುತ್ತದೆ ಮಣಿಪಾಲ ಕೆ.ಎಂ.ಸಿ.ಯ ಸಮುದಾಯ ಆರೋಗ್ಯ ವಿಭಾಗ.

ಐದು ವರ್ಷಗಳ ಹಿಂದೆ ಸೂರತ್‌ದಲ್ಲಿ ಕಾಣಿಸಿಕೊಂಡ ಪ್ಲೇಗ್ ಜ್ವರವೇ ಇದೀಗ ಸುರತ್ಕಲ್ ಸುತ್ತಮುತ್ತ ಕಾಣಿಸಿಕೊಂಡಿದೆ ಎಂದು ಜನಸಾಮಾನ್ಯರು ಭಯಗೊಂಡಿದ್ದರು. ಪ್ಲೇಗ್ ಮತ್ತು ಇಲಿಜ್ವರ ಎರಡಕ್ಕೂ ಇಲಿ ಮೂಲವಾಗಿರುವುದೇ ಸಾಮಾನ್ಯ ಜನರು ಭಯಪಡುವುದಕ್ಕೆ ಕಾರಣ. ಆದರೆ, ಈ ಕಳವಳ, ಆತಂಕ ಅನಾವಶ್ಯಕ. ಯಾಕೆಂದರೆ ಈ ರೋಗ 'ಇಲಿಜ್ವರ' ಎಂದು ಕರೆಯಲ್ಪಟ್ಟರೂ, ಇದು ಬೇರೆ ಪ್ರಾಣಿಗಳ ಮೂಲಕವೂ ಬರಬಹುದು. ಇಲಿಯನ್ನು ಹೊರತುಪಡಿಸಿ, ಇತರ ಪ್ರಾಣಿಗಳಲ್ಲಿ ರೋಗವು ತೀವ್ರ ಬಂಧಿವಾಗಿದ್ದಾಗಲೇ ಮನುಷ್ಯರಿಗೆ ಹರಡುವುದು. ಆದರೆ ಇಲಿ ರೋಗವನ್ನು ಹರಡುತ್ತದೆಯೇ ವಿನಃ ಅದು ರೋಗದಿಂದ ಎಂದೂ ಬಳಲುವುದಿಲ್ಲ.

ಇದರ ವಿಶೇಷತೆ

ಇಲಿಜ್ವರ ಅಥವಾ ವೇಲ್ಸ್‌ರೋಗ ತಮಿಳುನಾಡು, ಮಹಾರಾಷ್ಟ್ರ, ಅಂಡಮಾನ್ ಹಾಗೂ ಕೇರಳದಲ್ಲಿ ಅರವತ್ತರ ದಶಕದಿಂದಲೇ ಕಣ್ಣು ಮುಚ್ಚಾಲೆ ಆಡುತ್ತಲೇ ಇತ್ತು. ಆದರೆ ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಸುತ್ತಮುತ್ತ ಮೊಟ್ಟಮೊದಲು ಬಾರಿಗೆ ಕಾಣಿಸಿಕೊಂಡು ಕರ್ನಾಟಕದಲ್ಲೂ ಕಾಲಿಟ್ಟಂತಾಗಿದೆ.

ರೋಗಕಾರಕ

ಮಾನವರಿಗೆ ಹಬ್ಬುವ ಈ ರೋಗವನ್ನು ೧೮೮೬ರಲ್ಲಿಯೇ ವೆಲ್ಸ್ ಎಂಬ ವಿಜ್ಞಾನಿ ಪತ್ತೆಹಚ್ಚಿದರೂ, ರೋಗಕಾರಕದ ಗುಟ್ಟು ರಟ್ಟಾದದ್ದು ೧೯೧೫ರಲ್ಲಿ. ಸ್ಪೈರೋಕೀಟ ಸಮುದಾಯಕ್ಕೆ ಸೇರಿದ ಈ ರೋಗಾಣುವಿನ ಹೆಸರು ಲೆಪ್ಟೋಸ್ಪೈರಾ ಇಕ್ಟರ್ ಹೆಮೊರೇಜಿಕಾ. ಇವು ೬ ರಿಂದ ೧೦ ಮೈಕ್ರಾನ್ ಉದ್ದವಿದ್ದು, ೦.೧ ಮೈಕ್ರಾನ್ ದಪ್ಪವಿರುತ್ತವೆ. (೧ ಮೈಕ್ರಾನ್= ೧/೧೦೦೦ ಮಿ.ಮೀ.) ದೇಹ ಸ್ಪ್ರಿಂಗಿನಂತೆ ಸುರಳಿ ಸುರಳಿಯಾಗಿ ಸುತ್ತಿಕೊಂಡಿದ್ದು, ಅವುಗಳ ಎರಡೂ ತುದಿಗಳು ಕೊಡೆಯ ಹಿಡಿಯಂತೆ ಬಾಗಿಕೊಂಡಿರುತ್ತವೆ.

ರೋಗ ಪ್ರಸಾರ

ಇಲಿಜ್ವರಕ್ಕೆ ಕಾರಣವಾಗಿರುವ ರೋಗಕಾರಕ ಲೆಪ್ಟೋಸ್ಪೈರಾ ಇಕ್ಟರ್ ಹೆಮೊರೆಜಿಕಾ ಮನೆಯ ಪರಿಸರದಲ್ಲಿಯ ಇಲಿ, ಕಾಡಲ್ಲಿ ಓಡಾಡಿಕೊಂಡಿರುವ ಇಲಿ, ಹೆಗ್ಗಣ, ಬೆಕ್ಕು, ನಾಯಿ, ನರಿ, ತೋಳ ಮುಂತಾದ ಕಾಡು ಪ್ರಾಣಿಗಳ ದೇಹದಲ್ಲಿ ಇರುತ್ತವೆ. ಸೋಂಕು ಹೊಂದಿರುವ ಇಂತಹ ಪ್ರಾಣಿಗಳು ವಿಸರ್ಜಿಸುವ ಮೂತ್ರದ ಮೂಲಕ ಹೊರಗಿನ ಪರಿಸರಕ್ಕೆ ಪಾದಾರ್ಪಣೆ ಮಾಡುತ್ತವೆ. ಮಳೆಯಾದಾಗ ನೀರಿನಲ್ಲಿ ಬೆರೆಯುತ್ತವೆ. ನೀರನ್ನು ಕಲುಷಿತ

ಗೊಳಿಸುತ್ತವೆ. ಇಂತಹ ಕಲುಷಿತ ನೀರು ಕುಡಿಯುವ ಮೂಲಕವಾಲಿ, ದೇಹದಲ್ಲಿಯ ಗಾಯಗಳ ಮೂಲಕವಾಗಲಿ ಮಾನವರ ದೇಹವನ್ನು ಸೇರಿದಾಗ ರೋಗಾಣುಗಳ ಉಡುಗೊರೆ ದೊರೆಯುತ್ತದೆ. ಮೂಗು, ಕಣ್ಣುಗಳ, ಒಳಭಾಗದ ಮೂಲಕವೂ ರೋಗಾಣುಗಳು ದೇಹ ಸೇರುವ ಸಾಧ್ಯತೆ ಇದೆಯೆಂದು ಇತ್ತೀಚಿನ ಸಮೀಕ್ಷೆಗಳು ಸಾದರಪಡಿಸಿವೆ.

ರೋಗದ ಲಕ್ಷಣಗಳು

ರೋಗಾಣುಗಳು ದೇಹ ಸೇರಿದಕೂಡಲೇ ಶೀತಲ ಸಮರ ಪ್ರಾರಂಭವಾಗುವುದು. ವ್ಯಕ್ತಿಯ ರೋಗನಿರೋಧಕ ಶಕ್ತಿ ಕಡಿಮೆ ಯಿದ್ದಲ್ಲಿ ರೋಗಾಣುಗಳು ಜಯಶಾಲಿ ಯಾಗುವವು. ಸಂಭ್ರಮದಿಂದ ವಿಜಯೋ-ತ್ಸವ ಆಚರಿಸುವವು. ಪರಿಣಾಮವಾಗಿ ರೋಗದ ಲಕ್ಷಣಗಳು ವ್ಯಕ್ತಿಯಲ್ಲಿ ಕಾಣಿಸಿ ಕೊಳ್ಳುವವು. ರೋಗಾಣುಗಳು ವ್ಯಕ್ತಿಯ ದೇಹ ಸೇರಿದ ತಕ್ಷಣ ರೋಗದ ಲಕ್ಷಣಗಳು ಹೊರಹೊಮ್ಮುವುದಿಲ್ಲ. ೪ ರಿಂದ ೧೯ ದಿನ ಗಳಲ್ಲಿ ರೋಗದ ಲಕ್ಷಣಗಳು ಕಾಣಿಸಿ ಕೊಳ್ಳುವವು. ಇದಕ್ಕೆ ರೋಗದ 'ಕುಮುಲು ಕಾಲ' ಎನ್ನುವರು.

ಸುಸ್ತು, ಆಲಸ್ಯತನ ಅಪ್ಪಿಕೊಳ್ಳುವವು, ಮೈಕೈನೋವು, ಸಂದು ಸಂದುಗಳಲ್ಲಿ ನೋವು ಕಾಣಿಸಿಕೊಳ್ಳಬಹುದು. ವಿಪರೀತ ತಲೆನೋವಿನ ಕಾಟಕ್ಕೆ ನೆಮ್ಮದಿಯ ನೆಲೆ ತಪ್ಪಬಹುದು. ಜ್ವರ, ಮಾಂಸಖಂಡಗಳಲ್ಲಿ ಸೆಳೆತ ಕಾಣುವುದು. ಈ ಹಂತದಲ್ಲಿ ರೋಗಿ ಮಲೇರಿಯಾದಿಂದಲೋ, ವಿಷಮ ಜ್ವರ ದಿಂದಲೋ ಬಳಲುತ್ತಿರಬಹುದೆಂದು ವೈದ್ಯರು ಗ್ರಹಿಸುವುದು ಸರ್ವೇಸಾಮಾನ್ಯ. ಆ ನಿಟ್ಟಿನಲ್ಲಿಯೇ ಚಿಕಿತ್ಸೆಯನ್ನು ನೀಡಿದಲ್ಲಿ ಅಪಾಯದ ಅಂಚಿಗೆ ರೋಗಿ ಸಾಗಬಹುದು. ಕೆಲವು ರೋಗಿಗಳಲ್ಲಿ ಹಳದಿ ಕಾಮಾಲೆ ಹಣಕಿ ಹಾಕಬಹುದು. ಕೆಮ್ಮು ಬಿಡದೆ ಕಾಡಬಹುದು. ರಕ್ತಕಫ ಕಾಣಿಸಿಕೊಳ್ಳ ಬಹುದು. ಆಗ ರೋಗಿಗಳಿಗೆ ಭಯ, ಆತಂಕಗಳು ಆವರಿಸಿಕೊಳ್ಳಬಹುದು. ಮೂತ್ರಪಿಂಡ ಹಾಗೂ ಹೃದಯಕ್ಕೂ ಸೋಂಕು ಲಗ್ಗೆ ಹಾಕಬಹುದು. ಆಗ ಅವು ಗಳಿಗೆ ಸಂಬಂಧಿಸಿದ ತೊಡಕುತೊಂದರೆಗಳ ಕಾಣಿಕೆ ಸಿಗುವುದು.

ಚಿಕಿತ್ಸೆ

ಶೀಘ್ರರೋಗ ಪತ್ತೆ ಹಾಗೂ ಕ್ರಮಬದ್ಧ ಸೂಕ್ತ ಚಿಕಿತ್ಸೆಯಿಂದ ಕೇವಲ ಐದು ದಿನಗಳೊಳಗೆ ರೋಗಿಯನ್ನು ಸಂಪೂರ್ಣ ವಾಗಿ ಗುಣಪಡಿಸಬಹುದು. ರೋಗಿಗೆ ಚಿಕಿತ್ಸೆ ನೀಡುವಾಗ ಇತರರಿಂದ ಪ್ರತ್ಯೇಕಿ ಸುವ ಅಗತ್ಯವಿಲ್ಲ. ಇದು ರೋಗ ಪೀಡಿತ ವ್ಯಕ್ತಿಯಿಂದ ಇನ್ನೊಬ್ಬ ಆರೋಗ್ಯವಂತನಿಗೆ ಹರಡುವುದಿಲ್ಲ.

ಹೃದಯ, ಶ್ವಾಸಕೋಶ, ಮೂತ್ರಪಿಂಡ ಸೋಂಕು ವಿರಳವಾಗಿದ್ದರೂ, ಅವುಗಳಲ್ಲಿ ಸೋಂಕು ಕಾಣಿಸಿಕೊಂಡಲ್ಲಿ ಅಪಾಯಕ್ಕೆ ಆಹ್ವಾನ ನೀಡಿದಂತೆ ಎಂಬುದನ್ನು ವೈದ್ಯರು ಮರೆಯಬಾರದು. ಇದಕ್ಕೆ ಅವಕಾಶ ನೀಡ ದಂತೆ ಚಿಕಿತ್ಸೆ ನೀಡುವಲ್ಲಿಯೇ ವೈದ್ಯರ ಜಾಣ್ಮೆ ಅಡಗಿದೆ.

ಮುಂಜಾಗ್ರತಾ ಕ್ರಮಗಳು

ಕಲುಷಿತ ನೀರು ರೋಗ ಪ್ರಸಾರದಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ, ನೀರಿನ ಸಂರಕ್ಷಣೆ ಅತೀ ಅಗತ್ಯ. ಸ್ನಾನ ಮತ್ತು ಕುಡಿಯಲು ಬಳಸುವ ನೀರಿನಲ್ಲಿ ಪ್ರಾಣಿಗಳ

ಮೂತ್ರ ಸೇರದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು.

ರೋಗ ಹರಡುವ ರೋಗಾಣುಗಳು ಸಾಕುಪ್ರಾಣಿ ಮತ್ತು ಕಾಡು ಪ್ರಾಣಿಗಳಲ್ಲಿ ಇರುವ ಸಾಧ್ಯತೆ ಇರುವುದರಿಂದ ಒಡ್ಡು, ಕೆರೆ, ಹೊಂಡ ಹಾಗೂ ನಿಂತ ನೀರಿನಲ್ಲಿ ಸ್ನಾನ ಮಾಡಬಾರದು, ಆ ನೀರನ್ನು ಕುಡಿಯಲು ಬಳಸಬಾರದು.

ಕಲುಷಿತ ನೀರಿನಲ್ಲಿ ಹಣ್ಣು ಹಂಪಲು, ತರಕಾರಿ, ತೊಪ್ಪಲು ಪಲ್ಲೆಗಳನ್ನು ತೊಳೆಯಬಾರದು.

ಮನೆ, ಅಂಗಡಿ, ಗೋದಾಮು, ಹೊಲ ಗದ್ದೆಗಳಲ್ಲಿ ಇಲಿಗಳ ಸಂಖ್ಯಾಭಿವೃದ್ಧಿಗೊಳ್ಳದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಸಮಿತಿಯ ಸಕಾಲಿಕ ಸಲಹೆ

ಸುರತ್ಕಲ್ ಸಮೀಪ ಇಲಿಜ್ವರ ಹರಡಲು ಕಾರಣಗಳನ್ನು ಕಂಡುಕೊಳ್ಳಲು ಕೆ.ಎಸ್. ಹೆಗಡೆ ವೈದ್ಯಕೀಯ ಅಕಾಡೆಮಿಯ ಸಮುದಾಯ ಆರೋಗ್ಯ ವಿಭಾಗದ ಡಾ॥ ಬಿ. ಮೊಥಾ, ಡಾ॥ ಸಜ್ಜನ, ಡಾ॥ ಬಿ. ಶ್ರೀನಿವಾಸ ಕಕ್ಕಿಲಾಯ, ಡಾ॥ ರವಿಕಿರಣ, ಡಾ॥ ವಿನಯ ಅವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದ್ದು, ಈ ಸಮಿತಿ ಸುರತ್ಕಲ್, ಕಿನ್ನಿಗೋಳಿ, ಬೈಕಂಪಾಡಿ, ಕುಳಾಯಿ, ಪಡ್ರೆ, ಕುತ್ತೆತ್ತೂರುಗಳಿಗೆ ಭೇಟಿ ನೀಡಿ, ಸೂಕ್ಷ್ಮಾಣು ಮಾಹಿತಿಯನ್ನು ಸಂಗ್ರಹಿಸಿದೆ. ಆಸ್ಪತ್ರೆಗಳಿಗೆ ಭೇಟಿಕೊಟ್ಟು ಅಲ್ಲಿದ್ದ ರೋಗಿಗಳನ್ನು ವಿಚಾರಿಸಿದೆ. ವಿಷಯಗಳನ್ನು ಕಲೆಹಾಕಿದೆ, ವಿಶ್ಲೇಷಿಸಿದೆ. ಪಾವಂಜೆ ದಂಡೆಯ ಮೇಲೆ ಬದುಕುತ್ತಿರುವ ಹಾಗೂ ಆ ನೀರನ್ನು ಬಳಸುತ್ತಿರುವದರಿಂದ ಈ ರೋಗ ಹಬ್ಬುತ್ತಿರಬಹುದು ಎಂಬ ತೀರ್ಮಾನಕ್ಕೆ ಬಂದಿದೆ. ಈ ನೀರನ್ನು ಬಳಸದ ಯಾರಿಗೂ ಈ ರೋಗ ತಗಲಿಲ್ಲ. ನಂಜಿನ ಪಂಜೆ ಪಾವಂಜೆ ನೀರಲ್ಲಿ ಹರಿಯುತ್ತಿದೆ. ಅಂತಿಮ ತೀರ್ಮಾನ ತೆಗೆದುಕೊಳ್ಳುವವರೆಗೆ ಪಾವಂಜೆ ನೀರನ್ನು ಬಳಸದಂತೆ ಸಮಿತಿ ತನ್ನ ಮಧ್ಯಂತರ ವರದಿಯಲ್ಲಿ ಜನರಿಗೆ ಸಲಹೆ ಮಾಡಿದೆ.

ಸುರತ್ಕಲ್ ಸುತ್ತ ಮುತ್ತ ಕಾಣಿಸಿಕೊಂಡಿರುವ ಇಲಿಜ್ವರ ಪತ್ತೆ ಹಚ್ಚಲು ರೋಗಪೀಡಿತ ವ್ಯಕ್ತಿಯ ರಕ್ತ ಪರೀಕ್ಷೆಗೆ ತಗಲುವ ವೆಚ್ಚ ೯೦೦ ರೂ. ಇದು ಬಡವರ ಜೊಕ್ಕಸಕ್ಕೆ ಭಾರವಾದ ಮೊತ್ತವೇ! ಆದರೆ, ಕೆ.ಎಂ.ಸಿ. ಸಂಸ್ಥೆ ಈವರೆಗೆ ಮಾಡಿದಂತಹ ರಕ್ತ ಪರೀಕ್ಷೆಗೆ ಯಾವುದೇ ಶುಲ್ಕ ವಿಧಿಸಿಲ್ಲ. ಸರಕಾರವೂ ಇಂಥ ರಕ್ತ ತಪಾಸಣಾ ಕೇಂದ್ರವನ್ನು ಬೆಂಗಳೂರಿನಿಂದ ತುರ್ತಾಗಿ ಸಂಕಷ್ಟಕ್ಕೆ ಈಡಾದವರ ಸಮೀಪಕ್ಕೆ ಸ್ಥಳಾಂತರಿಸಿ, ಪುಕ್ಕಟೆಯಾಗಿ ರಕ್ತ ತಪಾಸಣೆಮಾಡುವ ವ್ಯವಸ್ಥೆ ಮಾಡಬೇಕು. ಸಾಂಕ್ರಾಮಿಕಗಳು ಕಾಣಿಸಿಕೊಂಡಾಗ ಮಾನಮೂಲಿ ಕಾರ್ಯವಿಧಾನಕ್ಕೆ ವಿದಾಯ ಹೇಳಿ, ಸಮರೋಪಾದಿಯಲ್ಲಿ ಕಾರ್ಯಾಚರಣೆ ಕೈಕೊಳ್ಳಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು, ಸರ್ಕಾರಿ ಕೆಂಪು ಪಟ್ಟಿಯ ವಿಳಂಬವನ್ನು ನಿವಾರಿಸಬೇಕು. ಇಲ್ಲವಾದಲ್ಲಿ ಔಷಧಿಗಳು ಅಗತ್ಯವಿದ್ದವರಿಗೆ ಮುಟ್ಟುವ ವೇಳೆಗೆ ಅನೇಕ ಜೀವಿಗಳ ನಷ್ಟವಾಗಿ 'ಮಾನವೀಯ ದುರಂತ' ಘಟಿಸಿಬಿಡಬಹುದು. ಆರೋಗ್ಯ ಇಲಾಖೆ ಇದನ್ನು ಸವಾಲಾಗಿ ಸ್ವೀಕರಿಸಿ ಕಾರ್ಯೋನ್ಮುಖವಾಗಬೇಕು. ಆಗ ಬತ್ತುವ ಜೀವಿಗಳಲ್ಲೂ ಬೆಳಕು ಕಾಣುವುದು!

ಬೇಬಿ ಸಿಟ್ಟರ್

ಮಾಧವರಾವ್ ಮುಧೋಳ್
'ರಮಾಶ್ರೀ', ೧೧೬೭-ಬಿ-೧
೧ನೇ ಮುಖ್ಯ ರಸ್ತೆ, ೧ನೇ ತಿರುವು
ಶ್ರೀರಾಮಪುರ, ೨ನೇ ಹಂತ
ಮೈಸೂರು-೫೭೦೦೨೩

ಐದು ವರ್ಷಗಳ ತರುವಾಯ ಪಮ್ಮೀ ಅಮೇರಿಕಾಕ್ಕೆ ಹೊರಟಿದ್ದಳು. ಅವಳ ಹೃದಯದಲ್ಲಿ ಅದೆಷ್ಟು ಆತಂಕ ಆಶೆ ಆಕಾಂಕ್ಷೆಗಳು ತುಯ್ದಾಡುತ್ತಿದ್ದವೊ!

ಅವಳಿಂದು ಬಹಳ ಸಂತೋಷದಲ್ಲಿದ್ದಳು. ಪ್ರಾಯಶಃ ಜೀವನದಲ್ಲಿ ಇಷ್ಟು ಸಂತೋಷವನ್ನು ಅವಳು ಎಂದೂ ಕಂಡಿರಲಿಕ್ಕಿಲ್ಲ. ಅವಳ ಮದುವೆಯಾಗಿ ಇನ್ನೂ ಆರು ತಿಂಗಳೂ ಆಗಿರಲಿಲ್ಲ. ಅಮಿರ್‌ಗೆ ಅಮೇರಿಕೆಯಿಂದ ಕರೆ ಬಂದಿತ್ತು. ಅವನ ವೀಸಾ ಸಿದ್ಧವಿತ್ತು. ಕೆಲಸದ ಸಂಬಂಧದಲ್ಲಿ ಅವನು ಅಮೇರಿಕೆಗೆ ಹೊರಟಿದ್ದ. ಹೋಗುವ ಮುನ್ನ ಪಮ್ಮೀಗೆ,

"ಪಮ್ಮೀ! ನಾನು ನಿನ್ನಿಂದ ದೂರ ಅವಶ್ಯ ಹೋಗುತ್ತಿದ್ದೇನೆ. ಆದರೆ ನನ್ನನ್ನು ನೀನು ನಿನ್ನ ಹೃದಯದ ತೀರ ಹತ್ತಿರವೇ ಕಾಣುತ್ತಿರುವೆ. ನೀನೂ ಯಾವಾಗಲೂ ನನ್ನಲ್ಲಿ ಅಂದರೆ ಹೃದಯದಲ್ಲಿರುವೆ" ಎಂದಿದ್ದ.

ಪಮ್ಮೀ ಅತ್ಯಂತ ಪ್ರೇಮದಿಂದ, "ಅಹುದು" ಎಂದು ಸಮ್ಮತಿಸಿದ್ದಳು. ಅವಳ ವಿಶಾಲ ಕಣ್ಣುಗಳು ಅಶ್ರುಗಳಿಂದ ತುಂಬಿದ್ದುವು. ಅಮೀರ್ ತನ್ನ ಬೆರಳಿನ ತುದಿಯಿಂದ ಅವನ್ನು ಒರೆಸಿ,

"ಪೆದ್ದಿ! ಏಕೆ ಕಣ್ಣಲ್ಲಿ ನೀರು? ನೀನೀಗ ಸಂತೋಷದಿಂದಿರಬೇಕು. ನಿನ್ನ ಈ ತಿಳಿಗೇಡಿ ಗಂಡ ತನ್ನ ಉಜ್ವಲ ಭವಿಷ್ಯಕ್ಕಾಗಿ ವಿದೇಶಕ್ಕೆ ಹೊರಟಿದ್ದಾನೆ. ನೀನೇ ನೋಡುತ್ತಿರುವೆಯಲ್ಲ. ಇಲ್ಲಿ ಅದೆಷ್ಟು ಜನ ಪದವಿ ಪಡೆದೂ ಸುಮ್ಮನೆ ಸುತ್ತುತ್ತಿದ್ದಾರೆ. ಆದರೂ ಅವರಿಗೆ ಒಂದು ಒಳ್ಳೆಯ ಕೆಲಸ ಸಿಕ್ಕುತ್ತಿಲ್ಲ. ಗ್ರೀನ್ ಕಾರ್ಡು ನನಗೆ ಸಿಕ್ಕುತ್ತಲೂ ನನ್ನ ಮೊದಲನೆಯ ಕೆಲಸ ನಿನ್ನನ್ನು ಕರೆಸಿಕೊಳ್ಳುವುದು. ಅಕಸ್ಮಾತ್ತಾಗಿ ಸಿಕ್ಕುವುದು ತಡವಾದರೆ, ಟೂರಿಸ್ಟ್ ವೀಸಾದ ಮೇಲೆ ನಿನ್ನನ್ನು ಕರೆಸಿಕೊಳ್ಳುವೆ. ನಿನ್ನನ್ನು ಬಿಟ್ಟಿರಲು ಸಾಧ್ಯವೆ? ಅದು ನನ್ನಿಂದಾಗದ ಮಾತು. ಇದು ನಿನಗೆ ಗೊತ್ತಿಲ್ಲವೆ? ಸಾಕು.

ಶ್ರೀಮತಿ ಅನ್ವರ್‌ನುಜಹತ್‌ರವರ ಉರ್ದು ಕಥೆಯ ಆಧಾರ.

ಈಗ ನೀನು ಸಂತೋಷವಾಗಿರು. ನಗು-ನಗುತ್ತ ನನ್ನನ್ನು ಬೀಳ್ಕೊಡುವ ಸಿದ್ಧತೆ ಮಾಡು" ಎಂದ.

ಆಮಿರ್ ಕೊಟ್ಟ ಆಶ್ವಾಸನೆ ಕೇಳಿ ಷಮ್ಮೀಗೆ ಸಮಾಧಾನವಾಯಿತು. ಲಗ್ನವಾದ ಮೇಲೆ ಈವರೆಗೂ ಅವಳಿಗೆ ಅಲ್ಲದ ಯಾವ ಮಾತನ್ನೂ ಅವನು ಅಂದಿರಲಿಲ್ಲ. ಆಮಿರ್ ಪ್ರತಿ ವಾರ ಕಾಗದ ಬರೆಯುವುದಾಗಿಯೂ ತಿಂಗಳಲ್ಲಿ ಒಂದೆರಡು ಸಲ ಫೋನ್ ಮಾಡುವುದಾಗಿಯೂ ವಚನ ಕೊಟ್ಟ. ಮೊದಮೊದಲು ಹೇಳಿದಂತೆ ಮಾಡಿಯೂ ಮಾಡಿದ. ಆದರೆ ಒಂದು ವರ್ಷದ ಅನಂತರ ಕಾಗದ ಮತ್ತು ಫೋನ್ ಬರುವುದು ಕಡಿಮೆಯಾದುವು.

ಯಾವಾಗಲೂ ತಾನು ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುವುದಾಗಿ ಷಮ್ಮೀಗೆ ಹೇಳಿ ಸಮಾಧಾನ ಪಡಿಸುತ್ತಿದ್ದ.

"ನಿನ್ನ ವೀಸಾದ ಸಲುವಾಗಿ ಅರ್ಜಿ ಸಲ್ಲಿಸಿದ್ದೇನೆ. ಸಿಕ್ಕುತ್ತಲೂ ನಿನ್ನನ್ನು ಕರೆಸಿಕೊಳ್ಳುತ್ತೇನೆ" ಎಂದು ಹೇಳುತ್ತಿದ್ದ.

ಷಮ್ಮೀ ಮಧ್ಯಮ ವರ್ಗದ ಮನೆತನಕ್ಕೆ ಸೇರಿದವಳು. ತಂದೆಯ ಮರಣದನಂತರ ಅವಳ ತಾಯಿ ಅದೆಷ್ಟು ಕಷ್ಟಪಟ್ಟು ಅವಳ ಲಾಲನೆ ಪಾಲನೆ ಮಾಡಿದ್ದಳೊ, ಮಗಳ ಮದುವೆ ಮುಗಿಸಿ ಅವಳು ತೃಪ್ತಿಪಟ್ಟುಕೊಂಡಿದ್ದಳು. ಷಮ್ಮಿಯ ವೀಸಾ ಸಿಕ್ಕುವುದಕ್ಕೆ ತಡವಾದಂತೆಲ್ಲ ಅವಳ ತಾಯಿ ತನ್ನ ಮಗಳಿಗೆ, "ಸಾಧ್ಯವಾದರೆ ನೀನೇ ಸ್ವತಃ ಆಮಿರ್‌ನ ಹತ್ತಿರ ಹೊರಟುಹೋಗು. ಇಲ್ಲಿಂದಾ ಟೂರಿಸ್ಟ ವೀಸಾ ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸು" ಎಂದು ಯಾವಾಗಲು ತಿಳಿ ಹೇಳುತ್ತಿದ್ದಳು.

ಆದರೆ ಷಮ್ಮಿಗೆ ತನ್ನ ಪ್ರೇಮ ಮತ್ತು ಆಮಿರ್‌ನ ವಿಷಯಕ್ಕೆ ದೃಢವಾದ ವಿಶ್ವಾಸವಿತ್ತು. ಅದಕ್ಕೇ ಅವಳು,

"ನಾನು ಹೀಗೇಕೆ ಹೋಗಬೇಕು? ಅವನೇ ನನ್ನನ್ನು ಕರೆಸಿಕೊಳ್ಳುತ್ತಿದ್ದಾನಲ್ಲ" ಎನ್ನುತ್ತಿದ್ದಳು.

ಷಮ್ಮಿಯ ತಾಯಿಯ ಗೆಳತಿ ಒಂದು ದಿವಸ ಮನೆಗೆ ಬಂದರು. ಅವರು ಷಮ್ಮಿಗೆ,

"ಮಗೂ! ನನ್ನ ಈ ಕೂದಲು ಬರೀ ಬಿಸಿಲಿನಲ್ಲಿ ಬೆಳ್ಳಗಾಗಿಲ್ಲ. ಯಾವ ವೀಸಾಕ್ಕೂ ಇಷ್ಟು ದಿವಸ ಬೇಕಾಗುವುದಿಲ್ಲ. ಗಂಡಸರ ಬಗ್ಗೆ ಯಾವ ನಂಬಿಕೆಯೂ ಇಲ್ಲ. ಅವರು ಯಾವಾಗ ಬದಲಾಯಿಸಿಬಿಡುತ್ತಾರೊ ಗೊತ್ತಾಗುವುದಿಲ್ಲ. ಕೆಂಪಗೋ ಕಪ್ಪಗೋ ಇರುವ ಯಾವಳೋ ಅವನ ಕೊರಳಿಗೆ ಬಿದ್ದಿರಬಹುದು. ಅವನು ನಿನ್ನನ್ನು ಮರೆತೂ ಬಿಟ್ಟಿದ್ದಾನು. ಸುಮ್ಮನೆ ಸಮಾಧಾನಕ್ಕಾಗಿ ವೀಸಾ ಸಿಕ್ಕುತ್ತಲೂ ನಿನ್ನನ್ನು ಕರೆಸಿಕೊಳ್ಳುವೆನೆಂದು ಹೇಳುತ್ತಿದ್ದಾನು, ಅದು ಗಂಡಸರ ಜಾತಿ. ಇಷ್ಟು ವರ್ಷ ಹೆಂಗಸನ್ನು ಬಿಟ್ಟು ಅವನಿರಲು ಸಾಧ್ಯವಿಲ್ಲ. ಅವಶ್ಯ ಇದರಲ್ಲಿ ಏನೋ ಮೋಸವಿದೆ" ಎಂದು ಹೇಳಿದಳು.

ಆದರೆ ಈ ಎಲ್ಲ ಮಾತೂ ತಪ್ಪು. ಇದಕ್ಕೆ ತಳಬುಡ ಇರದೆಂದು ಷಮ್ಮಿಗನಿಸಿತು. ಅವಳು ಬರಲಿಕ್ಕೆ ಸ್ವಲ್ಪವೂ ತಡವಾಗಬಾರದೆಂದು ವೀಸಾದ ಜೊತೆಗೆ ಅವಳ ಟಿಕೆಟ್ಟನ್ನೂ ಆಮಿರ್ ಕಳುಹಿಸಿದ್ದ. ಅದಷ್ಟು ಬೇಗ ಷಮ್ಮಿಗೆ ಬರಲು ಕರೆಯುತ್ತಿದ್ದ. ಷಮ್ಮೀ ಇಂದು ಅತ್ಯಂತ ಆನಂದದಲ್ಲಿದ್ದಳು. ಹೆಂಗಸಿನ ಜೊತೆಗೆ ಅವಳ ಸೌಂದರ್ಯವೂ ಗಂಡಸಿಗೆ ಬೇಕಾಗುವುದೆಂದು ಹೊರಡುವ

ಮೊದಲು ಅವಳು ಬ್ಯೂಟೀ ಪಾರ್ಲರಿಗೆ ಹೋದಳು.

ಬ್ಯೂಟೀ ಪಾರ್ಲರ ಒಡತಿಗೆ, "ಆಂಟಿ! ಇವತ್ತು ನಾನು ಅತ್ಯಂತ ಸುಂದರಿಯಾಗಿ ಕಾಣುವಂತೆ ಏನು ಮಾಡಬೇಕಾದ ಎಲ್ಲ ಮೇಕಪ್ ಮಾಡಿ. ನನ್ನ ಅಮಿರ್‌ಗೆ ಈ ಐದು ವರ್ಷದ ಪರಿಣಾಮ ನನ್ನ ಮುಖದ ಮೇಲೂ ಶರೀರದ ಮೇಲೂ ಆದದ್ದು ಕಾಣ ಬಾರದು. ಮೊದಲರಾತ್ರಿಯ ವಧುವಿನಂತೆ ನಾನು ಅವನಿಗೆ ಕಾಣಬೇಕು" ಎಂದು ಕೇಳಿ ಕೊಂಡಳು.

ಅದರಂತೆ ಅವಳು ಮೇಕಪ್ ಮಾಡಿಸಿ ಕೊಂಡಳು. ಅದರಲ್ಲಿಯೇ ಇಡೀ ದಿವಸ ಕಳೆಯಿತು. ಆದರೂ ಅವಳು ಅದಕ್ಕೆ ಲೆಕ್ಕಿಸ ಲಿಲ್ಲ. ಮೇಕಪ್ ಮುಗಿಯುತ್ತಲು ಅವಳು ಏರ್‌ಪೋರ್ಟಿಗೆ ತಲುಪಬೇಕಿತ್ತು. ಇಪ್ಪತ್ತು ಇಪ್ಪತ್ತೆರಡು ಗಂಟೆಗಳ ಪ್ರವಾಸವಿದ್ದುದ ರಿಂದ ಮನೆಗೆಲಸದಲ್ಲಿ ತೊಡಗಿ ಅವಳು ತನ್ನ ಮೇಕಪ್ ಕೆಡಿಸಿಕೊಳ್ಳುವುದಕ್ಕೆ ಮನಸ್ಸು ಮಾಡಲಿಲ್ಲ.

ಎಲ್ಲರಿಂದ ಬೀಳ್ಕೊಂಡ ಅವಳು ಏರ್ ಪೋರ್ಟ್ ತಲುಪಿದಳು. ಅಲ್ಲಿಯ ವಿಧಿ ನಿಯಮಗಳನ್ನು ಮುಗಿಸಿ ವಿಮಾನದಲ್ಲಿ ಕುಳಿತಾಗ ಅವಳ ಮನಸ್ಸಿಗೆ ಶಾಂತಿ ಯಾಗಿತ್ತು.

ವಿಮಾನ ತನ್ನ ಗುರಿಯತ್ತ ವೇಗದಿಂದ ಧಾವಿಸುತ್ತಿತ್ತು. ಷಮ್ಮೀ ತನ್ನ ಯೋಚನೆ ಯಲ್ಲಿ ಮೈಮರೆತಿದ್ದಳು. ಈ ಐದು ವರ್ಷ ದಲ್ಲಿ ಆಮಿರ್ ಹೇಗಾಗಿದ್ದಾನೋ ಎಂದು ಯೋಚಿಸುತ್ತಿದ್ದಳು. ಎಂಥೆಂಥವರ ಸಹವಾಸ ಅವನಿಗೆ ಆಗಿದೆಯೋ ತಿಳಿಯದು. ಎಲ್ಲಿಯಾದರು, ಯಾವುದಾದರು ಹುಡುಗಿಯ ಸಹವಾಸ ಮಾಡಿರಬಾರದು. ಆಂಟಿ ಅಂದು ಅಂದ, "ಗಂಡಸರು ಅದೆಷ್ಟು ಸದಾಚಾರಿ ಗಳಿದ್ದರೂ ಸ್ವೇಚ್ಛೆಯಾಗಿ ಹುಡುಗಿಯರು ಸಿಕ್ಕರೆ, ಅವರ ಸದಾಚಾರ ಅಲ್ಲಿಗೇ ಮುಗಿ ಯಿತು" ಎಂದುದು ನೆನಪಿಗೆ ಬಂದು ಭಯ ದಿಂದ ನಡುಗಿದಳು. ತನ್ನ ತಲೆಯಲ್ಲಿಯ ವಿಚಾರವನ್ನು ಕೊಡಹಿ,

"ಷಮ್ಮೀ! ನೀನು ತುಂಬಾ ನೆನಪಾಗು ತ್ತಿದ್ದೀಯೆ. ಈ ಐದು ವರ್ಷ ನಿನ್ನನ್ನು ಅಗಲಿ ನಾನು ಹೇಗೆ ಕಳೆದೆನೊ ಗೊತ್ತಾಗು ತ್ತಿಲ್ಲ. ನೀನು ಬೇಗ ಬಂದುಬಿಡು. ನಿನ್ನ ನೆನಪೊಂದೇ ನನ್ನ ನೆರಳಾಗಿ ಸದಾ ನನ್ನ ಜೊತೆಗಿರುತ್ತದೆ ಎಂದಿದ್ದ ಆಮಿರ್ ಈಗಲೂ ಪತ್ರದಲ್ಲಿ ಅದನ್ನೇ ಬರೆದಿದ್ದಾನೆ" ಎಂದಳು.

ಈ ವಿಚಾರ ಬರುತ್ತಲೂ ತನ್ನ ಅದೃಷ್ಟಕ್ಕೆ ತಾನೇ ಅಭಿಮಾನ ತಳೆದಳು. ತನ್ನ ಆಮಿರ್ ಬೇರೆಯವರಂತಲ್ಲ. ಗಂಟೆಗಟ್ಟಲೆ ನನ್ನ ಮುಡಿಯನ್ನು ತನ್ನ ಮಡಿಲಲ್ಲಿಟ್ಟುಕೊಂಡು, ನನ್ನ ಚೆಲುವನ್ನು ಹೊಗಳುವುದರಲ್ಲಿ ಅವನು ದಣಿಯುತ್ತಿರಲಿಲ್ಲ. ಒಮ್ಮೊಮ್ಮೆ ನನ್ನ ತುಟಿ ಗಳನ್ನು ಮುಟ್ಟಿ ಕೆಂಪು ಮಾಣಿಕ್ಯವೆಂದೂ ಒಮ್ಮೊಮ್ಮೆ ಗುಲಾಬಿಯ ಪಕಳೆಗಳೆಂದೂ ಒಮ್ಮೊಮ್ಮೆ ಇಂದ್ರಧನುಸ್ಸೆಂದೂ ಎನ್ನು ತ್ತಿದ್ದ. ಒಮ್ಮೊಮ್ಮೆ ನನ್ನ ಕಣ್ಣಲ್ಲಿ ಕಣ್ಣಿಟ್ಟು,

"ಷಮ್ಮೀ! ನಿನ್ನ ಈ ನೀಲಿಯ ಸರೋವರ ಗಳಲ್ಲಿ ನಾನು ಮುಳುಗಿಬಿಟ್ಟಿದ್ದೇನೆ. ಇವು ಗಳಿಂದ ಹೊರಗೆ ಬರುವುದು ಬಹಳ ಕಠಿಣ. ನೀನು ಅಡಿಯಿಂದ ಮುಡಿಯವರೆಗೆ ಅಪ್ಸರೆ ಯಾಗಿರುವೆ. ದೇವರು ನಿನ್ನನ್ನು ನನ ಗಾಗಿಯೇ ಸೃಷ್ಟಿಸಿದ್ದಾನೆ. ದೇವರಾಣೆ,

ನಿನಗೆ ಏನಾದರೂ ಆದರೆ ನಾನಂತೂ ಖಂಡಿತ ಬದುಕಿರುವುದಿಲ್ಲ" ಅನ್ನುತ್ತಿದ್ದ.

ಆಮಿರ್ ಇಷ್ಟೊಂದು ನನ್ನನ್ನು ಪ್ರೀತಿಸಿ, ನನ್ನ ಸೌಂದರ್ಯವನ್ನು ಇಷ್ಟೊಂದು ಹೊಗಳಿದುದರಿಂದ ನಾನು ಅಭಿಮಾನದಿಂದ ಬೀಗುತ್ತಿದ್ದೆ. ಹೌದು! ಗಂಡಸರು ಬಹಳ ರೀತಿಯವರಿರುತ್ತಾರೆ.

ಆಮಿರ್ ಒಬ್ಬ ಮುಗ್ಧ ಮನುಷ್ಯ. ಇಷ್ಟು ವರ್ಷ ಹೊರಗಿದ್ದರೂ ನನ್ನನ್ನು ಅವನು ಮರೆತಿಲ್ಲ. ನನ್ನನ್ನು ಕರೆಸಿಕೊಳ್ಳು ವುದರಲ್ಲಿ ಅದೆಷ್ಟು ಕಷ್ಟಪಟ್ಟಿದ್ದಾನೊ! ಅಮೇರಿಕಾಕ್ಕೆ ವೀಸಾ ಸಿಕ್ಕುವುದು ಅಷ್ಟು ಸರಳವೇನಲ್ಲ.

ಅವಳು ತನ್ನ ಮುಂಗೈ ವಾಚನ್ನು ನೋಡಿ, "ಇನ್ನೂ ಬಹಳ ಹೊತ್ತಿದೆ. ವಿಮಾನದ ಪ್ರವಾಸ ಎಷ್ಟು ಬೇಗ ಮುಗಿಯ ಬೇಕೆಂದರೂ ಮುಗಿಯಲೊಲ್ಲದೆಂದಳು.

ವಿಮಾನ ಬಹಳ ಎತ್ತರದ ಮೇಲೆ ಉಡ್ಡಾಣ ಮಾಡುತ್ತಿತ್ತು. ಅವಳು ಕಿಟಕಿ ಯಿಂದ ಹೊರಗೆ ನೋಡಿದಳು. ಮೇಲೆ ನೀಲಾಕಾಶ. ಕೆಳಗೆ ಬಿಳಿ ಮುಗಿಲುಗಳು. ಅವಳಿಗೆ ಅವು ಪೃಥ್ವಿಯ ಮೇಲೆ ಹರಡಿದ ಹಿಂಜಿದ ಅರಳೆಯ ಗೋಲಗಳಂತೆ. ಮೋಹಕ ವಾಗಿ ಕಂಡುವು. ಮೋಡಗಳು ಇಷ್ಟು ಕೆಳಗಿರುವುದನ್ನು ಕಂಡು ಅವಳಿಗೆ ಆಶ್ಚರ್ಯ ವಾಯಿತು. ಅವಳು ಜೀವನದಲ್ಲಿ ಮೊದಲ ಬಾರಿಗೆ ವಿಮಾನಯಾನ ಮಾಡಿದ್ದಳು. ಅದೂ ಇಪ್ಪತ್ತು ಇಪ್ಪತ್ತೆರಡು ಗಂಟೆಗಳ ಸಮಯದ ಪ್ರವಾಸ. ಆಕಾಶಯಾನದ ಬಗ್ಗೆ ಅವಳಿಗೆ ಕಿಂಚಿತ್ತೂ ಗೊತ್ತಿರಲಿಲ್ಲ. ತನ್ನ ಎದುರಿನ ಸೀಟಿನಲ್ಲಿ ಕುಳಿತಿರುವ ಹಿಂದೀ ಮಾತನಾಡುವ ಜೋಡಿಯೊಂದಿಗೆ ಪರಿಚಯ ಮಾಡಿಕೊಂಡಿದ್ದಳು. ಅವರೂ ನ್ಯೂಯಾರ್ಕಿಗೇ ಹೊರಟಿದ್ದರು. ಅವರು ಆಗಾಗ ಅಲ್ಲಿಗೆ ಹೋಗುತ್ತಿದ್ದುದರಿಂದ ಪ್ರತಿಯೊಂದು ಮಾತನ್ನೂ ಅವರಿಂದಲೇ ಇವಳು ಕೇಳಿ ತಿಳಿದುಕೊಳ್ಳುತ್ತಿದ್ದಳು.

ಇಷ್ಟು ದೊಡ್ಡ ಪ್ರವಾಸ ಬರಿಯ ಸುಮ್ಮನೇ ಕುಳಿತಿರುವುದರಿಂದಾಗಲಿ ಪುಸ್ತಕ ಓದುವುದರಿಂದಾಗಲಿ ಮುಗಿಯು ತ್ತಿರಲಿಲ್ಲ. ಮಾತನಾಡುವುದಕ್ಕೆ ಯಾರಾ ದರೂ ಬೇಕಿತ್ತು. ಅವಳು ಪುಸ್ತಕ ಓದಿ ಓದಿ ದಣಿದಿದ್ದಳು. ಎಷ್ಟಾದರೂ ಹೊತ್ತು ಹೋಗುತ್ತಲೇ ಇರಲಿಲ್ಲ.

ಅವಳು ಆಮಿರ್‌ನ ಯೋಚನೆಯಲ್ಲಿ ಮಗ್ನಳಾದಾಗ ಕಣ್ಣುಗಳು ನಿದ್ರೆಯ ಮಂಪರಿನಿಂದ ಮುಚ್ಚಿಕೊಂಡವು. ಆಗ ಆಮಿರ್ ಬಹಳ ಸುಂದರವಾದ ಬಂಗ್ಲೆ ಯಲ್ಲಿದ್ದಾನೆ. ಆ ಬಂಗ್ಲೆಯ ಸುತ್ತಮುತ್ತ ಹೂವುಗಳಿವೆ. ಆ ಸ್ಥಳ ಅತ್ಯಂತ ಸುಂದರ ವಾಗಿದೆ. ಬಂಗ್ಲೆ ಅರಮನೆಯಂತೆ ಸುಂದರ ವಾಗಿ ಅಲಂಕೃತವಾಗಿದೆ. ಅದರಲ್ಲಿ ಬಹು ಮುದ್ದಾದ ಎರಡು ಮಕ್ಕಳು ಆಟವಾಡು ತ್ತಿವೆ. ಸಮ್ಮೀ ಆಮಿರ್‌ನನ್ನು, "ಈ ಮಕ್ಕಳು ಯಾರವು? ನೀವು ನನ್ನನ್ನು ಎಲ್ಲಿಗೆ ಕರೆತಂದಿರುವಿರಿ?" ಎಂದು ಕೇಳಿದಳು.

ಆಮಿರ್ ಅಷ್ಟೇ ಸಹಜ ಧ್ವನಿಯಲ್ಲಿ "ಇದು ನನ್ನ ಬಂಗ್ಲೆ. ಈ ಮಕ್ಕಳೂ ನಮ್ಮವು. ಈ ಅಪರಿಚಿತ ಬಂಗ್ಲೆಯಲ್ಲಿ ನಿನಗೆ ಗಾಬರಿಯಾಗಬಾರದೆಂದು ಆಟ ವಾಡಲು ಈ ಮಕ್ಕಳ ವ್ಯವಸ್ಥೆ ಮಾಡಿದೆ. ಅವು ನಿನ್ನ ಮನಸ್ಸನ್ನು ಸಂತೋಷಪಡಿಸು ವುದಕ್ಕಾಗಿ ಇವೆ. ಇನ್ನು ನೀನು ಈ ಬಂಗ್ಲೆ

ಯಲ್ಲಿ ಈ ಮಕ್ಕಳ ಜೊತೆಗೇ ಇರುವಿಯಂತೆ" ಎಂದಂತಾಯಿತು.

ಮಕ್ಕಳು ಮತ್ತು ಬಂಗ್ಲೆಯನ್ನು ನೋಡುತ್ತಲೂ ಆ ಮಂಪರಿನಲ್ಲೂ ಬಡಿದೆಬ್ಬಿಸಿದಂತೆ ಅವಳ ಕಣ್ಣುಗಳು ತೆರೆದುವು. ಅವಳು ದೇವರನ್ನು ನೆನೆದಳು. "ದೇವರೇ! ಇದೆಂಥ ಭಯಾನಕ ಕನಸು ಕಂಡೆ. ದೇವರು ನನಗೆ ಒಳ್ಳೆಯದನ್ನು ಮಾಡಲಿ. ನನ್ನ ಅಮಿರ್ ಹಾಗೇಕೆ ಮಾಡಿಯಾನು?" ಎಂದುಕೊಂಡಳು. ಮತ್ತೆ ಅವಳು ತನ್ನ ತಲೆಯನ್ನು ಕೊಡಹಿ ಮುತ್ತಿನ ಯೋಚನೆಯನ್ನು ಚಿತ್ತದಿಂದ ಕಿತ್ತೆಸೆದಳು. ಕನಸು ಯಾವಾಗಲು ಸತ್ಯಕ್ಕೆ ವಿರೋಧವಾಗಿರುತ್ತವೆ ಎಂದುಕೊಂಡು ತನ್ನ ಪೂರ್ಣ ಅಸ್ತಿತ್ವವನ್ನೇ ಪರೀಕ್ಷಿಸಿಕೊಂಡಳು. ಆದರೆ ಅವಳು ಮೊದಲಿನಂತೆಯೇ ಇದ್ದಳು. ತನ್ನ ಪರ್ಸಿನಿಂದ ಕನ್ನಡಿ ತೆಗೆದು ತನ್ನ ಮೇಕಪ್ ಅನ್ನು ಸರಿಪಡಿಸಿಕೊಳ್ಳತೊಡಗಿದಳು. ಆಗ ಗಗನಸಖಿಯ ಮಂಜುಳ ಧ್ವನಿ, "ಇನ್ನೇನು ಸ್ವಲ್ಪ ಸಮಯದಲ್ಲಿ ನಾವು ನ್ಯೂಯಾರ್ಕಿನ ಕೆನಡಿ ಏರ್‌ಪೋರ್ಟಿನಲ್ಲಿ ಇಳಿಯಲಿದ್ದೇವೆ. ದಯವಿಟ್ಟು ಬೆಲ್ಟನ್ನು ಕಟ್ಟಿಕೊಳ್ಳಿ. ನಮ್ಮ ಪ್ರವಾಸ ಬಹಳ ಮಧುರವಾಗಿಯೂ ಸಂತೋಷಕರವಾಗಿಯೂ ಮುಗಿಯಿತು. ಮತ್ತೆ ನಾವು ಮುಂದೆ ಭೇಟಿಯಾಗೋಣ. ಈ ಶುಭಾಶಯದೊಂದಿಗೆ ನಮಗೆ ಅಪ್ಪಣೆ ಕೊಡಿ. ಕೃತಜ್ಞತೆಗಳು. ದೇವರು ತಮಗೆ ಒಳ್ಳೆಯದು ಮಾಡಲಿ" ಎಂದು ಅವಳನ್ನು ಚಕಿತಗೊಳಿಸಿತು.

ಸಮ್ಮಿ ಕೂಡಲೇ ಬೆಲ್ಟು ಕಟ್ಟಿಕೊಂಡು ಸೀಟ್ ಸರಿಪಡಿಸಿಕೊಂಡಳು. ಆಗ ಅವಳ ಹೃದಯ ಬಹಳ ಜೋರಾಗಿ ಬಡಿದುಕೊಳ್ಳುತ್ತಿತ್ತು. ಏಕೆಂದರೆ ಇನ್ನು ಸ್ವಲ್ಪ ಕ್ಷಣದಲ್ಲೇ ಅವಳ ಜೀವನದ, ಆತ್ಮದ ಒಡೆಯ, ಅವಳ ಸರ್ವಸ್ವ ವಿಮಾನ ನಿಲ್ದಾಣದಲ್ಲಿ ಅವಳನ್ನು ಭೇಟಿಯಾಗುವವನಿದ್ದ. ಅಮೀರ್‌ನನ್ನು ನೋಡುತ್ತಲೂ ಅವಳ ಹೃದಯ ಚಲನೆಯೇ ನಿಂತುಹೋಗುವುದೋ ಎಂದು ಅವಳು ಚಿಂತಿಸುತ್ತಿದ್ದಳು. ತನ್ನ ಬಲಗೈಯಿಂದ ಹೃದಯವನ್ನು ಗಟ್ಟಿಯಾಗಿ ಒತ್ತಿ ಹಿಡಿದುಕೊಂಡಿದ್ದಳು. ವಿಮಾನ ಫಕ್ಕನೇ ನಿಂತುಕೊಂಡಿತು. ಸ್ವಲ್ಪ ಸಮಯದಲ್ಲಿಯೇ ಅದರ ಬಾಗಿಲುಗಳು ತೆರೆದುವು. ಪ್ರವಾಸಿಗರು ಸಾಲಾಗಿ ಒಬ್ಬರ ಹಿಂದೊಬ್ಬರು ಇಳಿಯತೊಡಗಿದರು. ಅವಳೂ ಆ ಭಾರತೀಯ ಕುಟುಂಬದ ಜೋಡಿಯ ಹಿಂದೆ ಹಿಂದೆ ನಡೆಯುತೊಡಗಿದಳು.

ಇಮಿಗ್ರೇಷನ್ ಕಾಗದ ಪತ್ರಗಳನ್ನು ತೋರಿಸಿ ಅವಳು ತನ್ನ ಸಾಮಾನುಗಳ ದಾರಿ ಕಾಯುತ್ತಿದ್ದಳು. ಲಗೇಜುಗಳು ಬರುತ್ತಲು ತನ್ನ ಟ್ರಾಲಿಯನ್ನು ಎಳೆದುಕೊಂಡು ಹೊರಗೆ ಬಂದಳು. ಅವಳ ಒಂದೊಂದು ಹೆಜ್ಜೆಯೂ ಅಶುಭ ಸೂಚಿಸುವಂತೆ ಭಾರವಾಗಿದ್ದುವು. ಕಸ್ಟಮ್ಸ್ ದಾಟಿ ಹೊರಗೆ ಬರುತ್ತಲು ಎದುರಿಗೆ ಅಮಿರ್ ಹೂವಿನ ದೊಡ್ಡ ಬುಕೆ ಹಿಡಿದು ನಿಂತಿದ್ದ.

ಅಮಿರ್‌ನನ್ನು ನೋಡುತ್ತಲು ಟ್ರಾಲಿ ಬಿಟ್ಟು ಓಡಿ ಬಂದು ಅವನನ್ನು ಆಲಂಗಿಸಿದಳು. ಅಮಿರ್ ಸಮ್ಮೀಗೆ ಹೂವಿನ ಬುಕೆ ಕೊಡುತ್ತ, ಟ್ರಾಲಿ ಹಿಡಿದುಕೊಂಡು, "ದಾರಿಯಲ್ಲಿ ಏನೂ ಕಷ್ಟವಾಗಲಿಲ್ಲವೆ? ಇಂಥ ದೊಡ್ಡ ಪ್ರವಾಸ ನೀನೊಬ್ಬಳೇ ಮೊದಲ ಬಾರಿಗೆ ಮಾಡಿರುವೆ" ಎಂದು ಸವಿ ನುಡಿದ.

ಷಮ್ಮೀ ಸಂತಸದಿಂದ ಮಣಿದು, "ಪ್ರವಾಸದ ಅರಿವೇ ನನಗಾಗಲಿಲ್ಲ. ನಾನು ನಿಮ್ಮ ಯೋಚನೆಯಲ್ಲಿ ಮುಳುಗಿಹೋಗಿದ್ದೆ. ಪ್ರವಾಸದಲ್ಲಿ ನಿಮ್ಮ ನೆನಪುಗಳು ನನ್ನ ಸಹಚರಿಯಾಗಿದ್ದವು. ಹೀಗಾಗಿ ಹೋಗಿದ್ದೇ ಗೊತ್ತಾಗಲಿಲ್ಲ" ಎಂದು ಉತ್ತರಿಸಿದಳು.

ಆಮಿರ್ ಟ್ರಾಲಿ ದಬ್ಬಿಕೊಂಡು ಹೊರಗೆ ಬಂದ. ಹೊರಗಡೆಗೆ ಸ್ವಲ್ಪ ದೂರದಲ್ಲಿ ಲಕಲಕ ಹೊಳೆಯುತ್ತಿರುವ ಹೊಚ್ಚ ಹೊಸ ಕಾರು ನಿಂತಿತ್ತು.

ಆಮಿರ್ ಮುಂದೆ ಬಂದು ಕಾರಿನ ಬಾಗಿಲು ತೆರೆದ. ಡಿಕ್ಕಿಯಲ್ಲಿ ಸಾಮಾನು ಗಳನ್ನಿಟ್ಟು, ಷಮ್ಮೀಯ ಕೈಹಿಡಿದು ತನ್ನ ಪಕ್ಕದ ಸೀಟಿನಲ್ಲಿ ಕೂಡಿಸಿಕೊಂಡ. ಷಮ್ಮೀ ಕಾರಿನಲ್ಲಿ ಕುಳಿತು ತಾನು ಪ್ರಪಂಚದ ಅತ್ಯಂತ ಐಶ್ವರ್ಯವಂತೆ ಎಂದುಕೊಂಡಳು. ಇಂಥ ಸುಂದರವಾದ ಕಾರಿನಲ್ಲಿ ತಾನು ಕೂಡುವೆನೆಂದು ಅವಳು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಅವಳು ಪ್ರವಾಸದಿಂದ ಬಳಲಿದ್ದಳು. ಆಮಿರ್‌ನ ಭುಜದ ಮೇಲೆ ತಲೆ ಇಟ್ಟಾಗ ಅವಳಿಗೆ ಶಾಂತಿ ಎನಿಸಿತು. ಅದೆಷ್ಟೋ ವರ್ಷಗಳ ನಂತರ ತನ್ನ ಪ್ರಿಯ ಮನದನ್ನನ ತೋಳು ಅವಳಿಗೆ ದೊರಕಿತ್ತು. ಆಗ ಅವಳು ಈ ಪ್ರಪಂಚವನ್ನೇ ಮರೆತಿದ್ದಳು. ಅವಳಿಗೆ ಕಾಲ ಕಳೆದುದೇ ಗೊತ್ತಾಗಲಿಲ್ಲ. ಕಾರು ಹಠಾತ್ತನೆ ಸುಂದರವಾದ ಬಂಗ್ಲೆಯೊಂದರ ಮುಂದೆ ನಿಲ್ಲುತ್ತಲೂ ಆಮಿರ್ ಪ್ರೀತಿಯಿಂದ,

"ಷಮ್ಮೀ! ಏಳು. ಮನೆ ಬಂದಿತು. ಮಲಗಿರುವೆಯಾ ?" ಎಂದನು.

"ಇಲ್ಲ" ಎನ್ನುತ್ತ ಅವಳು ಕಣ್ಣು ತೆರೆದು ಲಗುಬಗೆಯಿಂದ ಹೂವನ್ನು ಎತ್ತಿಕೊಂಡು ಕಾರಿನಿಂದ ಇಳಿದಳು. ಬಾಗಿಲಿಗೆ ಬರುತ್ತಲೂ ಆಮಿರ್ ಕರೆಗಂಟೆಯೊತ್ತಿದ. ಒಳಗಿನಿಂದ ಯಾರೋ ಬಾಗಿಲು ತೆರೆದರು. ಮನೆಯೊಳಗೆ ಹೆಜ್ಜೆ ಇಡುತ್ತಲೂ ಕಟೆದಗೊಂಬೆಯಂತಿರುವ ಚೆಲುವೆಯೊಬ್ಬಳು ಎದುರು ನಿಂತಿದ್ದಳು. ಷಮ್ಮೀ ಆಶ್ಚರ್ಯದಿಂದ ಆಮಿರ್‌ನನ್ನು ನೋಡಿದಳು.

ಆಮಿರ್ ತತ್‌ಕ್ಷಣ, "ಷಮ್ಮೀ ಇವಳು ಈ ಮನೆಯ ಒಡತಿ ರೋಜಿ" ಎಂದು ಪರಿಚಯಿಸಿದ. ಆ ಹೆಂಗಸಿನತ್ತ ತಿರುಗಿ, "ರೋಜಿ! ನೀನು ಮಕ್ಕಳ ಬೇಬಿ ಸಿಟ್ಟರಿಗಾಗಿ ಚಿಂತಿಸಿ ಕಂಗಾಲಾಗಿದ್ದೆ. ಇವಳನ್ನು ನಾನು ಇಂಡಿಯಾದಿಂದ ಕರೆಸಿದ್ದೇನೆ. ನಿನ್ನ ಮಕ್ಕಳಿಗೆ ಇವಳು ಬಹಳ ಒಳ್ಳೆಯ ಬೇಬಿ ಸಿಟ್ಟರ್ ಇದ್ದಾಳೆ" ಎಂದನು.

ಷಮ್ಮೀಯತ್ತ ತಿರುಗುತ್ತ, "ಷಮ್ಮೀ! ಇವಳು ರೋಜಿ. ನನ್ನ ವಾಯ್ಫ್" ಎಂದನು.

ಷಮ್ಮೀ ಗರಬಡಿದವಳಂತೆ ನಿಂತಿದ್ದಳು. ಅವಳ ಕಣ್ಣುಗಳು ವಿಸ್ಮಯದಿಂದ, ಅರಳಿಕೊಂಡಿದ್ದುವು. ಅವಳಿಗೆ ಏನೂ ತಿಳಿಯದಂತಾಗಿತ್ತು. ಅವಳು ಬಯಸಿದ ಕನಸಿನರಮನೆ ಕೇಳಿದ ಒಂದೇ ವಾಕ್ಯದಿಂದ ಸಿಡಿದು ಚೂರು ಚೂರಾಗಿ ಹೋಗಿತ್ತು. ತಲೆ ಸುತ್ತಿ,

ಸ್ಮೃತಿ ತಪ್ಪಿ ಅವಳು ನೆಲಕ್ಕುರುಳಿದಳು. ಅವಳ ಕೈಯಿಂದ ಹೂಗೊಂಚಲು ಭೂಮಿಗೆ ಬಿದ್ದು ಚೆಲ್ಲಾಪಿಲ್ಲಿಯಾಗಿದ್ದಿತು. ಅವಳ ಗಂಡ ಅವಳ ಹೃದಯವನ್ನು ತನ್ನ ಒರಟು ಕೈಯಲ್ಲಿ ಹಿಸುಕಿಹಾಕಿದ್ದ. ಆ ಬಲಹೀನ ಹೆಂಗಸೂ ಆ ಹೂವಿನಂತೆ ಚದುರಿಹೋಗಿ ನೆಲದ ಮೇಲೆ ಸ್ಮೃತಿ ತಪ್ಪಿ ಬಿದ್ದಿದ್ದಳು.

ಅವಳಿಗೆ ಎಚ್ಚರವಾದಾಗ ರೋಜಿಯ ಧ್ವನಿ ಕೇಳಿಸಿತು. ಅವಳು ಇಂಗ್ಲೀಷಿನಲ್ಲಿ, "ಬೇಬಿ ಸಿಟ್ಟರ್ ಸಾಮಾನುಗಳನ್ನು ಮನೆಯ ಹಿಂಭಾಗದಲ್ಲಿ, ನಾಯಿಗಾಗಿ ಕಟ್ಟಿಸಿದ ರೂಮಿನಲ್ಲಿ ಇರಿಸಿ. ಇನ್ನೂ ನಮ್ಮ ನಾಯಿ ಬಂದಿಲ್ಲ. ಅದು ಬರುತ್ತಲು ಬೇರೆ ವ್ಯವಸ್ಥೆ ಮಾಡೋಣ."



ಸತ್ಯಾಗ್ರಹ–ಸತ್ಯಾಗ್ರಹಿ

ಸತ್ಯಾಗ್ರಹ ಸತ್ಯದ ಅನ್ವೇಷಣೆ ಮತ್ತು ದೇವರೇ ಸತ್ಯ

ಸತ್ಯಾಗ್ರಹ ಆಧ್ಯಾತ್ಮಿಕತೆಯಿಂದ ಮಾಡಿದ ಅಸ್ತ್ರ. ಸತ್ಯಾಗ್ರಹಿಗೆ ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇರಬೇಕು.

ಅಸಹಕಾರ ಸಿವಿಲ್ ಡಿಸ್ ಓಬೀಡಿಯನ್ಸ್ ಎರಡೂ ಸತ್ಯಾಗ್ರಹದ ಬೇರೆ ಬೇರೆ ರೆಂಬೆಗಳು.

ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸರಿಸಮನಾಗಿ ಪಾಲ್ಗೊಳ್ಳುವಂತಾಗಬೇಕು. ಅದು ಕುಲಗೆಟ್ಟ ದೊಂಬಿ ಪ್ರಭುತ್ವವಾಗಬಾರದು.

ಪ್ರಜಾಪ್ರಭುತ್ವದ ಚೈತನ್ಯವನ್ನು ಹೊರಗಿನಿಂದ ಹೇರಿಸಲಾಗುವುದಿಲ್ಲ. ಅದು ಒಳಗಿನಿಂದಲೇ ಬರಬೇಕು.

ನನ್ನ ಭಾವನೆಯಲ್ಲಿ ಪ್ರಜಾಪ್ರಭುತ್ವವೆಂದರೆ ಅತ್ಯಂತ ದುರ್ಬಲನೂ ಶಕ್ತಿಶಾಲಿಯಷ್ಟೆ ಎಲ್ಲಾ ಸವಲತ್ತುಗಳನ್ನು ಹೊಂದುವುದೇ ಆಗಿದೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಕ್ರಿಯೆಯನ್ನು ಸಂಶಯವಿಲ್ಲದೆ ರಕ್ಷಿಸುತ್ತದೆ.

—ಗಾಂಧೀಜಿ

ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ

ಎ. ಪಿ. ಗೌರೀಶಂಕರ, ವಕೀಲರು
ಇಬ್ರೋಸ್ ಕಮರ್ಶಿಯಲ್ ಕಾಂಪ್ಲೆಕ್ಸ್
ಮಹಾತ್ಮ ಗಾಂಧಿ ರಸ್ತೆ, ಕೊಡಿಯಾಲಬೈಲು
ಮಂಗಳೂರು ೫೭೫ ೦೦೩

ಇಂದಿಗೂ ಅತಿ ಶ್ರೇಷ್ಠ ಚಿಂತಕ, ಕಾದಂಬರಿಕಾರ, ಕವಿ, ಕತೆಗಾರ ಎಂದು ಮಾನ್ಯರಾದ ಕೌಂಟ್‌ಲಿಯೋ ಟಾಲ್‌ಸ್ಟಾಯ್‌ರವರ ಒಂದು ಸಣ್ಣ ಕತೆಯಲ್ಲಿ ಬಡ ಚಮ್ಮಾರನೊಬ್ಬನನ್ನು ಒಂದು ದಿನ ಯೇಸು ಹಲವು ಸಲ ಅಜ್ಞಾತವಾಗಿ ಭೇಟಿಯಾಗಿ ದಿನದ ಕೊನೆಯಲ್ಲಿ ತನ್ನ ಇರವನ್ನು ಸೂಚ್ಯವಾಗಿ ತಿಳಿಸಿದ. ಅತಿ ಸುಂದರ ಮನ ಕರಗಿಸುವ ಕಥನವಿದು. ಹಿಂದೆ ಪುತ್ತೂರಿನ ಹಿರಿಯ ಹಾಗೂ ಮೊದಲ ಸಾಲಿನ ವಕೀಲ ಶ್ರೀ ಶ್ಯಾಮಶಾಸ್ತ್ರಿಯವರು ಅಂತಹದೇ ಸನ್ನಿವೇಶದಲ್ಲಿ ನಡೆದ ನಿಜ ಜೀವನಕಥೆ ಹೇಳಿದ್ದರು. ಜೀವನದಲ್ಲಿ ಕಷ್ಟ ಪರಂಪರೆಗಳು ಎದುರಾಗಿ ದಾರಿಗಾಣದೆ ಹತಾಶರಾಗಿದ್ದ ಸನ್ನಿವೇಶದಲ್ಲಿ ಅನಿರೀಕ್ಷಿತವಾಗಿ ಸಹಜ ಆತ್ಮೀಯ ಪ್ರೇಮದ ಸಹಾಯ ಒದಗಿದ ಕಥೆಯಿದು.

ಗೋವಿಂಧ ಭಟ್ಟರು ಆ ಹಳ್ಳಿಯ ಮಧ್ಯಮ ವರ್ಗದಲ್ಲಿ ಕೆಳ ಹಂತದ ಕೃಷಿಕ. ಹಿರಿಯರಿಂದ ಬಂದ ಕುಟುಂಬದ ಮನೆ, ಅದರ ಮುಂಭಾಗದ ಒಂದು ಎಕರೆ ಮಜಲು ಗದ್ದೆ, ಪಕ್ಕದಲ್ಲಿ ಸಾಧಾರಣ ಮೂರರಿಂದ ನಾಲ್ಕು ಎಕರೆ ಒಳಗಿನ ಅಡಿಕೆ ತೋಟ–ಇವಿಷ್ಟು ಅವರ ಅಂದಿನ ಸೊತ್ತು. ಅಲ್ಲದೆ ಮನೆ ಹಿಂದಿನ ಗುಡ್ಡೆ, ಸುತ್ತಲಿನ ಮರ ಗಿಡಗಳ ಸೊಂಪಿನ ನೆರಳು, ಹರಿಯುವ ತೋಡು ಇತ್ಯಾದಿಗಳಿಂದ ಕೂಡಿದ್ದ ಮತ್ತು ಮನಸ್ಸಿಗೆ ನೆಮ್ಮದಿ ನೀಡುವ ದೈವದತ್ತ ಶಾಂತಪರಿಸರ ಗೋವಿಂದಭಟ್ಟರದ್ದು. ನೆಮ್ಮದಿಯ ಬದುಕು. ಅವರ ತಂದೆಗೆ ಅವರೊಬ್ಬರೇ ಮಗ, ಅಕ್ಕ ಮತ್ತು ತಂಗಿಯನ್ನು ತಂದೆಯ ಕಾಲದಲ್ಲೇ ವಿವಾಹ ಮಾಡಿಕೊಟ್ಟಾಗಿತ್ತು. ತಂದೆ-ತಾಯಿ ಜೀವಿಸಿದ್ದಾಗಲೇ ಕಾವೇರಮ್ಮನೊಡನೆ ಇವರ ವಿವಾಹವಾಗಿತ್ತು. ಹಲವು ವರ್ಷ ತಂದೆ, ತಾಯಿ,ಪತ್ನಿ–ಇವರೊಂದಿಗಿನ ನೆಮ್ಮದಿಯ ಬದುಕು ನಡೆದಿತ್ತು. ಅಷ್ಟರೊಳಗೇ ಮಗ ಶ್ಯಾಮ ಮತ್ತು ಸ್ವಲ್ಪ ಕಾಲದಲ್ಲಿ ಮಗಳು ಸಾವಿತ್ರಿಯೂ ಜನಿಸಿದ್ದರು. ಶ್ಯಾಮನಿಗೆ ೮–೯ ವರ್ಷ ತುಂಬುವ ಕಾಲಕ್ಕೆ, ಕೆಲವೇ ದಿವಸಗಳ ಅಸ್ವಾಸ್ಥ್ಯದಲ್ಲಿ ಗೋವಿಂದ ಭಟ್ಟರ ತಂದೆ ತೀರಿಕೊಂಡರು. ಅನಂತರ ಒಂದು ವರ್ಷದಲ್ಲಿ ತಾಯಿಯೂ ಅವರನ್ನು ಹಿಂಬಾಲಿಸಿದರು. ಆ ತನಕ ಸ್ವಂತ ಮಗಳಂತೆ

ಕಂಡಿದ್ದ ಅತ್ತೆ ಮಾವಂದಿರು ಇಲ್ಲವಾದಾಗ ಕಾವೇರಮ್ಮನ ತೃಪ್ತ ಜೀವನದಲ್ಲಿ ಅನಿರೀಕ್ಷಿತ ಕಹಿಯ ಸೆಲೆಯೊಂದು ಕಾಣಿಸಿತ್ತು. ಬೆಳೆಯುತ್ತಿರುವ ಶ್ಯಾಮ-ಸಾವಿತ್ರಿಯರು ಕೊರತೆಯ ದುಃಖವನ್ನು ಹಗುರಗೊಳಿಸಿದ್ದರು. ಮುಂದೆ ಶ್ಯಾಮನು ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಹತ್ತಿರದ ಪಟ್ಟಣ ಪುತ್ತೂರಿಗೆ ಹೋದ. ಸಾವಿತ್ರಿ ಕಾವೇರಮ್ಮನ ಜತೆಗುಳಿದಳು. ಎರಡು ವಾರಕ್ಕೊಂದು ಸಲ ವಿದ್ಯಾರ್ಥಿ ಭವನದಿಂದ ಮನೆಗೆ ಬರುವ ಶ್ಯಾಮನ ನಿರೀಕ್ಷೆಯಲ್ಲಿ ಅವನು ಹೇಳುವ ಸರಸ ಕಥೆಗಳಲ್ಲಿ ದಿನ, ಮಾಸ, ವರುಷಗಳು ಕಳೆದುವು. ಹೀಗಿರುವಲ್ಲಿ ಬದುಕಿನ ಅನಿರೀಕ್ಷಿತ ಹಾಗೂ ಅನಪೇಕ್ಷಿತ–ಅತಿಥಿ ಕಾಯಿಲೆಯ ಭೇಟಿ. ಒಂದು ಸಲ ವಿದ್ಯಾರ್ಥಿ ಭವನದಿಂದ ಬಂದ ಶ್ಯಾಮನಿಗೆ ಶೀತ ಜ್ವರ ಬಂದು ಕೆಲವು ದಿನ ಶಾಲೆಗೆ ರಜೆ ಹಾಕಬೇಕಾಯಿತು. ಸದಾ ಉಲ್ಲಾಸದ ಚಿಲುಮೆಯಂತಿದ್ದವನು ಹಾಸಿಗೆ ಹಿಡಿದ. ಯಾವ ಔಷಧ ಮಾಡಿದರೂ ದೀರ್ಘಕಾಲದ ಅಸ್ವಾಸ್ಥ್ಯದಲ್ಲಿ ನರಳಿ ಭಟ್ಟರ ಸಂಸಾರವನ್ನು ದುಃಖದಲ್ಲಿ ಮುಳುಗಿಸಿ ಕಣ್ಮರೆಯಾದ. ಮಧ್ಯ ವಯಸ್ಸಿನ ಭಟ್ಟರಿಗಾದ ಆಘಾತ ತೀವ್ರವಾಗಿತ್ತು. ಅನಿರೀಕ್ಷಿತ ಘಟನೆಗೆ ಅವರ ಎದೆ ನಡುಗಿತು. ಸಂಬಿದ ವೆಂಕಟರಮಣ, ಕೈಬಿಟ್ಟೆನಲ್ಲಾ–ಎಂದು ಬಾಯಲ್ಲಿ ಹೇಳದಿದ್ದರೂ ಮನ ಮಿಡಿಯುತ್ತಿತ್ತು. ಐವತ್ತು ದಾಟಿದ ಸಂಧಿಯಲ್ಲಿ ಸಂಸಾರ ವ್ಯವಸ್ಥೆ ಸಮತೋಲನೆಯಲ್ಲಿದೆ ಎಂದೆಣಿಸುವ ಬಿರುಕೊಂದು ಕಾಣಿಸಿದೆ. ತಾನಿನ್ನು ವೃದ್ಧ ಎಂಬ ಅರಿವು ಕಾಡಹತ್ತಿದೆ. ಆದರೆ ಮಾತಿನಲ್ಲಿ ಏನೂ ಅನ್ನದೆ ದಿನ ಮಾಡುತ್ತಿದ್ದರು. ಆದರೆ ಕಾವೇರಮ್ಮನ ಸ್ಥಿತಿ ಹಾಗಲ್ಲ. ಅವರು ಈ ಮಾನಸಿಕ ಆಘಾತಕ್ಕೆ ಸಿದ್ಧರಿರಲಿಲ್ಲ. ಪ್ರತಿದಿನವೂ ಎಂಬಂತೆ ಮನೆ ದೇವರಲ್ಲಿ, ಊರದೇವಸ್ಥಾನಕ್ಕೆ ಮೊರೆ, ಹರಕೆ, ಪ್ರಾರ್ಥನೆ, ವ್ರತಾಚರಣೆಗಳು ನಡೆದುವು. ಶ್ಯಾಮನ ನೆನಪು ಪ್ರತಿದಿನವೂ ಕಾಡುತ್ತಿತ್ತು. ಅವರು ಮರುಗದ ದಿನವಿರಲಿಲ್ಲ. ಅತ್ತೆ–ಮಾವಂದಿರು ಹೋದಂದಿನಿಂದಲೇ ಅಶುಭ ಸೂಚನೆಯ ಕರಿ ನೆರಳಿಗೆ ಅಳುಕಿದ್ದ ಕಾವೇರಮ್ಮನಿಗೆ ಶ್ಯಾಮನ ಅನಿರೀಕ್ಷಿತ ಮರಣದಿಂದ ಮುಂದಿನ ಬದುಕಿನಲ್ಲಿ ವಿಶೇಷ ಆಸೆ ಉಳಿಯಲಿಲ್ಲ. ಹಾಗಿದ್ದರೂ ಸಾವಿತ್ರಿ ಮತ್ತು ಭಟ್ಟರಿಗಾಗಿ ತಾನುಳಿದಿರುವೆನು–ಉಳಿಯಬೇಕು–ಎಂಬ ಜಂತಿಯೊಂದೇ ಆಧಾರವಾಗಿತ್ತು,

ಆ ದಿನಗಳು ಬಹಳ ಕಷ್ಟ ದಿನಗಳು. ಎರಡನೇ ಜಾಗತಿಕ ಯುದ್ಧ ಪ್ರಾರಂಭವಾಗುವ ಒಂದೆರಡು ವರ್ಷಗಳ ಮೊದಲು. ಜಾಗತಿಕ ಆರ್ಥಿಕ ಮುಗ್ಗಟ್ಟು ಭಟ್ಟರ ಬದುಕನ್ನೂ ತಾಕಿತು. ಅಡಿಕೆ, ತೆಂಗಿನ ಕಾಯಿ, ಗೇರುಬೀಜಗಳ ಬೆಲೆ ತೀವ್ರವಾಗಿ ಕುಸಿದಿತ್ತು. ಸಾಲದಿದ್ದುದಕ್ಕೆ ಅಡಿಕೆ ಬೆಳೆಗೆ ಕೊಳೆ ರೋಗ ತೀವ್ರವಾಗಿತ್ತು. ಶ್ಯಾಮನ ವಿದ್ಯಾಭ್ಯಾಸಕ್ಕೆ ಅನಂತರ ಅವನ ಚಿಕಿತ್ಸೆಗಾಗಿ ವಿಪರೀತ ಖರ್ಚು ಮಾಡಿದ್ದರು. ಅವರ ಸಂಬಂಧಿ, ಭಾವನಾಗುವವರು ನಾರಾಯಣಭಟ್ಟರು ನೆರೆಹಳ್ಳಿಯ ಬಹಳ ಶ್ರೀಮಂತರು. ಪರಂಪರೆಯಿಂದ ಶ್ರೀಮಂತ ಕುಟುಂಬದ ಅಧ್ಯರು, ಗ್ರಾಮೀಣ ಜನತೆ ನೇತಾರರು. ಗೋವಿಂದ ಭಟ್ಟರ ಕೊಳಕೆ ಗದ್ದೆಯ ಬಡಗು ಬದಿಯಲ್ಲಿ ಅವರ ಆಸ್ತಿಯಿತ್ತು. ಗೋವಿಂದ ಭಟ್ಟರ ಆಸ್ತಿಯಿಂದಲೇ

ಅವರ ಆಸ್ತಿಗೆ ನೀರ ಹರಿವು. ಹಾಗೆಂದೇ ಗೋವಿಂದಭಟ್ಟರ ಕೊಳಕೆ ಗದ್ದೆ ನಾರಾಯಣ ಭಟ್ಟರ ಆಸ್ತಿಗೆ ನೀರಾಶ್ರಯಃವೆನ್ನಬಹುದು. ಭಾವನ ಕಷ್ಟದ ಕಾಲದಲ್ಲಿ ಸಹಾಯ ನೀಡಲು ನಾರಾಯಣಭಟ್ಟರು ಮುಂದಾದರು. ಅವರ ಅನಿರೀಕ್ಷಿತ ಕರುಣೆಗೆ ಸತ್ಪಾತ್ರರಾಗಲು ಗೋವಿಂದಭಟ್ಟರಿಗೆ ಅವಕಾಶ ದೊರಕಿತು. ನಾರಾಯಣಭಟ್ಟರು ಭಾವನಿಗೆ ಧೈರ್ಯ ಹೇಳಿ ಧನಸಹಾಯ ನೀಡಿದ್ದನ್ನು ಬಹಳ ಕೃತಜ್ಞತೆಯಲ್ಲಿ ಸ್ವೀಕರಿಸಿದರು. ಇದು ಕೇವಲ ಭಾವ ನೆಂಟರೊಳಗಣ ಪ್ರೀತಿಯ ವ್ಯವಹಾರ. ನಾರಾಯಣಭಟ್ಟರು "ಭಾವ ನಿನಗೆ ಕಷ್ಟ ಕಾಲದಲ್ಲಿ ಸಹಾಯ ಮಾಡಲು ನನಗೆ ಬಹಳ ಸಂತೋಷ. ನಿನಗೆ ಸಾಧ್ಯವಾದಾಗ, ವ್ಯವಹಾರದ ಬಡ್ಡಿ ಸೇರಿಸಿ ಮರುಪಾವತಿ ಮಾಡಿದರಾಯಿತು. ದೇವರು ಕಾಯುತ್ತಾನೆ. ನೀನು ಚಿಂತಿಸುವ ಅಗತ್ಯವಿಲ್ಲ" ಇತ್ಯಾದಿ ಔಪಚಾರಿಕ ಮೃದು ಮಾತುಗಳನ್ನು ನುಡಿದಿದ್ದರು. ಜತೆಗೇನೇ "ಭಾವಾ, ನೆಂಟರಾದರೂ ವ್ಯವಹಾರವೆಂದರೆ ವ್ಯವಹಾರವೇ. ನಮ್ಮದುಃ ಮನುಷ್ಯಾವಸ್ಥೆ. ಇಂದಿರುವವರು ನಾಳೆ ಇರುವುದಿಲ್ಲ. ಹಾಗಾಗಿ ಕೇವಲ ವ್ಯವಹಾರ ಚೊಕ್ಕವಾಗಿರಿಸಲು ಈ ಪತ್ರಕ್ಕೊಂದು ಸಹಿ ಹಾಕು. ಸಾಲ ತೀರಿದಾಗ ಈ ಪತ್ರ ನಾಶಪಡಿಸುವ" ಎಂಬ ವ್ಯಾವಹಾರಿಕ ಮುನ್ನೆಚ್ಚರಿಕೆಯ ವ್ಯವಸ್ಥೆಯನ್ನೂ ಮೃದು ಮಾತುಗಳಲ್ಲಿ ಮಾಡಿಸಿಕೊಂಡಿದ್ದರು. ಆದರೆ ಆ ದಿನಗಳ ಆರ್ಥಿಕ ಮುಗ್ಗಟ್ಟಿನಲ್ಲಿ ಗೋವಿಂದ ಭಟ್ಟರಿಗೆ ಭಾವನ ಸಾಲ ತೀರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಭಾವನ ವ್ಯವಹಾರ ಶುಚಿಗೊಳಿಸಲು ಮೂರು ಬೆಳೆಯ ಕೊಳಕೆ ಗದ್ದೆಗಳನ್ನು ನಾರಾಯಣಭಟ್ಟರಿಗೇನೇ ಮಾರಬೇಕಾಯ್ತು. ನಾರಾಯಣಭಟ್ಟರ ಮಾತಿನಲ್ಲಿ–"ಆಸ್ತಿ ಸಾಲಕ್ಕೆ ವಜಾ." ತಾತ್ಪರ್ಯ: ಗೋವಿಂದಭಟ್ಟರು ತಮ್ಮ ಕೊಳಕೆ ಗದ್ದೆಗಳನ್ನು ನಾರಾಯಣಭಟ್ಟರು ನಿರ್ಧರಿಸಿದ ಕ್ರಯಕ್ಕೆ ಮಾರಾಟ ಮಾಡಿ ಸಾಲ ಪರಿಹರಿಸಿಕೊಂಡರು. ಏನೂ ಉಳಿಯಲಿಲ್ಲ. ವ್ಯವಹಾರದಲ್ಲಿ ಗೋವಿಂದಭಟ್ಟರು ಅನುಭವಿಸಿದ ಮೊದಲ ಆಘಾತ. ಮೃದು ಮಾತಿನ ಭಾವ ನಂಬಿದವನನ್ನು ಹೀಗೂ ಸೋಲಿಸಬಹುದೇ?–ಎಂಬ ಕೊರಗು ದಿನವೂ ಕೊರೆಯುತ್ತಿತ್ತು. ಉಳಿದಿರುವ ತೋಟ, ಮನೆ, ಮಜಲು ಗದ್ದೆಗಳನ್ನಾದರೂ ಎಚ್ಚರಿಕೆಯಿಂದ ಕಾಪಾಡುವ ಎಂದು ಜಾಗೃತರಾದರು. ಅಷ್ಟರಲ್ಲಿ ಸಾವಿತ್ರಿಯ ವಿವಾಹವಾಗುವ ಕಾಲ ಬಂದೊದಗಿತು. ಎರಡನೇ ಜಾಗತಿಕ ಯುದ್ಧದ ಪ್ರಾರಂಭ ಕಾಲ. ಯೋಗ್ಯ ನೆಂಟಸ್ತಿಕೆ ಬಂದೊದಗಿದಾಗ ಕಳೆದುಕೊಳ್ಳುವುದು ಒಳಿತಲ್ಲವೆಂದು ಮದುವೆಗೆ ತಯಾರಿ ಮಾಡಿದರು. ಆದರೆ ಕೈಯಲ್ಲಿ ದುಡ್ಡಿಲ್ಲ. ಭಾವನ ಹತ್ತಿರ ಪುನಃ ಹೋಗುವ ಧೈರ್ಯವಿಲ್ಲ. ತನ್ನ ಕಷ್ಟವನ್ನು ಬಾಲ್ಯದ ಸಹಪಾಠಿ ಮೂಸಬ್ಬ ಬ್ಯಾರಿಯಲ್ಲಿ ಹೇಳಿಕೊಂಡರು. ಮೂಸಬ್ಬ ಬ್ಯಾರಿ ಶಾಲೆ ಬಿಟ್ಟ ದಿನಗಳಿಂದ ಬಾಳೆಕಾಯಿ, ತೆಂಗು, ಅಡಿಕೆ ಇತ್ಯಾದಿಗಳನ್ನು ಕೃಷಿಕರಿಂದ ಪಡೆದು ಹತ್ತಿರದ ಪೇಟೆಯಲ್ಲಿ ಮಾರಾಟ (ಬೀರ) ಮಾಡುವ ಸಣ್ಣ ವ್ಯಾಪಾರಿ. ಹಾಗೆಂದೇ "ಬ್ಯಾರಿ" ಪ್ರಾಮಾಣಿಕ ವ್ಯಾಪಾರದ ಮರ್ಮ ಅರಿತ ಸಂತೃಪ್ತ. ಭಟ್ಟರ ಸ್ಥಿತಿ ಕಂಡು ಮರುಗಿ ಮದುವೆ ಖರ್ಚಿಗೆ ಬೇಕಾದ ಹಣ ಸಹಾಯ ಮಾಡಿದ. ಈ ಹಿಂದೆ ಭಾವ

ನಾರಾಯಣಭಟ್ಟರು ದಾಖಲೆ ಪತ್ರ ಬರೆಯಿಸಿಕೊಂಡಿರುವಂತೆ ಮೂಸಬ್ಬನೂ ಕರಾರು ಮಾಡಿಸಿಕೊಳ್ಳಬಹುದೆಂದು ಭಟ್ಟರು ನಿರೀಕ್ಷಿಸಿದ್ದರು. ಆದರೆ ಮೂಸಬ್ಬ ಹಾಗೇನೂ ಮಾಡಿಸಿಕೊಳ್ಳಲು ಒಪ್ಪಲಿಲ್ಲ. "ನಮ್ಮೊಳಗೆ ಮಾತಿನ ವ್ಯವಹಾರ ಸಾಕು. ಮುಂದಿನ ಫಸಲನ್ನು ನನಗೆ ಕೊಟ್ಟು ಸಾಲ ತೀರಿಸಬಹುದು" ಎಂದಷ್ಟೇ ಹೇಳಿ ವ್ಯವಹಾರದ ಮಾತು ಮುಗಿಸಿದನು. ಭಟ್ಟರು ಮಗಳ ಮದುವೆಯನ್ನು ಸಾಂಗವಾಗಿ ನೆರವೇರಿಸಿ ತೃಪ್ತಿಪಟ್ಟರು.

ಕಾವೇರಮ್ಮ ಮತ್ತು ಭಟ್ಟರ ಬದುಕಿನ ವಿಪತ್ತುಗಳ ಮಾಲೆ ಮುಗಿಯಲಿಲ್ಲ. ವಿವಾಹವಾಗಿ ಕೇವಲ ಆರು ತಿಂಗಳೊಳಗೆ ಸಾವಿತ್ರಿಯ ಗಂಡ ಅನಿರೀಕ್ಷಿತವಾಗಿ ಮೃತಪಟ್ಟು, ಅವಳು ವಿಧವೆಯಾಗಿ ಹಿಂದೆ ಬರುವಂತಾಯಿತು. ಭಟ್ಟರ ಮತ್ತು ಕಾವೇರಮ್ಮನ ವೆಂಕಟರಮಣ ವಿಪತ್ತಿನ ಕಾಲದಲ್ಲಿ ಸಹಾಯದ ಕೈ ನೀಡಲಿಲ್ಲ. ತಾನು ಏನು ಮಾಡಿದರೂ ಪ್ರತಿಯೊಂದರಲ್ಲಿ ಸೋಲುಂಡು ಭಟ್ಟರು ತೀವ್ರ ಹತಾಶರಾದರು. ಇಳಿ ವಯಸ್ಸು ಕಷ್ಟದ ಜೀವನ, ಮೇಲಿಂದ ಮೇಲಿನ ಆಘಾತಗಳು ಭಟ್ಟರನ್ನು ತಲ್ಲಣಗೊಳಿಸಿದ್ದುವು. ಒಂದು ರಾತ್ರಿ ಮಲಗಿದವರು ಬೆಳಿಗ್ಗೆ ಏಳಲಿಲ್ಲ. ಕಪ್ಪು ಸುರಂಗದ ಕೊನೆಯ ಗೋಡೆಗೆದುರಾಗಿ ನಿಂತ ಅನುಭವ ಕಾವೇರಮ್ಮನದು. ಬೆಳಕಿಲ್ಲ, ಗಾಳಿಯಿಲ್ಲ, ಮುಂದಿನ ದಾರಿಯಲ್ಲಿ ಹಿಂದಿರುಗಲು ಸಾಧ್ಯವಿಲ್ಲ. ವಿಮೋಚನೆ ಇದೆಯೇ ? ಅಲ್ಲ ವಿನಾಶವೇ ? ಕಾವೇರಮ್ಮನನ್ನು ಕಾಡುವ ಹಲವಾರು ಪ್ರಶ್ನೆಗಳು : ಮುಂದಿನ ಜೀವನಕ್ಕೇನು ಗತಿ ? ಸಾವಿತ್ರಿಯನ್ನು ನೋಡುವವರು ಯಾರು ? ತೋಟದ ಫಸಲನ್ನು ಸಂಗ್ರಹಿಸಿ ಮಾರಾಟ ಮಾಡಿ ಸಾಲ ತೀರಿಸುವುದು ಹೇಗೆ ? ಯಾವ ಪ್ರಶ್ನೆಗೂ ಉತ್ತರವಿಲ್ಲ.

ಭಟ್ಟರು ಮೃತಪಟ್ಟ ಸುದ್ದಿ ಕೇಳಿ ಮೊದಲು ಬಂದವನು ಹಳೆಯ ಸ್ನೇಹಿತ ಮೂಸಬ್ಬ ಬ್ಯಾರಿ. ಬಂದವನು ಸಾಲದ ವ್ಯವಹಾರದ ಮಾತೆತ್ತಲಿಲ್ಲ. ತಾನು ಮಾಡಬಹುದಾದ ಎಲ್ಲಾ ಕೆಲಸಗಳನ್ನು ಕಾವೇರಮ್ಮ ಹೇಳದೆ ಮುಗಿಸಿ ಕೊಟ್ಟ. ಉತ್ತರಕ್ರಿಯೆಯ ಆಚಾರಗಳನ್ನೆಲ್ಲಾ ನೆಂಟರು ಸಂಬಂಧಿಕರು ಸಹಕರಿಸಿ ಮುಗಿಸಿದರು. ಅದರ ಖರ್ಚಿನ ಹೊರೆಯನ್ನು ಮೂಸಬ್ಬನೊಬ್ಬನೇ ಸಹಿಸಿಕೊಂಡ. ಹನ್ನೊಂದು ದಿನಗಳ ತನಕ ಪ್ರತಿದಿನ ಬೆಳಗ್ಗೆ ಸಂಜೆಯೂ ಮೂಸಬ್ಬ ಬಂದು ತನ್ನ ಸಹಾಯ ಮಾಡಿ ಹೋಗುತ್ತಿದ್ದ. ಕೊನೆಯ ತನಕವೂ ಎಷ್ಟು ಹಣ ಖರ್ಚಾಗಿದೆ ಎಂದು ಹೇಳಲಿಲ್ಲ. ಹಣ ಕೊಡಬೇಕೆಂದೂ ಕೇಳಲಿಲ್ಲ. ಉತ್ತರಕ್ರಿಯೆಗಳೆಲ್ಲಾ ಮುಗಿದು ಒಂದು ತಿಂಗಳ ಅನಂತರ ಕಾವೇರಮ್ಮನೇ ಹಣದ ಲೆಕ್ಕಾಚಾರ ಕೇಳಿದಾಗ ಅವನು ತುಳು ಮಾತಿನಲ್ಲಿ ಇಷ್ಟೇ ಹೇಳಿದನು: "ಭಟ್ಟರೂ ನಾನೂ ಚಿಕ್ಕಂದಿನಿಂದಲೂ ಒಡನಾಡಿಗಳು. ಅವರ ಋಣ ನಾನು ತಿನ್ನಲಾರೆ. ಅಥವಾ ನನ್ನ ಋಣ ಅವರು ತಿನ್ನಲಾರರು. ಅದನ್ನು ಲೆಕ್ಕವಿಟ್ಟವನೊಬ್ಬ ಇದ್ದಾನೆ ಅವನೇ ತೀರಿಸುತ್ತಾನೆ. ಅವನು ಲೆಖ್ಖ ಹೇಳಿದಾಗ ನಿಮಗೆ ತಿಳಿಸುತ್ತೇನೆ. ಈಗ ಚಿಂತಿಸಬೇಡಿ. ಮುಂದಿನ ವರ್ಷ ನೋಡುವ"–ಕಾವೇರಮ್ಮನಿಗೆ ಬಹಳ ಆಶ್ಚರ್ಯ. ಮೂಸಬ್ಬನ ಕುರಿತು ಗೋವಿಂದ

ಭಟ್ಟರು ಬಹಳ ಹೇಳಿದ್ದರು. ಅವನ ಸರಳತೆ, ಪ್ರಾಮಾಣಿಕತೆ, ವ್ಯವಹಾರ ಕುಶಲತೆ–ಎಲ್ಲವನ್ನೂ ಗೋವಿಂದಭಟ್ಟರು ಆಗಿಂದಾಗ್ಗೆ ಹೇಳುತ್ತಿದ್ದರು. ಆದರೆ ಇಂಥಾ ವಿಪತ್ತಿನ ಕಾಲದಲ್ಲಿ ಎಲ್ಲಾ ಸಂಬಂಧಿಕರೂ ದೂರವಾದಾಗ ತಾನಾಗಿ ಮುಂದೆ ಬಂದು ಸಹಾಯ ನೀಡುವ ಮೂಸಬ್ಬ ಬ್ಯಾರಿಯನ್ನು ನೆನೆದು ಕಣ್ಣೀರು ಬಂತು. ಇವರ ನಿಸ್ಸಹಾಯಕ ಸ್ಥಿತಿಯನ್ನು ಕಂಡು ಮೂಸಬ್ಬನಿಗೂ ಮರುಕವಾಯ್ತು. "ಮುಂದಿನ ವರ್ಷ ವ್ಯವಹಾರ ಮುಗಿಸಬಹುದು" ಎಂದಷ್ಟೇ ಹೇಳಿ ಅವಸರದಲ್ಲಿ ಹೊರಟು ಹೋದನು.

ಅಂದಿನಿಂದ ಒಂದು ವರ್ಷ ಕಳೆಯಿತು. ಗೋವಿಂದಭಟ್ಟರ ನೆಚ್ಚಿನ ವಕೀಲರೂ ಕುಟುಂಬದ ಮಿತ್ರರೂ ಪುತ್ತೂರಿನಿಂದ ಪತ್ರ ಬರೆದರು. ಪತ್ರದಲ್ಲಿ ಹಲವಾರು ವಿಷಯ ಬರೆದಿದ್ದರು. ತೋಟದ ವಿಸ್ತೀರ್ಣ, ಉತ್ಪತ್ತಿ, ಅದರ ಅಂದಾಜು ಮೌಲ್ಯ, ಸಾಲ ಇತ್ಯಾದಿಗಳ ಕುರಿತು. ಅವುಗಳನ್ನೆಲ್ಲಾ ಓದಿದರೂ ಸರಿಯಾದ ಅರ್ಥ ಕಾವೇರಮ್ಮ ಅಥವಾ ಮಗಳು ಸಾವಿತ್ರಿಗಾಗಲಿ ಆಗಲಿಲ್ಲ. ಒಟ್ಟು ತಿಳಿದದ್ದು–ತೋಟ, ಮನೆ, ಮಜಲು ಗದ್ದೆಗಳನ್ನು ಅತ್ಯಂತ ಹೆಚ್ಚಿನ ಬೆಲೆಗೆ ಮಾರಿದರೆ ಸಾಲ ತೀರಿಸಬಹುದು. ಉಳಿದ ಸ್ವಲ್ಪ ಹಣ ತೆಗೆದುಕೊಂಡು ಊರು ಬಿಟ್ಟು ಬೇರೆಲ್ಲಾದರೂ ಸಣ್ಣ ಮನೆ ಮಾಡಿ ಜೀವಿಸಬಹುದೆಂದು ಪತ್ರದಲ್ಲಿ ಬರೆದಿತ್ತು. ಸಾವಿತ್ರಮ್ಮನಿಗೆ ದಿಕ್ಕು ತೋಚದಂತಾಯ್ತು. ಹಿಂದಿನಿಂದ ಬಂದ ಮನೆ, ಆಸ್ತಿ ಕಳೆದುಕೊಂಡು ಸ್ವಜಾತಿಯ ಶ್ರೀಮಂತರ ಮನೆಗೆಲಸ ಮಾಡುತ್ತಾ ಶೇಷಾಯುಷ್ಯ ಸವೆಯಿಸುವುದೊಂದೆ ದಾರಿ. ವಕೀಲರಿಗೆ ಏನು ಉತ್ತರ ಬರೆಯುವುದೆಂದೂ ತೋರಲಿಲ್ಲ. ತಾಯಿ–ಮಗಳು ಮುಂದಿನ ಕಷ್ಟದ ದಿನಗಳ ಚಿಂತನೆಯಲ್ಲಿ ಒಂದೆರಡು ದಿನಗಳು ಕಳೆದರು. ಅಷ್ಟರಲ್ಲಿ ಒಂದುದಿನ ಬೆಳಿಗ್ಗೆ ಮೂಸಬ್ಬ ಬ್ಯಾರಿ ಹಾಜರಾದ. ಬಂದವನೆ, ತುಳುವಿನಲ್ಲಿ ಒಂದೆರಡು ಔಪಚಾರಿಕ ಧೈರ್ಯದ ಮಾತುಗಳನ್ನಾಡಿ– "ಇನ್ನು ಐದು ದಿನಗಳಲ್ಲಿ ಆ ಕಾಗದ ಬರೆದ ಪುತ್ತೂರಿನ ವಕೀಲ ಮಿತ್ರರೂ ಶಾನುಭಾಗರೂ ಬರುತ್ತಾರೆ. ಆ ದಿನ ಸಾಲದ ವ್ಯವಹಾರ ತೀರಿಸುವ. ಭಟ್ಟರನ್ನು ಕೈಹಿಡಿದು ನಡೆಯಿಸಿದವನು ನಿಮ್ಮನ್ನೂ ನಡೆಸುವನು. ಚಿಂತಿಸಬೇಡಿ" ಎಂದು ನುಡಿದನು. ಮೂಸಬ್ಬನ ಮಾತುಗಳು ಕಾವೇರಮ್ಮನಿಗಾಗಲೀ ಸಾವಿತ್ರಿಗಾಗಲೀ ತಿಳಿಯಲಿಲ್ಲ. ಮೃದು ಮಾತುಗಳನ್ನಾಡಿ ಬ್ಯಾರಿಯೂ ನಮ್ಮನ್ನು ಮೋಸಪಡಿಸುವನೇ ಎಂಬ ಹೆದರಿಕೆಯೂ ಆಯ್ತು. ಆದರೆ ಬೇರೆ ದಿಕ್ಕಿಲ್ಲ. ಸಹಾಯ ಮಾಡುವ ಅಥವಾ ದಾರಿ ತೋರಿಸುವ ಬಂಧುಗಳಿಲ್ಲ. ಸ್ನೇಹಿತರಿಲ್ಲ. ಐದು ದಿನಗಳು ಕಳೆದುವು. ಅಂದು ನಿಗದಿಪಡಿಸಿದ ಐದನೆಯ ದಿನ, ಬೆಳಗಾಗುವ ಮುನ್ನವೇ ಕಾವೇರಮ್ಮ ಸ್ನಾನ ಪೂರೈಸಿ ಮನೆ ದೇವರೆದುರು ದೀಪ ಹಚ್ಚಿ ನಿರ್ಮಾಲ್ಯ ತೆಗೆದು ಶುಚಿಗೊಳಿಸಿ ಪೂಜೆಗೆಂದು ಕುಳಿತರು. ಇಂದು ಮನೆಯಲ್ಲಿ ಮನೆ ದೇವರು ವೆಂಕಟರಮಣನ ಕೊನೆಯ ಪೂಜೆಯೇ–ಎಂಬ ಆತಂಕ ಮನದಾಳದಲ್ಲಿ. ಬಹಳ ಕಾಲ ಮೊರೆಯಿಟ್ಟರು. ಕಣ್ಣೀರು ಸುರಿಸಿದರು. ಕೊನೆಗೂ ಪೂಜೆಯನ್ನು ಮುಗಿಸಿ ಮನೆಯೆದುರಿನ ಚಾವಡಿಯಲ್ಲಿ

ಕಾಲು ಚಾಚಿ ಕುಳಿತರು. ಸಾವಿತ್ರಿ ಅಡುಗೆ ಮನೆಯಲ್ಲಿ ಏನೋ ಶ್ಲೋಕಗಳನ್ನು ಗುಣಿಗುಣಿಸುತ್ತಾ ಕೆಲಸ ಮಾಡುತ್ತಿದ್ದಳು. ಬೆಳಗಾಗಿ ಬಿಸಿಲು ಚಾವಡಿಗೆ ತೂರಿ ಬಂದಿತ್ತು. ಕುಳಿತಿದ್ದ ಕಾವೇರಮ್ಮನ ಮನದೊಳಗೆ, ಮದುವೆಯಾಗಿ ಆ ಮನೆಗೆ ಮೊದಲು ಬಂದಂದಿನಿಂದ ಆ ತನಕದ ಕಷ್ಟ-ಸುಖದ ನೆನಪುಗಳ ಚಿತ್ರಗಳೆಲ್ಲಾ ಸಾಲು ಸಾಲಾಗಿ ಬಂದುವು. ಅತ್ತೆ-ಮಾವಂದಿರ ಕಾಲ. ಅವರ ದೇವರ ಪೂಜೆಗಳ ಶ್ರದ್ಧೆ. ಆದರಾತಿಥ್ಯ, ಊರ ಜನರ ನೆನಪುಗಳು, ಇವೆಲ್ಲ ದುಗುಡ ಹೆಚ್ಚಿಸಿದುವು. ಮಾವನ ಒಂದು ಮಾತು ಪುನಃ ಪುನಃ ನೆನಪು ಬಂತು. "ಮನೆ ದೇವರು ತಿರುಪತಿ ವೆಂಕಟರಮಣನ ನಿತ್ಯ ಪೂಜೆ, ಅವನ ಮುಡಿಪು-ಇವುಗಳನ್ನು ಎಂದೂ ತಪ್ಪಿಸಬೇಡಿ. ನಿಮ್ಮನ್ನು ಎಂದೂ ಅವನು ಕೈಬಿಡುವುದಿಲ್ಲ" ಹೌದು ನಿತ್ಯ ಪೂಜೆಯೇನೋ ಶ್ರದ್ಧೆಯಿಂದ ನಡೆದಿದೆ. ಆದರೆ ಮುಡಿಪು ಈ ತನಕವೂ ಸಲ್ಲಿಸಲಿಲ್ಲ. ಆದರಿಂದ ಈ ವಿಪತ್ತುಗಳೇ? ಇನ್ನು ಮುಂದೆ ಈ ದೇವರ ಮನೆ ಯಾರಿಗೆ ಹೋಗುತ್ತದೆ ? ದೇವರ ಮುಡಿಪಿನ ಗತಿಯೇನು ? ಎಷ್ಟೋ ತಲೆಮಾರುಗಳಿಂದ ಬದುಕಿ ಬಂದ ಮನೆಯಲ್ಲಿ ಇಂದು ಕೊನೆಯ ಪೂಜೆಯೋ ? ಅಷ್ಟರಲ್ಲಿ ಆಚೆಬೈಲು ಅಂಬಾಭಟ್ಟರ ನೆನಪು ಹಣಕಿತು. ಅವರ ಹೆಂಡತಿಗೆ ಅದೇನೋ ವಾಸಿಯಾಗದ ಅಪಸ್ಮಾರ ಕಾಯಿಲೆ. ಅದಕ್ಕಾಗಿ ಮದ್ದು. ಮನೆ ತುಂಬಾ ಮಕ್ಕಳು. ಹಿರಿಮಗ, ಶ್ಯಾಮನ ಜತೆಯವನು. ಅವನದ್ದೂ ಅನಿರೀಕ್ಷಿತ ಮರಣ. ಕೊನೆಗೆ ಅವರ ನಂಬಿಕೆಯ ತಿಮ್ಮಣ್ಣನೇ ಸಾಲ ವಸೂಲಿಗಾಗಿ ಕೋರ್ಟಿನ ಮುಖಾಂತರ ಮನೆ ಆಸ್ತಿಗಳನ್ನು ಏಲಂ ಪಡಿಸಿ ಬೇನಾಮಿಯಾಗಿ ಪಡೆದ. ಹಿರಿಯರಿಂದ ಬಂದ ಮನೆ ಆಸ್ತಿಯೆಲ್ಲಾ ಕಳೆದು ಮನೆಯವರೆಲ್ಲಾ ದಿಕ್ಕಾಪಾಲಾಗಿ ಹೋದರು. ಈಗ ನಮ್ಮ ಗತಿ ? ಆದರೆ ಮೂಸಬ್ಬ ಅಂಥವನಲ್ಲ. ಯಜಮಾನರ ಬಾಲ್ಯ ಸ್ನೇಹಿತ. ಅವನನ್ನು ಸಂಶಯಿಸುವುದು ಸರಿಯಲ್ಲ. ಹಾಗಿದ್ದರೆ ಸಮೀಪದ ಬಂಧು, ನಾರಾಯಣನ ಸ್ವಭಾವವೇನು ? ಸಾಲದ ನೆಪದಲ್ಲಿ ಬಂಗಾರದಂಥ ಭೂಮಿಯನ್ನು ಅರ್ಧ ಬೆಲೆಗೆ ಬಗಲಿಗೆ ಹಾಕಿಕೊಂಡರಲ್ಲಾ. ಈ ಕಾಲದಲ್ಲಿ ಯಾರನ್ನು ನಂಬಬಹುದು ? ಇದಕ್ಕೆಲ್ಲಾ ಯಾರು ಕಾರಣ ? ಯಾಕೆ ಹೀಗಾಯ್ತು ? ಪುನಃ ಮನೆ ದೇವರು, ಸಂದಾಯವಾಗದ ತಿಮ್ಮಪ್ಪನ ಮುಡಿಪು-ಮನದೊಳಗೆ ಕಾಡತೊಡಗಿತು. ಇನ್ನೊಂದು ಸಲ ಇದೇ ಬಾಳನ್ನು ದೇವರು ಕರುಣಿಸಿದರೆ,ಈ ತಪ್ಪುಗಳೊಂದನ್ನೂ ಮಾಡಲು ಬಿಡಲಾರೆ- ಮಾಡುತ್ತಿರಲಿಲ್ಲ. ಶ್ಯಾಮ ಸಾಯಲಾರ. ಸಾವಿತ್ರಿಯ ಮಾಂಗಲ್ಯ ಉಳಿಯುತ್ತಿತ್ತು. ಯಜಮಾನರು ಇಳಿ ವಯಸ್ಸಿನ ಆರಾಮ ಜೀವನ ಸವಿಯುತ್ತಿದ್ದರು. ಆದರೆ ಇಂದು ಏನಾಗುತ್ತದೆ? ತಲೆ ತಿರುಗಿತು. ಹೊಟ್ಟೆ ತಳಮಳಿಸಿತು. ಮೈಯೆಲ್ಲಾ ಬೆವತು ಕುಳಿತಲ್ಲೇ ಕಣ್ಣು ಮುಚ್ಚಿ ಗೋಡೆಗೊರಗಿದರು. ಅಷ್ಟರಲ್ಲಿ ಅಂಗಳದ ಮೂಲೆಯಲ್ಲಿದ್ದ ನಾಯಿ ಜೋರಾಗಿ ಬೊಗಳಿತು. ಕಣ್ತೆರೆದು ನೋಡುವಾಗ ದೂರದಲ್ಲಿ ಬಿಳಿ ವಸ್ತ್ರಧಾರಿ ಪುತ್ತೂರಿನ ವಕೀಲರು, ಶ್ಯಾನುಭಾಗರು ಮತ್ತು ಅವರ ಹಿಂದಿನಿಂದ ಮೂಸಬ್ಬ ಬ್ಯಾರಿ ಸಾಲಾಗಿ ಬರುತ್ತಿದ್ದಾರೆ. ಅಂತೂ ಈ ತನಕ ಕಾದಿದ್ದ, ಆಗಲೇ ಬೇಕಾದ

ಮುಂದೇನಾಗುತ್ತದೆಂದು ತಿಳಿಯದ, ಏನೋ ಕೊನೆಯ ವಿಪತ್ತಿನ ಘಟನೆಯಾಗುತ್ತದೆ. ಇಲ್ಲಿಗೆ ಮುಗಿಯುತ್ತದೆ. ಇದೇ ಮನದೊಳಗಿನ ಭಯ ಚಿಂತೆಗಳ ಕೊನೆ ಎಂಬ ಧೈರ್ಯದಲ್ಲಿ ಸಾವರಿಸಿ ನಿಂತರು. ಸಾವಿತ್ರಿಯಲ್ಲಿ,ಕಾಲು ತೊಳೆಯಲು ನೀರು, ಒರೆಸಲು ಟೈರಾಸು ತರಲು ಹೇಳಿದರು.

ಅಷ್ಟರಲ್ಲಿ ಅವರು ನಸು ನಗುತ್ತಾ ಚಾವಡಿ ಮೇಲೆ ಹತ್ತಿ ಬಂದರು. ಇಟ್ಟಿದ್ದ ಹಿತ್ತಾಳೆ ಚೊಂಬಿನ ನೀರಿನಲ್ಲಿ ಕಾಲು ತೊಳೆದುಕೊಂಡು ಹಾಸಿದ ಚಾಪೆಯಲ್ಲಿ ಕುಳಿತರು. ಮೂಸಬ್ಬ ಸ್ವಲ್ಪ ದೂರ ಪ್ರತ್ಯೇಕ ಕುಳಿತು ಕೊಂಡ. ಬಂದವರ ನಗು ಮುಖ ನೋಡಿ ಕಾವೇರಮ್ಮನ ಮನಸ್ಸಿನ ತಳಮಳ ಸ್ವಲ್ಪ ಕಡಿಮೆಯಾಯ್ತು. ಯಜಮಾನರ ಹಳೆಯ ಸ್ನೇಹಿತ, ಕುಟುಂಬದ ಹಿತ ಚಿಂತಕ. ಹಸನ್ಮುಖಿ ವಕೀಲರ ಮತ್ತು ಶಾನುಭೋಗರ ಪರಿಚಯ ಮೊದಲಿಂದಲೇ ಇತ್ತು. ಸಾಂಪ್ರದಾಯಿಕ ಉಪಚಾರ, ಮಾತುಕತೆಗಳ ಅನಂತರ ವಕೀಲರೇ ನಿಧಾನವಾಗಿ ಮೃದುವಾಗಿ ಮಾತು ಪ್ರಾರಂಭಿಸಿದರು. ಅವರೆಂದ ಮಾತಿನ ಒಟ್ಟು ಅಭಿಪ್ರಾಯ ಇಷ್ಟೆ: "ಗೋವಿಂದಭಟ್ಟರ ಜೀವಿತದ ಕೊನೆಯ ದಿನಗಳಲ್ಲೇ ಅವರ ಒಟ್ಟು ಸಾಲ ಉಳಿದ ಆಸ್ತಿಯ ಬೆಲೆ ಸಮವಾಗುತ್ತಾ ಬಂದಿತ್ತು. ಇನ್ನು ತಾನು ಹೆಚ್ಚು ಕಾಲ ಬದುಕಲಾರೆ ಎಂಬ ಭಯವೂ ಅವರನ್ನಾವರಿಸಿತ್ತು. ತಾನು ಸ್ನೇಹಿತ ಮೂಸಬ್ಬನ ಋಣ ತೀರಿಸದೆ ಹೋಗಬಾರದೆಂದು ನಿರ್ಧರಿಸಿ, ವಕೀಲರ ಅಭಿಪ್ರಾಯದಂತೆ ಕೋರ್ಟು ಮುಖಾಂತರ ತಮ್ಮ ಆಸ್ತಿಯನ್ನು ಏಲಂ ಪಡಿಸಿ ಮೂಸಬ್ಬನ ಹೆಸರಿಗೆ ಅವನಿಗೆ ತಿಳಿಸದೆ ವರ್ಗಾಯಿಸಲಾಯಿತು. ಅಷ್ಟರಲ್ಲಿ ಅನಿರೀಕ್ಷಿತವಾಗಿ ಗೋವಿಂದ ಭಟ್ಟರು ಮೃತಪಟ್ಟರು. ಭಟ್ಟರ ಮನೆ, ಆಸ್ತಿ ಎಲ್ಲಾ ಮೂಸಬ್ಬನದ್ದಾಗಿತ್ತು. ಆದರೆ ಮೂಸಬ್ಬ—ಭಟ್ಟರ ಹಿರಿಯರ ಆಸ್ತಿ ಬದುಕು ತನಗೆ ಬೇಡ. ಅವರ ಮನೆ ಆಸ್ತಿಗಳನ್ನು ಮಗಳು ಸಾವಿತ್ರಿಗೇನೇ ಬರೆಸಿಕೊಡಬೇಕೆಂದೂ, ಭಟ್ಟರಿಂದ ಬರತಕ್ಕ ಸಾಲದ ಅಸಲು ಹಣವನ್ನು ಪ್ರತಿವರ್ಷದ ಫಸಲಿನಿಂದ ಪಡೆಯುವ ಏರ್ಪಾಡು ಮಾಡಬೇಕೆಂದೂ ಹಠ ಹಿಡಿದನು. ಆ ಪ್ರಕಾರವೇ ಈಗ ಎಲ್ಲಾ ಕರಾರು ಮಾಡಿ ತಂದಿದ್ದೇವೆ. ನಿಮ್ಮ ಹಿರಿಯರ ಮನೆ, ಆಸ್ತಿ ಎಲ್ಲವನ್ನೂ ನಿಮ್ಮ ಮಗಳು ಸಾವಿತ್ರಿಯ ಹೆಸರಿಗೆ ಇಷ್ಟರಲ್ಲೇ ನೋಂದಾಯಿಸಲಾಗಿದೆ. ಮೂಸಬ್ಬನ ಸಾಲ ಮರುಪಾವತಿಗೆ ಇನ್ನು ನಾಲ್ಕು ಅಥವಾ ಐದು ವರ್ಷಗಳ ಫಸಲನ್ನು ಅವನಿಗೆ ಬಿಟ್ಟು ಕೊಡಿ. ಮುಂದಿನ ಜೀವನ ಸುಗಮವಾಗುವುದು". ಇಷ್ಟು ಹೇಳಿ ಅದಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಕಾವೇರಮ್ಮನ ಮುಂದಿಟ್ಟರು. ಕಾವೇರಮ್ಮನಿಗೂ ಸಾವಿತ್ರಿಗೂ ನಂಬಲಾಗದಷ್ಟು ಸಂತೋಷ, ಆಶ್ಚರ್ಯ, ಜತೆಯಲ್ಲಿ ತಮ್ಮ ಅಸಹಾಯಕತೆಗಾಗಿ ದುಃಖ—ಒಟ್ಟಾಗಿ ಮಾತು ಬಾರದೆ ಮೂಕರಾದರು. ಮೂಸಬ್ಬ ಬ್ಯಾರಿ ಮಾತ್ರ ನಸು ನಗುತ್ತಾ ತಲೆ ತಗ್ಗಿಸಿ ನೆಲವನ್ನೇ ನೋಡುತ್ತಾ ಮೃದುವಾಗಿ ತನ್ನಲ್ಲೇ ತಾನಾಗಿ ಹೇಳುವಂತೆ ನುಡಿದ: "ಹೌದಮ್ಮ, ಭಟ್ಟರೇ ನನ್ನನ್ನು ಮೊದಲಲ್ಲಿ ಅಡಿಕೆ ವ್ಯಾಪಾರಕ್ಕೆ ಹಚ್ಚಿದರು. ಅಂದು ಬಹಳ ವರ್ಷಗಳ ಹಿಂದೆ ಊಟಕ್ಕೆ ಠಿಕಾಣೆ

ಇಲ್ಲದೆ ತೆಂಕಲಾಗಿ ದೂರದೂರಿಗೆ ಓಡಿ ಹೋಗುವ ಪದ್ಧತಿಯಲ್ಲಿದ್ದೆ ನಾನು. ಆಗ ಒಂದು ದಿನ ಬೆಳಗ್ಗೆ ದೇವರಂತೆ ಬಂದರು ಭಟ್ಟರು ನನ್ನ ಮನೆಗೆ. ನನ್ನ ನಿರ್ಧಾರ ಕೇಳಿ ಮರುಗಿ ಧೈರ್ಯ ಹೇಳಿದರು. ಅಡಿಕೆ ಬೇರ ಮಾಡಲು ಹೇಳಿ, ಗತಿ ಇಲ್ಲದ ನನಗೆ ಆ ವರ್ಷದ ಫಸಲನ್ನೆಲ್ಲಾ ಕೊಟ್ಟರು. ಅವರಲ್ಲವಾಗಿದ್ದರೆ ನಾನು ಇಲ್ಲಿ ಇರುತ್ತಿರ ಲಿಲ್ಲ. ಆ ಮೇಲೆ ಪ್ರತಿವರ್ಷವೂ ಫಸಲು ನನಗೆ ಕೊಟ್ಟು ವ್ಯಾಪಾರ ಮಾಡಲು ಪ್ರೋತ್ಸಾಹಿಸಿದರು. ಸಣ್ಣ ವ್ಯಾಪಾರ ದೊಡ್ಡದಾಗಿ ಬೆಳೆಯಿತು. ದೇವರು ಕೈ ಹಿಡಿದು ನಡೆಯಿಸಿದ. ಅಂಥಾ ಭಟ್ಟರ ಮಗಳ ಮದುವೆ ಕಾಲದಲ್ಲಿ ನಾನು ಸಹಾಯ ಮಾಡದಿದ್ದರೆ ಅವರ ಋಣ ಹೇಗೆ ತೀರಿತು—ಎಂದು ನೆನೆಸಿ ಸ್ವಲ್ಪ ಸಹಾಯ ಮಾಡಿದೆನು. ಅವರು ಬಹಳ ಸಾತ್ವಿಕರು. ನನಗೆ ತಿಳಿಸದೆ ವಕೀಲರ ಮೂಲಕ ಸಾಲದ ಭದ್ರತೆಗಾಗಿ ಆಸ್ತಿ ಯನ್ನು ನನ್ನ ಹೆಸರಿಗೆ ಪರಭಾರೆ ಮಾಡಿ ದರು. ಅಷ್ಟರಲ್ಲಿ ಅವರ ದಿನ ಕಳೆಯಿತು. ವಿಷಯ ನನಗೆ ತಿಳಿದೊಡನೆ ನಿಮ್ಮ ವಕೀಲ ರಲ್ಲಿ ಹೇಳಿ ಆಸ್ತಿಯನ್ನು ನಿಮ್ಮ ಮಗಳ ಹೆಸರಿಗೆ ವರ್ಗಾಯಿಸಿದ್ದೇನೆ. ನನಗೆ ಬರತಕ್ಕ ಅಸಲು ಹಣ ನಾಲ್ಕು—ಐದು ವರ್ಷಗಳ ಅಡಿಕೆ ಫಸಲಿನಲ್ಲಿ ಅತಿ ಸುಲಭವಾಗಿ ಬರು ತ್ತದೆ. ದೇವರಂತೆ ನನ್ನ ಮನೆಗೆ ಅಂದು ಬಂದ ಭಟ್ಟರ ಪ್ರೀತಿಯ ಋಣವನ್ನು ಸ್ವಲ್ಪವಾದರೂ ತೀರಿಸಲು ದೇವರು ಸಹಾಯ ಮಾಡಿದರು. ಇದೆಲ್ಲಾ ದೈವೇಚ್ಛೆ. ಇಷ್ಟು ಅರ್ಥ ಬರುವಂತೆ ನಿಧಾನವಾಗಿ ತಡೆ ತಡೆದು ನುಡಿದನು. ಎಲ್ಲರೂ ಮೂಕ ರಾಗಿದ್ದರು. ಕಾವೇರಮ್ಮ ಮತ್ತು ಸಾವಿತ್ರಿ ಯರ ಕಣ್ಣುಗಳಿಂದ ಕೃತಜ್ಞತೆ ಕಣ್ಣೀರಾಗಿ ತೊಟ್ಟಿಕ್ಕುತ್ತಿತ್ತು.

ಟಾಲ್‌ಸ್ಟಾಯ್‌ರವರ ವೃದ್ಧ ಮಾರ್ಟಿನ್ ರಾತ್ರಿ ಮಲಗುವ ಮುನ್ನ ಬೈಬಲ್ ಪಠಿಸಿ ಕುಳಿತಾಗ ಕತ್ತಲೆಯ ಮೂಲೆಯಿಂದ ಧ್ವನಿಯೊಂದು ಕೇಳಿಸಿತು. "ಮಾರ್ಟಿನ್ ಮಾರ್ಟಿನ್, ನಾಳೆ ನಿನ್ನ ಬಾಗಿಲಿಗೆ ಬರುತ್ತೇನೆ. ಗುರುತಿರಲಿ" ಮರುದಿನ ಹಲವು ರೂಪಗಳಲ್ಲಿ ಏಸು ಬಾಗಿಲಿಗೆ ಬಂದ. ಬಂದವರು ಯಾರೆಂಬು ದನ್ನು ಅರಿಯದೆ ಅವರನ್ನು ಉಪಚರಿಸಿದ ಮಾರ್ಟಿನ್. ರಾತ್ರಿ ಬೈಬಲ್ ಪಠಿಸಲು ಕೈಗೆತ್ತಿಕೊಂಡಾಗ ಕತ್ತಲೆಯ ಮೂಲೆ ಯಿಂದ ಪುನಃ ಧ್ವನಿಯೊಂದು ಕೇಳಿಸಿತು: "ಹಸಿದು ಬಾಯಾರಿ ಬಂದಿದ್ದ ಪರದೇಶಿ ಯಾದ ನನಗೆ ಬಾಗಿಲು ತೆರೆದು ಉಪಚರಿ ಸಿದೆ. ಪ್ರೇಮವೇ ನನ್ನ ನಿಜ ಸ್ವರೂಪ". ಮಾರ್ಟಿನ್ ಧನ್ಯತೆಯಲ್ಲಿ ಕಣ್ಣೀರು ಮಿಡಿದ.

ನೀತಿ ಹಾಸಿದ ಪಥದಿ ಪ್ರೀತಿಯಿಂ ನಡೆ ನೀನು
ಪ್ರೀತಿ ಕಾಣಿಪ ದೃಶ್ಯ ನೀತಿಯಿಂ ದೃಢಪಡಲಿ
ನೀತಿರಹಿತನ ಪ್ರೀತಿ ಧೃತರಾಷ್ಟ್ರ ವ್ಯಾಮೋಹ
ಪ್ರೀತಿರಹಿತನ ನೀತಿ ಗೌತಮತೆ ಅತ್ರಿಸೂನು.

———

ಕ್ರಾಂತಿಕಾರಕ ಕವಿ ಕಲ್ಕಿ

ಟಿ. ಎಸ್. ಲಲಿತ
೭೦೨, ಮೊದಲನೆ ಮಹಡಿ, ೧೭ನೇ ಮೇನ್
ಸರಸ್ವತಿಪುರಂ, ಮೈಸೂರು–೯

ಸುಪ್ರಸಿದ್ಧ ವ್ಯಕ್ತಿ ಎನಿಸಿಕೊಳ್ಳಲು ಪುರುಷನ ಮೆದುಳು, ಸ್ತ್ರೀಯ ಹೃದಯ ಹಾಗೂ ಮಗುವಿನ ಸ್ವಭಾವವಿರಬೇಕೆನ್ನುವುದು ರಷ್ಯನ್ ಬೊಂಬೆ ಆಟಗಾರನೊಬ್ಬನ ಅಭಿಪ್ರಾಯ. ಪ್ರಬಂಧಕಾರ, ಪತ್ರಿಕೋದ್ಯಮಿ, ಕಾದಂಬರಿಕಾರ, ಕವಿ, ಪ್ರವಾಸ ಸಾಹಿತಿ ಹಾಗೂ ಸಮಾಜ ಸುಧಾರಕನಾಗಿ ತಮಿಳು ಬರಹದಲ್ಲೊಂದು ಕ್ರಾಂತಿ ತಂದು, ಅದನ್ನು ಶ್ರೀಮಂತವಾಗಿಸಿ 'ಕಲ್ಕಿ' ಎಂದು ಜನಪ್ರಿಯತೆಗಳಿಸಿದ್ದ ರ. ಕೃಷ್ಣಮೂರ್ತಿಯವರಲ್ಲಿ ಈ ಎಲ್ಲ ಗುಣಗಳು ಮನೆ ಮಾಡಿದ್ದವು. ಹೊಸ ಪದ್ಧತಿಯ ಸ್ಥಾಪಕನಾಗಿ, ಮುಂದಿನ ಪೀಳಿಗೆಯ ತಮಿಳು ಬರಹಗಾರರಿಗೆ ಆದರ್ಶ ಪ್ರಾಯರಾದರು. ಅವರ ತಲೆ, ಜ್ಞಾನ ಭಂಡಾರವಾದರೆ, ಹೃದಯ, ಜೊತೆಯವರ ದುಃಖಕ್ಕೆ ಕರಗಿ ಮರುಗುತ್ತಿತ್ತು. ಅವರ ಸ್ವಭಾವ ಮಕ್ಕಳ ಉತ್ಸಾಹ ಹಾಗೂ ಚಟುವಟಿಕೆಯಿಂದ ಕೂಡಿ ಸದಾ ಕ್ರಿಯಾಶೀಲವಾಗಿರುತ್ತಿತ್ತು.

ವಾಲ್ಮೀಕಿ ರಾಮಾಯಣದ ಸುಂದರ ಕಾಂಡದಲ್ಲಿ ಉತ್ಸಾಹ ಗುಂದಿದ ಹನುಮಂತ "ಉತ್ಸಾಹವೇ ಸಂಪತ್ತಿನ ಮೂಲ, ಯಶಸ್ಸಿನ ಕೀಲಿ ಕೈ" ಎಂದು ತನ್ನನ್ನೇ ಸಮಾಧಾನಪಡಿಸಿಕೊಂಡು ಉತ್ಸಾಹ ತಳೆಯುತ್ತಾನೆ. ಕಲ್ಕಿ ಕೂಡ ಜೀವನ ದುದ್ದಕ್ಕೂ ಇದೇ ಸೂತ್ರವನ್ನಳವಡಿಸಿಕೊಂಡು ತಮ್ಮ ಸಂಪರ್ಕಕ್ಕೆ ಬಂದವರೆಲ್ಲರಲ್ಲೂ ಎಣೆ ಇಲ್ಲದ ಉತ್ಸಾಹ ತುಂಬುತ್ತಿದ್ದರು.

ಈ ವರ್ಷ ಎಲ್ಲೆಡೆ ಹುಟ್ಟು ಹಬ್ಬದ ಶತಮಾನೋತ್ಸವ ಆಚರಿಸುತ್ತಿರುವ 'ಕಲ್ಕಿ' ಹುಟ್ಟಿದ್ದು, ಅಂದಿನ ತಂಜಾವೂರು ಜಿಲ್ಲೆಯ ಮನಾಲ್‌ಮಡುವಿನಲ್ಲಿ ೧೮೯೯ರ ಸೆಪ್ಟೆಂಬರ್ ೯ರಂದು. ನಡೆಸಿದ್ದು ಐದುವರೆ ದಶಕಗಳ ಉದ್ದೇಶಪೂರ್ಣ ಜೀವನ. ಮುಟ್ಟಿದ್ದನ್ನೆಲ್ಲ ಚಿನ್ನವಾಗಿಸುವ ಮಾಂತ್ರಿಕ ದಂಡ ಹಿಡಿದಂತೆ ಕೈಹಾಕಿದ ಎಲ್ಲ ಕ್ಷೇತ್ರಗಳಲ್ಲೂ ಹೆಸರುವಾಸಿಯಾದವರು. ಅವರ ಯೌವನದ ಉತ್ಸಾಹ ಹಾಗೂ ಹರಿತ ಬುದ್ಧಿಯನ್ನು ಕಡೆದು ರೂಪಿಸಿದವರು. ಮೂವರು ಮಹನೀಯರಾದ ವಿ. ಕಲ್ಯಾಣ ಸುಂದರಮೊದಲಿಯಾರ್, ಸುಪ್ರಸಿದ್ಧ ಸಾಹಿತಿ ಹಾಗೂ ವಿಮರ್ಶಕ ಟಿ.ಕೆ. ಚಿದಂಬರನಾಥ ಮೊದಲಿಯಾರ್, ಹಾಗೂ ಚಕ್ರವರ್ತಿ ರಾಜಗೋಪಾಲಾಚಾರಿ.

ಬುದ್ಧಿಶಾಲಿ ತರುಣ ಕಲ್ಕಿಯವರ ವಿದ್ಯಾಭ್ಯಾಸ ತಿರುಚನಾಪಳ್ಳಿಯಲ್ಲಿ. ಮಹಾತ್ಮಾಗಾಂಧಿಯವರ ಸತ್ಯಾಗ್ರಹದ ಕರೆಗೆ ಓಗೊಟ್ಟು ರಾಷ್ಟ್ರೀಯತೆಯ ಸೆಳವಿಗೆ ಸಿಕ್ಕಿದರು. ಸೋದರ ಹಾಗೂ ತಾಯಿ ನಿಷೇಧಿಸಿದರೂ, ಓದನ್ನು ಬಿಟ್ಟು ಸ್ವಾತಂತ್ರ ಸಂಗ್ರಾಮಕ್ಕೆ ಧುಮುಕಿದರು. ಮನ ಸೆಳೆವ ಅವರ ಬರವಣಿಗೆಯನ್ನು ಗುರುತಿಸಿದ ನಗರದ ಸುಪರಿಚಿತ ಕಾಂಗ್ರೆಸ್ ನಾಯಕ ಟಿ. ಎಸ್. ಎಸ್. ರಾಜನ್ ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ, ಖಾದಿ ಹಾಗೂ ಇತರ ಉತ್ತಮ ಕಾರ್ಯಕ್ರಮಗಳ ಬಗ್ಗೆ ಚಳುವಳಿಯ ಕರಪತ್ರಗಳಲ್ಲಿ ಬರೆಯುವಂತೆ ಅವರನ್ನು ಪ್ರೋತ್ಸಾಹಿಸಿದರು. ಆಗ ತಮಿಳುನಾಡು ಕಾಂಗ್ರೆಸ್ ಸಮಿತಿಯ ಮುಖ್ಯಸ್ಥರಾಗಿದ್ದ ರಾಜಾಜಿ, ತಮ್ಮ ತಿರುಚಿಯ ಭೇಟಿಯ ಸಮಯದಲ್ಲಿ ಆ ಕರಪತ್ರಗಳಿಂದ ಪ್ರಭಾವಿತರಾಗಿ ಅವುಗಳನ್ನು ಬರೆದವರ ಬಗ್ಗೆ ವಿಚಾರಿಸಿದರು. ಇದನ್ನು ಕೇಳಿದ ಕಲ್ಕಿಗೆ ವಿಪರೀತ ಸಂತೋಷವಾಗಿ ತಮ್ಮ ಗೌರವ ಧನದಲ್ಲಿ ಹೆಚ್ಚಳವನ್ನು ನಿರೀಕ್ಷಿಸುತ್ತಿದ್ದರು. ಆದರೆ ಜನತೆಯ ಹಣದ ಉಪಯೋಗದ ಬಗ್ಗೆ ಬಿಗಿ ಮುಷ್ಟಿಯ ರಾಜಾಜಿ ಕಲ್ಕಿಯನ್ನು ಕರೆದು, ಅವರು ಒಬ್ಬರೇ ಇದ್ದು ಅವರ ಜೀವನ ನಿರ್ವಹಣೆಗೆ ಅವರು ಪಡೆಯುತ್ತಿದ್ದ ಹಣ ಸಾಕಾಗುವುದಾದ್ದರಿಂದ ವೇತನದಲ್ಲಿ ಹೆಚ್ಚಳ ಅಪೇಕ್ಷಿಸಬಾರದೆಂದು ನೇರವಾಗಿಯೇ ತಿಳಿಸಿದರು. ಈ ನೇರ ನಡೆಯಿಂದ ಕಲ್ಕಿ ಕೋಪಗೊಳ್ಳದೆ, ಬದಲಿಗೆ ಜನತೆಯ ಹಣದ ಬಗ್ಗೆ ರಾಜಾಜಿಯವರ ಕಾಳಜಿಯನ್ನು ಅರ್ಥಮಾಡಿಕೊಂಡರು.

ಮುಂದೆ ಅವರು ರಾಜಾಜಿಯವರ ಪಟ್ಟಶಿಷ್ಯರಾದರು. ಕಲ್ಕಿ ಕುಟುಂಬಕ್ಕೆ ರಾಜಾಜಿಯೇ ಮಿತ್ರ, ಮಾರ್ಗದರ್ಶಿ ಎಲ್ಲವೂ. ಕಲ್ಕಿ ಕುಟುಂಬದೊಂದಿಗೆ ರಾಜಾಜಿ ಕುಟುಂಬದ ವಿವಾಹ ಸಂಬಂಧಗಳು ಮುಂದುವರಿದು, ಅವರ ಎಲ್ಲ ಕಷ್ಟಸುಖಗಳಲ್ಲೂ ರಾಜಾಜಿ ಪಾಲುದಾರರಾದರು. ಕಾಂಗ್ರೆಸ್‌ನ ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹಗಳ ಸಂಬಂಧದಲ್ಲಿ ಕಲ್ಕಿ ಸೆರೆಮನೆ ಸೇರಿದಾಗ, ರಾಜಾಜಿ ತಾವೂ ಕಾರಾಗೃಹದಲ್ಲಿದ್ದುಕೊಂಡೇ ಕಲ್ಕಿಯ ಸಂಸಾರದವರಿಗೆ ಸಮಾಧಾನ ಹೇಳಿ ಕಾಗದ ಬರೆಯುತ್ತಿದ್ದರು. ಕಲ್ಕಿ ತಮ್ಮ ಮೊದಲ ಮಗುವನ್ನು ಕಳೆದುಕೊಂಡು ಖಿನ್ನರಾದಾಗ ಅವರನ್ನು ಸಮಾಧಾನಪಡಿಸಿ, ಅವರ ಎರಡನೆಯ ಮಗುವಿಗೆ ಸ್ವತಃ ರಾಜಾಜಿಯವರೇ ಆನಂದಿ ಎಂದು ಹೆಸರಿಟ್ಟರು. ಬಾಬು ರಾಜೇಂದ್ರಪ್ರಸಾದರು ತಮಿಳುನಾಡಿಗೆ ಭೇಟಿಕೊಟ್ಟ ನೆನಪಲ್ಲಿ ಕಲ್ಕಿ ತಮ್ಮ ಮತ್ತೊಬ್ಬ ಮಗನಿಗೆ ರಾಜೇಂದ್ರನೆಂದು ನಾಮಕರಣ ಮಾಡಿದರು ರಾಜಾಜಿ.

ಕಲ್ಕಿಯವರ ಪ್ರತಿಭೆಯನ್ನು ಗುರುತಿಸಿದ ರಾಜನ್, ಪತ್ರದೊಂದಿಗೆ ಅವರನ್ನು ನವಶಕ್ತಿ ಪತ್ರಿಕೆಯ ಸಂಪಾದಕ ವಿ. ಕಲ್ಯಾಣಸುಂದರಂ ಬಳಿ ಕಳಿಸಿದರು. ವ್ಯಾಕರಣದ ತಪ್ಪುಗಳಿಲ್ಲದೆ ತಮಿಳು ಬರೆಯುವ ಸಾಮರ್ಥ್ಯ ಹೊಂದಿದ ಕಲ್ಕಿಯವರನ್ನು ಕಂಡು ಸಂತುಷ್ಟರಾದ ಕಲ್ಯಾಣಸುಂದರಂ ಅವರನ್ನು ಸಹಾಯಕ ಸಂಪಾದಕರನ್ನಾಗಿ ನೇಮಿಸಿಕೊಂಡರು. ಪತ್ರಿಕಾ ಪ್ರಪಂಚದ ತತ್ವಗಳನ್ನೆಲ್ಲಾ ಕಲ್ಕಿಗೆ ಕಲಿಸಿ, ಪ್ರಬಂಧಗಳು, ಸಂಗೀತ ವಿಮರ್ಶೆ ಹಾಗೂ

ಸಂಪಾದಕೀಯಗಳನ್ನು ಬರೆಯುವುದರಲ್ಲಿ ತರಬೇತು ನೀಡಿದರು.

ತಮಿಳು ಹಾಗೂ ಇಂಗ್ಲೀಷ್ ಪುಸ್ತಕಗಳನ್ನೋದುವ ಗೀಳಿನ ಕಲ್ಕಿ ಆಗಿನ ಕಾಲದ ಲೇಖಕ ವದುವೂರು ದೊರೆಸ್ವಾಮಿ ಅಯ್ಯಂಗಾರ್ ಹಾಗೂ ರಂಗರಾಜುರವರ ಕೃತಿಗಳನ್ನೋದುವಷ್ಟೇ ಆಸಕ್ತಿಯಿಂದ ಮಹಾಕೃತಿಗಳ ರಚನಕಾರರಾದ ಅಲೆಗ್ಸಾಂಡರ್ ಡ್ಯೂಮಾ, ಚಾರ್ಲ್ಸ್ ಡಿಕನ್ಸ್, ಆರ್. ಎಲ್. ಸ್ಟೀವನ್ಸನ್ ಹಾಗೂ ವಾಲ್ಟರ್‌ಸ್ಕಾಟ್ ಮತ್ತು ಜೋನಾಥನ್ ಸ್ವಿಫ್ಟ್‌ರವರ ಕಾದಂಬರಿಗಳನ್ನೋದುತ್ತಿದ್ದರು. ಹಾಸ್ಯ ಸಾಹಿತಿಗಳಾದ ಜೆರೋಮ್ ಕೆ. ಜೆರೋಮ್, ಪಿ. ಜಿ. ವೋಡ್ ಹೌಸ್ ಹಾಗೂ ಮಾರ್ಕ್‌ಟ್ವೇನರ ಕೃತಿಗಳೂ ಅಷ್ಟೇ ಪ್ರಿಯವಾದವು.

ನವಶಕ್ತಿಯಲ್ಲಿ ಕಲ್ಕಿಯವರ ಲೇಖನಗಳನ್ನು ಮೆಚ್ಚಿದ ಮತ್ತೊಬ್ಬ ತಮಿಳು ಸಾಹಿತಿ ಪರಳಿ. ಸು. ನೆಲ್ಲಿಯಪ್ಪರ್, ಸುಪ್ರಸಿದ್ಧ ಇಂಗ್ಲೀಷ್ ಪತ್ರಿಕೆ ಪಂಚ್‌ನ ಮಾದರಿಯಲ್ಲಿ ಹೊರಬರುತ್ತಿದ್ದ ಆನಂದ ವಿಕಟನ್‌ನ ಸಂಪಾದಕ ಎಸ್. ಎಸ್. ವಾಸನ್‌ರಿಗೆ ಕಲ್ಕಿಯ ಪರಿಚಯ ಮಾಡಿಸಿದರು. ಅವರು ಆ ಪತ್ರಿಕೆಗೆ ಕ್ರಮವಾಗಿ ಲೇಖನಗಳನ್ನು ಬರೆಯುವಂತೆ ಕಲ್ಕಿಗೆ ಸಲಹೆ ಇತ್ತರು. 'ಕಲ್ಕಿ' ಎಂಬ ಕಾವ್ಯ ನಾಮದೊಂದಿಗೆ ಆನಂದ ವಿಕಟ್‌ನಲ್ಲಿ ಮೊದಲು ಅಚ್ಚಾದ ಅವರ ಹಾಸ್ಯ ಲೇಖನ 'ಯಟ್ಟಿಕಿ ಪೊಟ್ಟಿ' ಮೂಢನಂಬಿಕೆಗಳ ಬಗ್ಗೆ ವಿಡಂಬನಾತ್ಮಕವಾಗಿ ಬರೆಯಲ್ಪಟ್ಟಿದ್ದು ಕೂಡಲೇ ಜನಪ್ರಿಯತೆ ಗಳಿಸಿ ಕಲ್ಕಿ ಮನೆ ಮಾತಾದರು. ಅಲ್ಲಿಂದ ಅವರ ಬಾಂಧವ್ಯ ಬಲವಾಗಿ ಬೆಸೆದು, ಕಲ್ಕಿ ಅವರ ಕೆಲಸಗಾರರ ತಂಡದರಲ್ಲೊಬ್ಬರಾಗಬೇಕೆಂದು ಅಪೇಕ್ಷಿಸಿದರು ವಾಸನ್. ಅದಕ್ಕಾಗಿ ಸ್ವಲ್ಪ ಸಮಯ ಕಾಯಬೇಕಾಯ್ತು.

ಸಂಪೂರ್ಣ ಪಾನನಿರೋಧಕ್ಕೆ ಅರ್ಪಿತವಾಗಿದ್ದ 'ವಿಮೋಚನಮ್' ಪತ್ರಿಕೆಯನ್ನು ತಿರುಚೆಂಗೋಡು ಗಾಂಧೀ ಆಶ್ರಮದಿಂದ ರಾಜಾಜಿ ಬಿಡುಗಡೆಗೊಳಿಸಿದಾಗ, ಕಲ್ಕಿಯನ್ನು ತಮ್ಮೊಂದಿಗೆ ಸೇರುವಂತೆ ಆಹ್ವಾನಿಸಿದರು. ಗಾಂಧೀಜಿ ಕಾರಾಗೃಹದಲ್ಲಿದ್ದ ಸಂದರ್ಭದಲ್ಲಿ 'ಯಂಗ್ ಇಂಡಿಯಾ' ಪತ್ರಿಕೆಯನ್ನು ರಾಜಾಜಿ ಸಂಪಾದಿಸುತ್ತಿದ್ದಂತೆ ಈ ಸಂದರ್ಭ ಕಲ್ಕಿಗೆ ರಾಜಾಜಿಯವರ ನೇತೃತ್ವದಲ್ಲಿ ಪತ್ರಿಕೆಯೊಂದರ ಸಂಪಾದನೆ ಹಾಗೂ ಪ್ರಕಾಶನದ ಬಗ್ಗೆ ಸೂಕ್ಷ್ಮವರಿಯಲು ಸಹಾಯ ಮಾಡಿತು. ಈ ಅನುಭವ ಮುಂದೆ ಕಲ್ಕಿಯವರು ಅದೇ ಕಾವ್ಯ ನಾಮದೊಂದಿಗೆ ತಮ್ಮ ಸ್ವಂತ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಲು ನೆರವು ನೀಡಿತು. ಉಪ್ಪಿನ ಸತ್ಯಾಗ್ರಹದ ಅನಂತರ, ಗಾಂಧಿ–ಇರ್ವಿನ್ ಒಪ್ಪಂದದಿಂದಾಗಿ ರಾಜಾಜಿ ಕೇಂದ್ರ ವ್ಯವಹಾರಗಳಿಗೆ ಸರಿದಾಗ, ವಿಮೋಚನಂ ಮುದ್ರಣ ನಿಲ್ಲಿಸುವ ಅನಿವಾರ್ಯತೆ. ಆಗವರು 'ಆನಂದ ವಿಕಟನ್' ಪತ್ರಿಕೆಗೆ ಸೇರುವಂತೆ ಕಲ್ಕಿಗೆ ಸಲಹೆ ಮಾಡಿದರು. ಪತ್ರಿಕಾ ಪ್ರಪಂಚದ ಬಗೆಗಿದ್ದ ಕಲ್ಕಿಯವರ ತೀಕ್ಷ್ಣ ಬುದ್ಧಿ 'ವಿಕಟನ್' ಮೂಲಕ ಬೆಳಕಿಗೆ ಬಂತು. ಪ್ರತಿ ಸಂಚಿಕೆಯ ಅವರ ಸಂಪಾದಕೀಯ, ರಾಷ್ಟ್ರೀಯ ಪ್ರಜ್ಞೆ ಹೊಂದಿ, ಬ್ರಿಟಿಷ್ ಆಡಳಿತಗಾರರ ಹಾಗೂ ಅವರ ಸ್ಥಳೀಯ ಅಪ್ತರ ಕಟು ಟೀಕೆಯಿಂದ

ಕೂಡಿರುತ್ತಿತ್ತು. ಸಹಜವಾಗೇ ಇದು ಬ್ರಿಟಿಷರಿಗೆ ಅಪ್ರಿಯವಾಗಿ ಅವರು ಪತ್ರಿಕೆಯನ್ನು ನಿಯಂತ್ರಣಗೊಳಿಸುವ ಸೂಚನೆ ನೀಡುತ್ತಿದ್ದರು. ಕಲ್ಕಿ ಸ್ವಲ್ಪ ಸಂಯಮ ತೋರಬೇಕೆಂದು ವಾಸನ್‌ರಿಗೂ ಅನಿಸಿದರೂ, ಕಲ್ಕಿ ಹಾಗೆಯೇ ಮುಂದುವರಿದರು. ೧೯೪೧ರ ಚಳುವಳಿಯಲ್ಲಿ ಪಾಲ್ಗೊಳ್ಳಲು ಕಲ್ಕಿ ನಿರ್ಧರಿಸಿದಾಗ, ವಾಸನ್ ತಮ್ಮ ಅಭಿಪ್ರಾಯವನ್ನು ಹೊರಹಾಕಿದರು. ಯಾವುದೇ ಅಳುಕಿಲ್ಲದೆ ಕಲ್ಕಿ ವಿಕಟನ್‌ಗೆ ರಾಜಿನಾಮೆ ಇತ್ತರು.

ರಾಜಕೀಯ ಬರವಣಿಗೆಯೊಂದಿಗೆ ವಿಕಟನ್‌ನಲ್ಲಿ ಕಲ್ಕಿಯವರ ಸಂಗೀತ ನೃತ್ಯಗಳ ಮೇಲಿನ ವಿಮರ್ಶೆಗಳು ಎಲ್ಲೆಡೆ ಹೊಗಳಲ್ಪಟ್ಟವು. ರಾಷ್ಟ್ರೀಯ ಭಾವನೆಗಳೊಂದಿಗೆ 'ತ್ಯಾಗಭೂಮಿ' ಎಂಬ ಧಾರಾವಾಹಿಯನ್ನು ಮೊದಲಬಾರಿಗೆ ವಿಕಟ್‌ನಲ್ಲಿ ಪ್ರಾರಂಭಿಸಿದುದು ಕಲ್ಕಿಯವರ ಮತ್ತೊಂದು ವಿಶೇಷ. ಕಥೆ ಸಿನೆಮಾ ಒಂದಕ್ಕಾಗಿ ಬರೆದಿದ್ದು, ಕಾರಣಾಂತರಗಳಿಂದ ಬಿಡುಗಡೆಯಾಗಲಿಲ್ಲ. ಕಥೆಯನ್ನು ಧಾರಾವಾಹಿಯಾಗಿ ಮಾಡಿ ದೃಶ್ಯಗಳನ್ನು ಚಿತ್ರಗಳ ಮೂಲಕ ತೋರಿಸುವುದರೊಂದಿಗೆ ಹೊಸತೊಂದು ಅನ್ವೇಷಣೆ ಧಾರಾವಾಹಿಗಳ ಮೂಲಕ ಓದುಗರ ಆಸಕ್ತಿ ಕಾಯ್ದಿಡಬಹುದೆಂದು ಮನವರಿಕೆಯಾಯ್ತು. ಆನಂದ ವಿಕಟನ್‌ನ ಪ್ರತಿಗಳು ಬಿಸಿ ದೋಸೆಯಂತೆ ಖರ್ಚಾಗಿ ಮನೆಯ ಸದಸ್ಯರಲ್ಲೇ ಅದನ್ನು ಮೊದಲು ಓದುವ ಬಗ್ಗೆ ಸ್ಪರ್ಧೆ ನಡೆಯುತ್ತಿತ್ತೆಂದು ಹಿರಿಯರು ಇಂದಿಗೂ ಸ್ಮರಿಸುತ್ತಾರೆ. ತಮ್ಮ ಸ್ವಂತ ಪತ್ರಿಕೆಯಲ್ಲಿ 'ಪಾರ್ಥಿಬನ್ ಕನವು' ಶಿವಕಾಮಿಯಿನ್ ಶಪಥಮ್ ಅಲೈ ಒಸೈ 'ಪೊನ್ನಿಯಿನ್ ಸೆಲ್ವನ್' ಮುಂತಾದ ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರಕಟಿಸುವುದರೊಂದಿಗೆ, ತಾವೇ ಬರೆದ ಗಾಂಧೀಜಿಯ ಆತ್ಮಕಥೆ 'ಮಾಂದರುಕ್ಕುಳ ಒರು ದೈವಂ' ಅನ್ನು ಧಾರಾವಾಹಿಯಾಗಿ ಪ್ರಕಟಿಸಿದರು. ರಾಜಾಜಿಯವರ ಜೀವನ ಚರಿತ್ರೆ 'ನಾಟುಕ್ಕು ಒರು ಪುದಲ್ವಾರ್' ಧಾರಾವಾಹಿ ಕಾರಣಾಂತರಗಳಿಂದ ಅರ್ಧಕ್ಕೆ ನಿಂತಿತು.

೧೯೪೧ರಲ್ಲಿ ಜೇಲಿನಿಂದ ಬಿಡುಗಡೆಯಾದಾಗ, ೧೯೨೨ರ ಕಾರಾಗೃಹವಾಸದಲ್ಲಿ ಅವರ ಜೊತೆಗಾರರಾಗಿದ್ದು, ತನ್ನೊಂದಿಗೇ ವಿಕಟನ್ ಪತ್ರಿಕೆಯನ್ನು ಬಿಟ್ಟಿದ್ದ ಸದಾಶಿವಂ ಜೊತೆಗೂಡಿ, ತಮ್ಮದೇ ಆದ ಪತ್ರಿಕೆ ಕಲ್ಕಿಯನ್ನು ಪ್ರಾರಂಭಿಸುವ ಯೋಜನೆ. ಪತ್ರಿಕಾ ಪ್ರಪಂಚದ ಕುಶಲತೆಯನ್ನು ಸಂಪೂರ್ಣ ಕರಗತಗೊಳಿಸಿಕೊಂಡ ಕಲ್ಕಿಯವರ ಬರಹ ಜನತೆಯ ಮನ್ನಣೆಗಳಿಸಿತು. ಅವರ ಭಾಷೆ, ಶೈಲಿ, ಪಾತ್ರಧಾರಿಗಳನ್ನು ಚಿತ್ರಿಸುತ್ತಿದ್ದ ರೀತಿಯೊಂದಿಗೆ ಚಾರಿತ್ರಿಕ ಕಾದಂಬರಿಗಳು ಜೀವಂತಿಕೆಯೊಂದಿಗೆ ಓದುಗರ ಸಂಪೂರ್ಣ ಲಕ್ಷ್ಯವನ್ನು ತಮ್ಮತ್ತ ಸೆಳೆಯುತ್ತಿದ್ದವು. ತಮಿಳು ಚಾರಿತ್ರಿಕ ಕಾದಂಬರಿಗಳನ್ನು ರಚಿಸುವುದರಲ್ಲಿ ಅವರು ಸಿದ್ಧ ಹಸ್ತನೆನಿಸಿದರು.

ಸಮಯದ ಪರೀಕ್ಷೆಯಲ್ಲಿ ಜಯಗಳಿಸಿದ ಅವರ ಸಾಮಾಜಿಕ ಕಾದಂಬರಿ 'ಅಲೈ ಒಸೈ' ಕಲ್ಕಿಯವರ ಅತ್ಯುತ್ತಮ ಕೃತಿ. ಕಾದಂಬರಿಯ ಪಾತ್ರಗಳಾದ ಸೀತ ಧಾರಿಣಿ, ಸೂರ್ಯ ಹಾಗೂ ರಾಘವನ್‌ರ ಕಥೆಯನ್ನು

ಮನಕರಗುವಂತೆ ಚಿತ್ರಿಸುವುದರೊಂದಿಗೆ, ಅದರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯೂ ಬೆಸೆದು, ದೇಶ ವಿಭಜನೆ, ಆ ನಂತರದ ದಂಗೆಗಳು, ಜನ ವಲಸೆ ಹೋಗುವಿಕೆ, ಆ ಸಂದರ್ಭದ ನೋವು ಸಂಕಟಗಳು, ನವೋಕ್ಲಿಯಲ್ಲಿ ಜಾತೀಯ ಗಲಭೆಗಳನ್ನು ಕೊನೆಗಾಣಿಸಲು ಗಾಂಧೀಜಿಯ ಪ್ರಯತ್ನ, ಸ್ವಾತಂತ್ರ್ಯ, ಗಾಂಧೀಜಿಯ ಕೊಲೆಯನ್ನು ಚಿತ್ರಿಸಿ, ಕಾದಂಬರಿಯ ಮೂಲಕವೇ ಓದುಗರನ್ನು ಘಟನೆ ನಡೆದ ಸ್ಥಳಗಳಿಗೊಯ್ಯುತ್ತಾರೆ.ತಮಿಳು ಸಾಹಿತ್ಯದ ಈ ಅಮರ ಕೃತಿ, ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳಿಸಿ ಭಾರತದ ಎಲ್ಲ ಭಾಷೆಗಳಿಗೂ ಹಾಗೂ ರಷ್ಯನ್ ಭಾಷೆಗೂ ಭಾಷಾಂತರಗೊಂಡಿತು. ಆ ಕಾಲದ ಸ್ವಾತಂತ್ರಸಂಗ್ರಾಮ ಜೊತೆ, ಜೊತೆಗೇ ನಡೆಯುತ್ತಿದ್ದ ಸಮಾಜವಾದಿ ಹಾಗೂ ರೈತ ಚಳುವಳಿ ಮುಂತಾದುವುಗಳ ಪ್ರಭಾವವನ್ನು ಈ ಕಾದಂಬರಿಯುದ್ದಕ್ಕೂ ಕಾಣುತ್ತೇವೆ. ಅವರ ಜೀವಿತ ಕಾಲದಲ್ಲಿನ ಅವರ ಆಂತರಿಕ ಭಾವನೆಗಳು ವ್ಯಕ್ತಿಗಳ ಬಗ್ಗೆ ಅವರ ಪ್ರತಿಕ್ರಿಯೆ, ಭಾವನೆಗಳ ಪರಾಕಾಷ್ಠೆಯ ಫಲವೇ 'ಅಲೈ ಒಸೈ' ಕಾದಂಬರಿಯ ಸೃಷ್ಟಿ, ಜನತೆಯ ನಾಡಿ ಮಿಡಿತವರಿತು ಅದಕ್ಕೆ ಸಾಹಿತ್ಯದ ರೂಪು ಕೊಟ್ಟವರು ಕಲ್ಕಿ.

ಪರ್ಯಟನಾ ಪ್ರಿಯ ಕಲ್ಕಿ ದೇಶ ಸುತ್ತಿದರು. ಭಾರತ ಹಾಗೂ ಸಿಲೋನ್ ಪ್ರದೇಶಗಳ ಸಂಚಾರದ ಬಗ್ಗೆ ಬರೆದ ಬರಹಗಳು ಪ್ರವಾಸಕಥನಗಳ ಅತ್ಯುತ್ತಮ ಉದಾಹರಣೆಗಳು. ಕಂಡ ಪ್ರತಿ ಸೂಕ್ಷ್ಮ ವಿಷಯಗಳನ್ನು ಗ್ರಹಿಸಿ ತಮ್ಮ ಚಾರಿತ್ರಿಕ ಹಾಗೂ ಸಾಮಾಜಿಕ ಕಾದಂಬರಿಗಳಲ್ಲಿ ಅವುಗಳ ಉಪಯೋಗ ಪಡೆದಿದ್ದಾರೆ. ತಮಿಳು ಕವನ ಪ್ರಪಂಚಕ್ಕೂ ಅವರ ಕೊಡುಗೆ ಅಪಾರ. ಗಾನ ಕೋಕಿಲೆ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿ ನಟಿಸಿದ ಮೀರ ಚಿತ್ರದ ತಮಿಳು ಅವತರಣಿಕೆಗೆ ಅವರು ಬರೆದ ಗೀತೆಗಳು ನೆನಪಿನಲ್ಲುಳಿಯುವಂಥವು. ಹಿಂದಿ ಸಿನೆಮಾ ಹಾಗೂ ಚಿತ್ರಗೀತೆಗಳ ಬಗ್ಗೆ ಒಲವು.

ಸಹಾಯ ಬೇಡಿ ಬಂದ ಯಾರನ್ನು ಎಂದೂ ಬರಿಗೈಲಿ ಕಳಿಸಲಿಲ್ಲ ಕಲ್ಕಿ. ತಮ್ಮ ವಿರೋಧಿಗಳಿಗೂ ಅವರು ಸಹಾಯ ನೀಡಿದ್ದುಂಟು. "ನನಗೆ ಯಾರೂ ಶತ್ರುಗಳಿಲ್ಲ. ಆದರೆ ಇತರರು ನನ್ನನ್ನು ಅವರ ಶತ್ರುವೆಂದು ಪರಿಗಣಿಸಿದರೆ ನಾನೇನುಮಾಡಲು ಸಾಧ್ಯ?" ಎನ್ನುತ್ತಿದ್ದರು ಕಲ್ಕಿ. ಆದ್ದರಿಂದಲೇ ಸ್ವಾಭಿಮಾನ ಚಳುವಳಿಯ ನೇತಾರರಾದ ಪೆರಿಯಾರ್ ಇ.ವಿ.ರಾಮಸ್ವಾಮಿ,ಸಿ.ಎನ್. ಅಣ್ಣಾದುರೈಗೆ ಕಲ್ಕಿಯ ಬಗ್ಗೆ ಅಪಾರ ಪ್ರೀತಿ, ಅಣ್ಣಾದುರೈ ಅವರ "ಒರೆ ಇರವು" ನೋಡಿದ ನಂತರ ಅದರ ಬಗ್ಗೆ ಅತ್ಯಂತ ಪ್ರಶಂಸನೀಯ ವಿಮರ್ಶೆ ಬರೆದು ಅವರನ್ನು ತಮಿಳುನಾಡಿನ ಬರ್ನಾರ್ಡ್‌ಷಾ ಎಂದು ವರ್ಣಿಸಿದರು. ಕಲ್ಕಿ ಸತ್ತಾಗ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ "ಅವರು ಶತ್ರುಗಳಲ್ಲೂ ಉತ್ತಮ ಗುಣಗಳನ್ನು ಗುರುತಿಸುವ ಉನ್ನತ ವ್ಯಕ್ತಿತ್ವದ ವ್ಯಕ್ತಿ" ಎಂದಿದ್ದಾರೆ ಅಣ್ಣಾದುರೈ.

ಸಾಮಾಜಿಕ ಕಾರಣಗಳಿಗಾಗಿ ಶ್ರಮಿಸುತ್ತಿದ್ದರು ಕಲ್ಕಿ. ಎಟ್ಟಾಯಪುರಂನ, ಕವಿ ಸುಬ್ರಮ್ಮಣ್ಯ ಭಾರತಿ ಸ್ಮಾರಕ ಹಾಗೂ ಗಿಂಡಿಯಲ್ಲಿ ಮಹಾತ್ಮಾಗಾಂಧಿ ಸ್ಮಾರಕ ಸ್ಥಾಪನೆ ಅವರ ಸಾಧನೆಗಳಲ್ಲಿ ಕೆಲವು.

ವ್ಯಕ್ತಿ ಸತ್ತನಂತರ ಅವನ ಬಗ್ಗೆ ಹೊಗಳಿಕೆಯ ಹೊಳೆ ಹರಿಸುವ ಬದಲು, ಆ ಸಮಯಕ್ಕೆ ಅಗತ್ಯವಾದ ಆರ್ಥಿಕ ಸಹಾಯ ಒದಗಿಸುವುದು ಆವಶ್ಯಕವೆಂದರಿತ ಕಲ್ಕಿ ಸುಬ್ರಮ್ಮಣ್ಯ ಭಾರತಿಯವರು ಮೃತರಾದಾಗ, ಕಷ್ಟದಲ್ಲಿದ್ದ ಅವರ ಸಂಸಾರಕ್ಕೆ ಸಹಾಯಧನ ಕೊಡಿಸಿ, ಆ ಪರಂಪರೆಯಲ್ಲೇ ಮೊದಲಿಗರೆನಿಸಿಕೊಂಡರು.

ಹಾಸ್ಯ ಸಾಹಿತ್ಯ ಕ್ಷೇತ್ರದಲ್ಲಿ ಕಲ್ಕಿಯವರ ಬರವಣಿಗೆ ಅವರ ನೆನಪುಳಿಸಿದೆ. ತಮ್ಮನ್ನೇ ತಾವು ಹಾಸ್ಯಮಾಡಿಕೊಳ್ಳುವ ಕಲ್ಕಿ ನನ್ನ ಹಾಗೂ ನನ್ನ ಬರವಣಿಗೆಯ ಬಗ್ಗೆ ನಿಡಿಗುಟ್ಟುವವರ ಬರವಣಿಗೆಯನ್ನು ನಿಜಕ್ಕೂ ಇಷ್ಟಪಡುತ್ತೇನೆ" ಎನ್ನುತ್ತಿದ್ದರು.

ಕರ್ನಾಟಕವ್, ಲಾಂಗೂಲನ್, ರಾಬಿ, ಯಮನ್, ಇಸ್ಸೈತೆನಿ, ಅಗಸ್ಟನ್ ಮುಂತಾದ ಅನೇಕ ಕಾವ್ಯನಾಮಗಳೊಂದಿಗೆ ಬರೆಯುತ್ತಿದ್ದ ಕಲ್ಕಿ ಯಮನೊಂದಿಗೆ ಹೋರಾಡಿ ಬಂದವರು. ಹುಡುಗನಾಗಿದ್ದಾಗ ಊರ ಕೊಳದಲ್ಲಿ ಮುಳುಗುವುದರಲ್ಲಿದ್ದ ಹುಡುಗನನ್ನು ಯಾರೋ ಉಳಿಸಿ, ಯಮ ಬರಿಗೈಲಿ ಹಿಂದಿರುಗುವಂತಾಯ್ತು. ಆದರೆ ಎರಡನೆಯ ಬಾರಿ ೧೯೫೪ರ ಡಿಸೆಂಬರ್ ೫ರಂದು ಕಲ್ಕಿಯವರನ್ನು ಕೊಂಡೊಯ್ದಾಗ ಇಡೀ ತಮಿಳುನಾಡು ಕಣ್ಣೀರಿಟ್ಟಿತು.

ಮದ್ರಾಸ್‌ನ ಆಲ್ ಇಂಡಿಯಾ ರೇಡಿಯೋದಲ್ಲಿ ಕಲ್ಕಿಯವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ರಾಜಾಜಿ ಹೀಗೆಂದರು "ತಮಿಳು ಹಾಸ್ಯದ ಸಸಿಯನ್ನು ಪ್ರೀತಿಯಿಂದ ಬೆಳೆಸಿದ ಉದ್ಯಾನ ಪಂಡಿತ ಗತಿಸಿದ್ದಾನೆ. ಹಾಸ್ಯ ಮನವನ್ನು ಚುಚ್ಚುವಂತಿರಬಾರದು. ಈ ವಿಷಯದಲ್ಲಿ ಉದಯೋನ್ಮುಖ ಬರಹಗಾರರಿಗೆ ಹೊಸತೊಂದು ದಾರಿ ಹಾಕಿಕೊಟ್ಟರು ಕಲ್ಕಿ. ಅವರ ಹಾಸ್ಯ, ಜಾಣ್ಮೆ ಹಾಗೂ ಅನುಕಂಪ ಬೆರೆತಂಥದು. ಅದವರ ಆಸ್ತಿಯಾಗಿತ್ತು"

ತಮಿಳುನಾಡು ಸರ್ಕಾರ ಅವರ ಎಲ್ಲ ಬರಹಗಳನ್ನು ಪ್ರಕಟಿಸಿದ್ದು ಅವು ಎಲ್ಲವೂ ಬಹು ಮುದ್ರಣಗಳನ್ನು ಕಂಡಿವೆ. ತಾವು ರಚಿಸಿದ ಸಾಹಿತ್ಯದ ಮೂಲಕ ಜನಮನದಲ್ಲಿ ನೆಲೆಗೊಂಡಿದ್ದಾರೆ ಕಲ್ಕಿ!

ಸತ್ಯ

ಸತ್ಯ ಮತ್ತು ಅಹಿಂಸೆಯನ್ನು ನಾಶಪಡಿಸಲು ಸಾಧ್ಯವಿಲ್ಲ.
ವಿನಯವಿಲ್ಲದ ಸತ್ಯ ಒಂದು ದುರಹಂಕಾರದ ಪ್ರಹಸನ.
ಸತ್ಯವನ್ನು ಹುಡುಕುವುದೆಂದರೆ ದೇವರನ್ನು ಹುಡುಕಿದಂತೆ. ಏಕೆಂದರೆ ದೇವರೇ ಸತ್ಯ. ಸತ್ಯವೇ ದೇವರು.

—ಗಾಂಧೀಜಿ

ಅಪ್ಪಟ ಪರಿಸರವಾದಿ—ಎಂ. ಸಿ. ಮೆಹತಾ

ಗೋಪಾಲ ಆಶ್ರಿತ
'ರಮಾನಿಲಯ' ೭-೫-೪೨
ಜವಾಹರ ನಗರ
ರಾಯಚೂರು ೫೮೪೧೦೧

ರಾಜಸ್ಥಾನದ ಬಿಛ್ರಿ ಗ್ರಾಮದಲ್ಲಿ ಸರಬರಾಜು ಮಾಡಲಾಗುತ್ತಿದ್ದ ನೀರು ಎಷ್ಟು ಕಲುಷಿತಗೊಂಡಿತ್ತೆಂದರೆ, ೪೦ ಮೀಟರ್ ಆಳದ ಬಾವಿಯಲ್ಲಿನ ನೀರಿನ ಬಣ್ಣ ಅತಿ ಕಪ್ಪಾಗಿದ್ದು ಅದರಲ್ಲಿ ಸಲ್ಫ್ಯೂರಿಕ್ ಆಮ್ಲ ಸೇರಿರುವುದು ಕಂಡುಬಂತು. ಹತ್ತಿರದಲ್ಲಿನ ೫ ಕಾರ್ಖಾನೆಗಳು ಹೊರಚೆಲ್ಲುವ ತ್ಯಾಜ್ಯ ವಸ್ತುಗಳೇ ನೀರಿನ ಅಶುದ್ಧತೆಗೆ ಕಾರಣವೆಂದು ಗ್ರಾಮಸ್ಥರ ನಂಬಿಕೆ. ಆದರೆ ಕಾರ್ಖಾನೆಯ ಒಡೆಯರು ಈ ಆರೋಪವನ್ನು ತಳ್ಳಿಹಾಕಿದರು. ಇದರಿಂದಾಗಿ ನ್ಯಾಯಾಲಯದಲ್ಲೊಂದು ಬಿಕ್ಕಟ್ಟಿನ ಪರಿಸ್ಥಿತಿಯುಂಟಾಯಿತು. ವಿಶ್ಲೇಷಣೆಯ ಫಲಿತಾಂಶಗಳನ್ನು ಎಂ. ಸಿ. ಮೆಹತಾ ನ್ಯಾಯಾಲಯಕ್ಕೆ ಒದಗಿಸಿ, ನೀರು ಕಲುಷಿತಗೊಳ್ಳಲು ಕಾರ್ಖಾನೆಗಳೇ ಕಾರಣವೆಂದು ವಾದಿಸಿದರು. ಆದರೂ ಕಾರ್ಖಾನೆಯ ಒಡೆಯರ ಪರವಾಗಿ ವಾದಿಸಿದ ನ್ಯಾಯವಾದಿಗಳು, ಅಲ್ಲಗಳೆದು ಕಾನೂನು ಕ್ರಮಕ್ಕೆ ತಡೆಹಾಕಲೆತ್ನಿಸಿದರು.

ಸರ್ವೋಚ್ಚ ನ್ಯಾಯಾಲಯದಲ್ಲಿ ಅವರು ಸುದೀರ್ಘವಾಗಿ ವಾದಿಸುತ್ತಿದ್ದುದನ್ನು ಮೆಹತಾ ಆಲಿಸಿದರಲ್ಲದೆ, ತಮ್ಮ ಸರದಿಗಾಗಿ ಕಾಯುತ್ತಿದ್ದರು. ಅವರ ಸರದಿ ಬಂದಾಗ ಅದನ್ನು ಚೆನ್ನಾಗಿ ಬಳಸಿಕೊಂಡರು. ತಮ್ಮ ಕೈಯಲ್ಲಿದ್ದ ಹಾಳೆಗಳ ಕಟ್ಟನ್ನು ಜೋಡಿಸಿ ಮೇಜಿನ ಮೇಲಿಟ್ಟು, ಹೊಂಬಣ್ಣದ ದ್ರವ ತುಂಬಿದ ಒಂದು ಶೀಶೆಯನ್ನು ಎಡಗೈಯಲ್ಲಿ ತೆಗೆದುಕೊಂಡು, ನ್ಯಾಯಾಲಯದಲ್ಲಿ ಎಲ್ಲರಿಗೂ ಕಾಣುವಂತೆ ಎತ್ತಿಹಿಡಿದರು.

ಈ ವರ್ತನೆಯಿಂದ ಕೋಪಗೊಂಡ ನ್ಯಾಯಾಧೀಶರು "ಇದೇನು ಮೆಹತಾ? ಇದು ರಮ್ ಏನು?" ಎಂದು ಕೇಳಿದರು.

ಕೆಲವು ನ್ಯಾಯವಾದಿಗಳು ನಗುತ್ತಿರುವುದನ್ನು ಕಡೆಗಣಿಸಿದ ಮೆಹತಾ "ಇಲ್ಲ.... ನ್ಯಾಯಮೂರ್ತಿಗಳೆ....ಇದು ಸಾವಿರಾರು ಜನರು ಕುಡಿಯುತ್ತಿರುವ ನೀರು...." ಎಂದರು. ತನ್ನ ವಾದಕ್ಕೆ ಪುಷ್ಟಿ ನೀಡಲು ಮೆಹತಾ "ಮಾನ್ಯ ನ್ಯಾಯಮೂರ್ತಿಗಳೇ ....ಈ ಶೀಶೆಯಲ್ಲಿನ ಒಂದು ಹನಿ ನೀರನ್ನು ನನ್ನ ನ್ಯಾಯವಾದಿ ಮಿತ್ರರು ಕುಡಿದರೆ,

ಈಗಲೇ ನಾನು ಈ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವೆ"....ಎಂದರು.

ದಿಗ್ಭ್ರಮೆಗೊಂಡು ನ್ಯಾಯವಾದಿಗಳು ಇವಕ್ಕೆ ಸಮ್ಮತಿಸಲಿಲ್ಲ. ಆಗ ಮೆಹತಾ ನಸುನಗುತ್ತಾ "ನೀವೇ ಕುಡಿಯಲು ಸಿದ್ಧವಿಲ್ಲದ ಈ ನೀರನ್ನು ಬೇರೆ ಜನರು ಕುಡಿಯಲೆಂದು ಹೇಗೆ ಹೇಳುತ್ತೀರಿ" ಎಂದು ಪ್ರಶ್ನಿಸಿದರು.

ಒಂದು ದಶಕದ ಹಿಂದೆ ನ್ಯಾಯಾಲಯದಲ್ಲಿ ನಡೆದ ಈ ಯಶಸ್ವೀ ನಾಟಕ ಪರಿಶುದ್ಧ ಪರಿಸರ ನಿರ್ಮಾಣಕ್ಕೆ ನಾಂದಿಯಾಯಿತು. ಈ ಕಾರ್ಖಾನೆಗಳನ್ನು ಮುಚ್ಚುವಂತೆ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿತು. ಅಲ್ಲದೆ, ಭಾರತದ ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ಮಾಲಿನ್ಯಗೊಳಿಸಿದವರೇ ಆ ಮಾಲಿನ್ಯ ನೀರನ್ನು ಸ್ವಚ್ಛಗೊಳಿಸಿ ಆ ಭಾಗದ ಜೀವ ಪರಿಸರ ಇಕಾಲಜಿಯನ್ನು ಸಹ್ಯಗೊಳಿಸುವಲ್ಲಿ ತೊಡಗಬೇಕಾಯಿತು. ಆ ಯಶಸ್ಸು ಮತ್ತು ಆ ಗೆಲುವಿಗೆ ಕಾರಣವಾದ ನೇರ ನಿಲುವೇ ಮೆಹತಾ ಅವರ ವಿಶೇಷ ಲಕ್ಷಣಗಳಾಗಿವೆ.

ವಾಯು ಮತ್ತು ನೀರಿನ ಮಾಲಿನ್ಯಕ್ಕೆ ಮಿತಿಯಿಲ್ಲದಿರುವುದರಿಂದಾಗಿ ಲಕ್ಷಾಂತರ ಜನರು ಬಳಲುತ್ತಿದ್ದಾರೆ. ಇವೆರಡನ್ನು ನಿಯಂತ್ರಿಸಿ ಜನರ ಆರೋಗ್ಯ ಮತ್ತು ಜೀವ ಕಾಪಾಡುವಂತೆ ನ್ಯಾಯಾಲಯಗಳು ಆದೇಶ ಹೊರಡಿಸುವಂತೆ ಮೆಹತಾ ಸುಮಾರು ೧೫ ವರ್ಷಗಳಿಂದ ವಾದಿಸುತ್ತಿದ್ದಾರೆ. ಈ ದಿಶೆಯಲ್ಲಿ ಸರಕಾರ ಮತ್ತು ಸಾವಿರಾರು ಕಾರ್ಖಾನೆಗಳ ವಿರುದ್ಧ ಮೊಕದ್ದಮೆಗಳನ್ನು ಹೂಡಿದ್ದಾರೆ.

ಕೆಲವರು ಮೆಹತಾರನ್ನು "ಹಸಿರು ಉದ್ಧಾರಕ"ನೆಂದು ಕರೆದರೆ ಮತ್ತೆ ಕೆಲವರು "ತಲೆಹರಟೆ ಭೂತ" ಎಂದೂ ಕರೆದದ್ದುಂಟು. ಆದರೆ ಈ ವ್ಯಕ್ತಿಯ ಕೆಲಸದ ಪರಿಣಾಮವನ್ನು ಯಾರೂ ಶಂಕಿಸಲಾರರು. ಹಿಂದೆ ಅರಣ್ಯ ಮತ್ತು ಪರಿಸರ ಖಾತೆಯ ಮಂತ್ರಿಯಾಗಿದ್ದ ಮೇನಕಾಗಾಂಧಿ "ಅವರು ದೇಶವನ್ನೇ ಬದಲಿಸಿದ್ದಾರೆ. ಎಂ.ಸಿ. ಮೆಹತಾ ಬರುವ ಮೊದಲು ಇಂಥ ವ್ಯವಸ್ಥೆ ಸಾಧ್ಯವೆಂಬುದನ್ನು ಜನರು ನಂಬುತ್ತಿರಲಿಲ್ಲ" ಎಂದದ್ದುಂಟು.

ಜಮ್ಮು ಮತ್ತು ಕಾಶ್ಮೀರದ ಪರ್ವತ ಭಾಗದ ಪೀರಪಂಜಾಲಿನ ಒಂದು ರೈತ ಕುಟುಂಬದಲ್ಲಿ ಮೆಹತಾ ಹುಟ್ಟಿದ್ದು. ಎಂಟು ಮಕ್ಕಳಲ್ಲಿ ಮಹೇತಾ ಎರಡನೆಯ ಮಗ. ಆ ಕಿಲೋಮೀಟರ್ ದೂರದಲ್ಲಿದ್ದ ಶಾಲೆಗೆ ದಿನಾಲು ನಡೆದು ಹೋಗಬೇಕಾಗುತ್ತಿತ್ತು. ದಾರಿಯಲ್ಲಿ ಹೆಚ್ಚು ಆಳವಿರದ ಎರಡು ನದಿಗಳನ್ನು ದಾಟಿ, ದಟ್ಟ ಅರಣ್ಯದ ಮೂಲಕ ಹಾಯ್ದು ಹೋಗಬೇಕಾಗುತ್ತಿತ್ತು. ಪೀರಪಂಜಾಲಿನ ಅರಣ್ಯಗಳ ಛಾಯೆಯಲ್ಲಿ ಒಬ್ಬನೇ ನಡೆದಾಡಿದ್ದೇ ಅವನ ಪರಿಸರ ಪ್ರೀತಿಗೆ ಕಾರಣವಾಗಿರಬೇಕು.

ತಾನೊಬ್ಬ ವೈದ್ಯನಾಗಬೇಕೆಂಬ ಕನಸು ಕಂಡಿದ್ದರು. ಆದರೆ ಪರಿಸ್ಥಿತಿಗನುಗುಣವಾಗಿ ತನ್ನ ಆಶೋತ್ತರಗಳನ್ನು ಬದಲಿಸಿಕೊಂಡರು. "ಕಾನೂನು ಮಹಾವಿದ್ಯಾಲಯದಲ್ಲಿ ಸೇರುವುದು ಸುಲಭವಾಗಿತ್ತು" ಎಂದು ಮೆಹತಾ ಹೇಳುತ್ತಾರೆ. ಜಮ್ಮು ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದುಕೊಂಡು, ಅದೇ ಊರಲ್ಲಿ ಒಳ್ಳೆಯ ಸಾಮಾಜಿಕ ಕಾರ್ಯಕರ್ತನೆಂದು ಹೆಸರು

ಗಳಿಸಿದರು.೧೯೮೩ರಲ್ಲಿ ನವದೆಹಲಿಗೆ ಬಂದು ನೆಲೆಸಿದರು. ಒರಿಸ್ಸಾ ಜೈಲಿನಲ್ಲಿ ಕಾನೂನು ಬಾಹಿರವಾಗಿ ಸುಮಾರು ೨೦೦ ಮಕ್ಕಳನ್ನು ಬಂಧಿಸಿಟ್ಟಿದ್ದ ಹಾಗೂ ಇತರ ಬಂದಿಗಳು ಆ ಮಕ್ಕಳನ್ನು ಪೀಡಿಸುತ್ತಿದ್ದ ಸಂಗತಿ ಮೆಹತಾರ ಗಮನಕ್ಕೆ ಬಂತು. ದೆಹಲಿಗೆ ಬಂದಕೂಡಲೇ ಅವರು ಈ ಪ್ರಕರಣ ದಲ್ಲಿ ವಾದಿಸಿ ಆ ಮಕ್ಕಳನ್ನು ಬಿಡುಗಡೆ ಗೊಳಿಸಿದರು.

ಇದೇ ಅವಧಿಯಲ್ಲಿ ಒಂದು ಔತಣ ಕೂಟಕ್ಕೆ ಹೋದಾಗ ಒಬ್ಬ ಅಪರಿಚಿತ ವ್ಯಕ್ತಿ ತಾನೇ ಮುಂದೆ ಬಂದು ಮಾತಾಡ ಹತ್ತಿದ. ಅವನು ನ್ಯಾಯವಾದಿಗಳ ಹಣದಾಶೆಯ ಬಗ್ಗೆ ಮಾತಾಡುತ್ತ, ತಾಜ ಮಹಲಿನದು ದುಃಸ್ಥಿತಿ ಕುರಿತು "ಅದು ಹಾಳಾಗುತ್ತಿದೆ....ಅದರ ಬಗ್ಗೆ ಯಾರಿಗೂ ಕಾಳಜಿಇಲ್ಲ" ಎಂದು ಹೇಳಿದ. ತನ್ನ ಮಾತನ್ನು ಮುಂದುವರೆಸಿ, ಈ ಮಾಲಿನ್ಯ ದಿಂದಾಗಿ ೧೭ ನೆಯ ಶತಮಾನದ ಅಮೃತ ಶಿಲೆಯ ಆ ಸ್ಮಾರಕ ಹೇಗೆ ಪದರು ಪದರಾಗಿ ಬಿದ್ದು ಹೋಗುತ್ತಿದೆ ಎಂದು ಆವೇಶಪೂರಿತ ಭಾಷಣ ಮಾಡಿದ.

ಆ ವ್ಯಕ್ತಿಯ ಮಾತುಗಳಿಂದ ಮೆಹತಾ ಚಕಿತಗೊಂಡರು. ಅವನ ಕಟು ಟೀಕೆ ಇವರ ಮನಸ್ಸನ್ನು ನೋಯಿಸಿತು. ಈ ಮೊದಲು ಮೆಹತಾ ತಾಜ್ ನೋಡಿರಲಿಲ್ಲ. ಆದರೆ ಆ ಅಪರಿಚಿತ ವ್ಯಕ್ತಿಯ ಹೇಳಿಕೆಯಲ್ಲಿನ ಸತ್ಯಾಂಶವನ್ನು ಪರೀಕ್ಷಿಸಲು ಮೆಹತಾ ಆಗ್ರಾಕ್ಕೆ ಹೊರಟರು.

ಕೆಂಪು ಮರಳುಗಲ್ಲಿನ ಮಹಾದ್ವಾರದ ಮೂಲಕ ಹೋಗುತ್ತಿದ್ದಂತೆ, ಅಮೃತ ಶಿಲೆಯ ಆ ಪುರಾತನ ಕಟ್ಟಡ ನೋಡಿ ಚಕಿತಗೊಂಡರು. ಅಮೃತಶಿಲೆಯ ಬಣ್ಣ ಕೆಡುತ್ತಲಿದ್ದುದು ಸ್ಪಷ್ಟವಾಗಿ ಕಂಡಿತು.

ಅನಂತರದ ಕೆಲವು ವಾರಗಳವರೆಗೆ ಅಲ್ಲಿ ಉಳಿದುಕೊಂಡು ಮೆಹತಾ ಹತ್ತಿರದ ಸುಮಾರು ೨೦೦೦ ಕಾರ್ಖಾನೆಗಳು, ಎರಕ ಹೊಯ್ಯುವ ಕಾರ್ಖಾನೆಗಳು ಮತ್ತು ವ್ಯಾಪಾರ ಕೇಂದ್ರಗಳಿಗೆ ಭೇಟಿಕೊಟ್ಟರು. ಯಾವ ಕಾರ್ಖಾನೆಯಲ್ಲೂ ಮಾಲಿನ್ಯ ನಿಯಂತ್ರಣ ಉಪಕರಣ ಇರಲಿಲ್ಲ. ಈ ಉದ್ಯಮಗಳಿಂದಾಗಿ ಮಾಲಿನ್ಯ ಹರಡುತ್ತ ಲಿದೆಯಲ್ಲದೆ, ಅತ್ಯಮೂಲ್ಯ ನಿಧಿಯಾದ ತಾಜ್‌ಗೆ ಹಾನಿಯುಂಟಾಗುತ್ತಿದೆ ಎಂದರು. ಮೆಹತಾ ೧೯೮೪ರಲ್ಲಿ ಈ ಉದ್ಯಮ ಗಳ ವಿರುದ್ಧ ಒಂದು ಅಭೂತಪೂರ್ವ ಮೊಕದ್ದಮೆ ಹೂಡಿ ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು.

ಮೆಹತಾರ ಮನವಿಯಲ್ಲಿ ತಥ್ಯವಿಲ್ಲ ವೆಂದು ನ್ಯಾಯಾಧೀಶರು ಎರಡು ಸಲ ತಳ್ಳಿ ಹಾಕಿದರು. ಆದರೂ ಮೆಹತಾ ಪಟ್ಟು ಹಿಡಿದು ಅವರಿಗೆ ಎಲ್ಲ ಸಂಗತಿಗಳನ್ನು ವಿವರಿಸಿ ಮನದಟ್ಟಾಗುವಂತೆ ಮಾಡಿದರು. ಕೊನೆಗೂ ಅವರ ಮನವಿ ಸ್ವೀಕೃತ ವಾಯಿತು.

ಅಂದು ಅಕಸ್ಮಾತ್ತಾಗಿ ಆದ ಒಬ್ಬ ಅಪರಿಚಿತ ವ್ಯಕ್ತಿಯ ಭೇಟಿ ಮೆಹತಾರ ಕಣ್ಣು ತೆರೆಸಿತ್ತು. ಭಾರತವನ್ನು ಕಾಡು ತ್ತಿರುವ ಪರಿಸರ ಸಮಸ್ಯೆಗಳ ಬಗ್ಗೆ ಅವರ ಆಸಕ್ತಿ ತೀವ್ರಗೊಂಡಿತು. ದೆಹಲಿಯಲ್ಲಿನ ಶ್ರೀರಾಮ ಫುಡ್ಸ್ ಅಂಡ್ ಫರ್ಟಿಲೈಸರ್ ಇಂಡಸ್ಟ್ರೀಸ್ ಎಂಬ ಕಾರ್ಖಾನೆಯ ಹತ್ತಿರದ ನಾಲೆಯ ಬದಿಯಿಂದ ಹೋಗು

ತ್ತಿದ್ದ ಕೆಲವು ಮಕ್ಕಳು ರೋಗಪೀಡಿತರಾದ ಘಟನೆಯ ಬಗ್ಗೆ ಅವರು ಓದಿದ್ದರು. ಮೆಹತಾ ಸ್ವತಃ ಆ ಸ್ಥಳಕ್ಕೆ ಹೋಗಿ ತಪಾಸಣೆ ಮಾಡಿದಾಗ, ಆ ಕಾರ್ಖಾನೆಯವರು ವಿಷಪೂರಿತ ಕಸವನ್ನೆಲ್ಲಾ ನಾಲೆಗೆ ಸುರಿಯುತ್ತಿದ್ದುದು ಗಮನಕ್ಕೆ ಬಂತು. "ಈ ಕಾರ್ಖಾನೆಯಲ್ಲೂ ಭೂಪಾಲಿನಂಥ ದುರಂತ ಸಾಧ್ಯ"ವೆಂದು ೧೯೮೫ ರಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠಕ್ಕೆ ತಿಳಿಸಿದರು.

ಮೆಹತಾರ ಭವಿಷ್ಯವಾಣಿ ನಿಜವಾಯಿತು. ಒಂದು ತಿಂಗಳ ಅನಂತರ, ವಿಷಕಾರಕ ಒಲಿಯಮ್ ಅನಿಲದ ಮೋಡ ಹೊರಬಿದ್ದಿತು. ನೂರಾರು ಜನರನ್ನು ಆಸ್ಪತ್ರೆಗೆ ಸೇರಿಸಲಾಯಿತು ಮತ್ತು ೪೭೦೦ ಕ್ಕೂ ಹೆಚ್ಚು ಜನರಿಗೆ ಇದರ ದುಷ್ಪರಿಣಾಮ ಬಾಧಿಸಿತು. ಸರ್ವೋಚ್ಚ ನ್ಯಾಯಾಲಯವು ಈ ಕಾರ್ಖಾನೆಯಲ್ಲಿನ ಸ್ಥಿತಿಗತಿಯ ಬಗ್ಗೆ ತನಿಖೆ ನಡೆಸಲು, ತಜ್ಞರ ತಂಡವನ್ನು ಕಳಿಸಿತು. ಕಾರ್ಖಾನೆಯ ಒಡೆಯರು ಅಪಾಯವಿರುವಲ್ಲಿ ದುರಸ್ತಿ ಮಾಡಿರುವುದರಿಂದ ಅಲ್ಲಿ ಎಲ್ಲವೂ ಸುರಕ್ಷಿತವಾಗಿದೆ ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದರು.

ತಜ್ಞರ ತಂಡ ವರದಿ ಸಲ್ಲಿಸುತ್ತಿದ್ದಂತೆ ಕೆಲವು ನಿದ್ದೆಗೆಟ್ಟ ಹಾಗೂ ನಿಸ್ತೇಜ ಕಾರ್ಮಿಕರು ಭೇಟಿಕಾರರ ವೇದಿಕೆಯಲ್ಲಿ ಚಡಪಡಿಸಹತ್ತಿದರು. ಈ ತಜ್ಞರು ತಮ್ಮ ವರದಿ ಸಲ್ಲಿಸುವವರೆಗೆ ಮೆಹತಾ ಕಾದರು. ಅನಂತರ ಎದ್ದುನಿಂತು ಆ ಕಾರ್ಮಿಕರ ಕಡೆ ಕೈಮಾಡಿ ತೋರಿಸಿ ತನ್ನ ಹತ್ತಿರವಿದ್ದ ಕಾಗದಪತ್ರಗಳನ್ನು ಕೈಗೆತ್ತಿಕೊಂಡರು. "ಸುರಕ್ಷತೆಯನ್ನು ಉಲ್ಲಂಘಿಸಿದ್ದು ತಜ್ಞರ ಗಮನಕ್ಕೆ ಬರದಂತೆ ರಾತ್ರಿ ಅಡ್ಡ ಗೋಡೆ ಕಟ್ಟಲಾಗಿದೆ. ಈ ಬಗ್ಗೆ ಕಾರ್ಮಿಕರು ನೀಡಿದ ಪ್ರಾಮಾಣಿಕ ಹೇಳಿಕೆಯ ಪತ್ರ ನನ್ನ ಹತ್ತಿರವಿದೆ" ಎಂದು ಮೆಹತಾ ವಿವರಿಸಿದರು.

ರಾತ್ರಿಯ ಸಮಯದಲ್ಲಿ ೧೦೦ ಕ್ಕಿಂತಲೂ ಹೆಚ್ಚು ಕ್ಲೋರಿನ್ ಅನಿಲದ ಸಿಲಿಂಡರ್‌ಗಳನ್ನು ಕಾರ್ಖಾನೆಯಿಂದ ಹೊರಗೆ ಸಾಗಿಸಲಾಗಿತ್ತು. ವ್ಯಾಕುಲಗೊಂಡಿದ್ದ ಆ ಕಾರ್ಮಿಕರ ಕಡೆ ಕೈಮಾಡಿ ತೋರಿಸಿ, ಈ ಬಗ್ಗೆ ನ್ಯಾಯಾಲಯ ಅಲ್ಲಿರುವ ಕಾರ್ಮಿಕರನ್ನು ಪ್ರಶ್ನಿಸಿ ಎಲ್ಲವನ್ನು ಖಚಿತಪಡಿಸಿಕೊಳ್ಳಬಹುದೆಂದು ವಿವರಿಸಿ ಹೇಳಿದರು.

ವಾದ ಮಂಡನೆಯ ಅನಂತರ ನ್ಯಾಯಾಲಯವು ಕಾರ್ಖಾನೆ ಮುಚ್ಚುವಂತೆ ಆದೇಶ ಹೊರಡಿಸಿತಲ್ಲದೆ, ಅನಿಲದ ಸೋರಿಕೆಯಿಂದ ಪೀಡಿತರಾದವರಿಗೆ ಪರಿಹಾರ ನೀಡುವಂತೆ ಅಪ್ಪಣೆ ಮಾಡಿತು. ಅಲ್ಲದೆ ಇನ್ನುಮುಂದೆ ಪರಿಸರವನ್ನು ಮಲಿನಗೊಳಿಸಿ ಕಾರ್ಮಿಕರ ಮತ್ತು ಜನರ ಆರೋಗ್ಯಕ್ಕೆ ಅಪಾಯ ಕೊಡುವ ಯಾವುದೇ ಉದ್ಯಮ – ಅದು ದೇಶದ ಆರ್ಥಿಕತೆಯ ದೃಷ್ಟಿಯಿಂದ ಎಷ್ಟೇ ಮಹತ್ವದ್ದಿರಲಿ—ತನ್ನ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಶ್ರೀರಾಮ ಫುಡ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆಯವರು ಮೆಹತಾರ ಸ್ವಯಂ ಪ್ರೇರಣೆಯ ತನಿಖೆಯ ವೆಚ್ಚವನ್ನು ಭರ್ತಿಮಾಡಿಕೊಡಬೇಕೆಂದು ಆದೇಶ ನೀಡಿತು.

ಪರಿಸರ ರಕ್ಷಣೆಗಾಗಿ ಭಾರತದಲ್ಲಿ ಮೊದಲಿನಿಂದಲೂ ನಿಯಮಗಳುಂಟು. ಆದರೆ ಅವುಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿರಲಿಲ್ಲ. ಮೆಹತಾರವರು

ನ್ಯಾಯಾಲಯದಲ್ಲಿ ಮಂಡಿಸಿದ ಮನವಿಗಳು ಸಂವಿಧಾನದಲ್ಲಿ, ಬದುಕುವ ಹಕ್ಕು ರಕ್ಷಣೆಯ ಭರವಸೆ ಎಂಬ ಭಾಗವನ್ನಾಧರಿಸಿವೆ. ಜನರ ಜೀವಕ್ಕೆ ಧಕ್ಕೆ ಬರದಿರಲೆಂದು ಸರ್ವೋಚ್ಚ ನ್ಯಾಯಾಲಯ ಆರೋಗ್ಯವಂತ ಪರಿಸರದ ಹಕ್ಕು ಎಂಬ ಅಂಶವನ್ನು ಅದಕ್ಕೆ ಸೇರಿಸಿತು.

ಇನ್ನೊಂದು ರೀತಿಯಲ್ಲಿ ನೋಡಿದರೆ, ಪರಿಸರದ ಮೊಕದ್ದಮೆಗಳನ್ನು ಸಹಜವಾಗಿ ಹೂಡುವಂತಿಲ್ಲ. ಇದಕ್ಕಾಗಿ ನ್ಯಾಯಾಲಯಗಳು ಖಚಿತವಾದ ದಾಖಲೆಪತ್ರಗಳನ್ನು ಬೇಡುತ್ತವೆ. ಅವುಗಳನ್ನು ಸಂಗ್ರಹಿಸುವುದರಲ್ಲಿಯೇ ತಿಂಗಳು ಅಥವಾ ವರ್ಷಗಳೇ ಬೇಕಾಗುತ್ತವೆ. ಅಲ್ಲದೆ, ಪರಿಸರ ಮಲಿನಗೊಳಿಸುವವರು ಪ್ರತಿ ಹೆಜ್ಜೆಯಲ್ಲೂ ತಮ್ಮನ್ನು ಕಾನೂನು ರೀತ್ಯಾ ರಕ್ಷಿಸಿಕೊಳ್ಳಲು ಸಾಧ್ಯವಿದೆ. ಉದಾಹರಣೆಗೆ, ಕಲ್ಲುಗಳನ್ನು ಒಡೆದು ಪುಡಿ ಮಾಡುವ ಕಾರ್ಖಾನೆಗಳ ವಿರುದ್ಧ ಮೆಹತಾ ಹೂಡಿದ ದಾವೆಯನ್ನು ಎತ್ತಿ ಹಿಡಿಯಲು ಏಳು ವರ್ಷ ಹಿಡಿಯಿತು. ಈ ಅವಧಿಯಲ್ಲಿ ಆ ಯಂತ್ರಗಳು ದೆಹಲಿಯ ಸುತ್ತಲೂ ಧೂಳು ಚೆಲ್ಲಿ, ಅನೇಕ ಕಾರ್ಮಿಕರು, ಅವರ ಕುಟುಂಬದವರು ಮತ್ತು ಹತ್ತಿರದ ನಿವಾಸಿಗಳು ಪುಪ್ಪುಸ ರೋಗದಿಂದ ಬಳಲುವಂತೆ ಮಾಡಿದ್ದವು.

ಮೆಹತಾರ ಯಶಸ್ಸುಗಳು ಸಾಕಷ್ಟು ಪರಿಣಾಮಕಾರಿಯಾಗಿವೆ. ೨೫೦ ಪಟ್ಟಣ ಮತ್ತು ನಗರಗಳಲ್ಲಿ ಚರಂಡಿಕಸ ಮತ್ತು ಮಲವನ್ನು ಗಂಗಾನದಿಗೆ ನೇರವಾಗಿ ಸಾಗಿಸುವ ಬದಲು ಈ ರಾಡಿಯನ್ನು ಸಂಸ್ಕರಣ ಘಟಕ ವ್ಯವಸ್ಥೆ ಮಾಡುವಂತೆ ಕ್ರಮ ಕೈಗೊಂಡಿದ್ದಾರೆ. ಮುಂಬಯಿ, ದೆಹಲಿ ಕಲ್ಕತ್ತಾ ಮತ್ತು ಚೆನ್ನೈಯಲ್ಲಿ ಮಾರಲಾಗುವ ಪೆಟ್ರೋಲ್ ಸೀಸ ಮುಕ್ತವಾಗಿರುವಂತೆ ಅಲ್ಲಿನ ಅಧಿಕಾರಿಗಳು ಆದೇಶ ಹೊರಡಿಸುವಂತೆ ಮಾಡಿದ್ದಾರೆ. ಇಂಥ ಮೊಕದ್ದಮೆಗಳನ್ನು ತಾವೇ ವಾದಿಸುತ್ತಾರೆ. ತಮ್ಮ ಕುಟುಂಬದ ಪೋಷಣೆಗಾಗಿ ಮಾತ್ರ, ಪರಿಸರಕ್ಕೆ ಸಂಬಂಧಿಸಿದ ಕೆಲವು ಮೊಕದ್ದಮೆಗಳನ್ನು ಮಂಡಿಸುತ್ತಾರೆ. ತಾಜಮಹಲ್ ಮೊಕದ್ದಮೆ ಮಂಡಿಸಿದ ೯ ವರ್ಷಗಳ ಅನಂತರ, ಸರ್ವೋಚ್ಚ ನ್ಯಾಯಾಲಯ ತಾಜ್ ಆವರಣದ ಸುತ್ತಲೂ ಸುಮಾರು ೧೦,೦೦೦ ಚ. ಕಿ. ಮೀಟರ್ ಭಾಗವನ್ನು ಪರಿಸರ ಧಾಮವನ್ನಾಗಿ ಘೋಷಿಸಿ, ಅದರ ಸಮೀಪದಲ್ಲಿ, ಇದ್ದಲು ಬಳಸಿ ಹೊಗೆ ಸೂಸುತ್ತಿದ್ದ ಕಾರ್ಖಾನೆಗಳನ್ನು ಮುಚ್ಚುವಂತೆ ಆದೇಶ ನೀಡಿತು. ಇದರಲ್ಲಿ ೨೧೨ ಕಾರ್ಖಾನೆಗಳನ್ನು ಮುಚ್ಚುವಂತೆಯೂ ಮತ್ತು ೨೯೯ ಕಾರ್ಖಾನೆಗಳು ಮಲಿನ ನಿಯಂತ್ರಣ ಉಪಕರಣಗಳನ್ನು ಅಳವಡಿಸುವಂತೆಯೂ ಕಟ್ಟಾಜ್ಞೆ ಹೊರಡಿಸಿತು. ಆಗ್ರಾದಲ್ಲಿನ ಅಧಿಕಾರಿಗಳು ಉಪರಸ್ತೆಗಳನ್ನು ನಿರ್ಮಿಸಿ ತಾಜ್ ಸುತ್ತಲೂ ಗಿಡಗಳನ್ನು ನೆಟ್ಟು ಅಲ್ಲೊಂದು ಹಸಿರು ಪಟ್ಟಿ ನಿರ್ಮಿಸುವಂತೆ ಆದೇಶ ನೀಡಲಾಯಿತು.

ಈ ತೀರ್ಪನ್ನು ಬಹಳಷ್ಟು ಜನರು ಪ್ರಶಂಸಿದರು. ಈ ಮೊಕದ್ದಮೆ ಮತ್ತು ಇನ್ನಿತರ ಇಂಥ ಮೊಕದ್ದಮೆಗಳು ಸಾಕಷ್ಟು ಟೀಕೆಗೆ ಗ್ರಾಸವಾದವು. ಇವನೊಬ್ಬ ತಲೆತಿರುಕ ಹಾಗೂ ಪ್ರಗತಿಯ ವಿರೋಧಿಯೆಂದು ಮೆಹತಾರ ಬಗ್ಗೆ ಆಡಿಕೊಂಡರು.

ನಿಜವೆಂದರೆ ಅವರ ಹಂಬಲತೆ, ತೀವ್ರಗಾಮಿ ನೀವು, ಆರ್ಥಿಕ ಅಭಿವೃದ್ಧಿಯ ಬಗೆಗಿನ ವಿಚಾರಗಳು ಲಕ್ಷಾಂತರ ಬಡ ಮಧ್ಯಮ ವರ್ಗದ ಜನರಿಗೆ ಹಿಡಿಸಲಾರವು.

ಕೆಲವು ವರ್ಷಗಳ ಹಿಂದೆ ತಾವು ನೀಡಿದ ಒಂದು ಸಂದರ್ಶನದಲ್ಲಿ "ಬೇರೆ ದೇಶದ ಸುಧಾರಿಸಿದ ತಂತ್ರಜ್ಞಾನ ಬಳಸಿಕೊಳ್ಳುವ ದೊಡ್ಡ ಉದ್ಯಮಗಳು ನಮಗೆ ಬೇಕಾಗಿಲ್ಲ" ಎಂದು ಹೇಳಿದ್ದರು. ಅವರ ಅಭಿಪ್ರಾಯದಲ್ಲಿ ಭಾರತ ಸರ್ಕಾರ ಗ್ರಾಮ ಮಟ್ಟದ ಗಣರಾಜ್ಯವನ್ನು ಸೃಷ್ಟಿಸಿ ಅಲ್ಲಿ ಕರಕುಶಲ ಮತ್ತು ಗ್ರಾಮೋದ್ಯೋಗವನ್ನು ಪ್ರೋತ್ಸಾಹಿಸಬೇಕು ಎಂಬ ಗಾಂಧೀಜಿಯವರ ವಿಚಾರವನ್ನೇ ನೆನಪಿಸುವಂತೆ "ನಮ್ಮ ಅಭಿವೃದ್ಧಿ ಯೋಜನೆಗಳು ನಮ್ಮ ಅವಶ್ಯಕತೆಗಳಿಗನುಗುಣವಾಗಿರಬೇಕೆ ವಿನಃ ಅವು ನಮ್ಮನ್ನು ಧನ ಪಿಶಾಚಿಗಳನ್ನಾಗಿ ಮಾಡಬಾರದು ಎಂದು ಹೇಳಿದ್ದುಂಟು.

ನಮ್ಮ ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗಬೇಕಾದರೆ ಅಂತಾರಾಷ್ಟ್ರೀಯ ಬಂಡವಾಳವನ್ನು ಆಕರ್ಷಿಸುವುದು ಅಗತ್ಯವಾಗಿದೆ. ಆದರೆ ಮೆಹತಾರ ಈ ವಿಚಿತ್ರ ಆರ್ಥಿಕ ದೃಷ್ಟಿಕೋನ ಅಡಚಣೆಯುಂಟು ಮಾಡುವಂಥದ್ದಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೇಳಿದಾಗ, "ನಾನು ಬಹುರಾಷ್ಟ್ರೀಯ ಕಂಪೆನಿಗಳ ವಿರೋಧಿಯಲ್ಲ. ಆದರೆ ಅವರು ನಮ್ಮ ಪರಿಸರ ನೈರ್ಮಲ್ಯದ ಬಗ್ಗೆ ಕಟ್ಟುನಿಟ್ಟಿನಿಂದಿರಲೆಂಬುದೇ ನನ್ನ ಉದ್ದೇಶ. ನನ್ನ ಕಾಳಜಿ ಮಲಿನಗೊಳಿಸುಪವರ ವಿರುದ್ಧವಿದೆ ಅವರು ಭಾರತೀಯರಿರಲಿ ಅಥವಾ ಬಹುರಾಷ್ಟ್ರೀಯರಿರಲಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೆಹತಾರ ಸಮಾಜಸೇವೆಗೆ ಮನ್ನಣೆ ಎನ್ನುವಂತೆ ೧೯೯೭ ರಲ್ಲಿ "ಎನ್‌ವೈರ್ನ್‌ಮೆಂಟಲ್ ಗೋಲ್ಡ್‌ಮ್ಯಾನ್" ಪುರಸ್ಕಾರ ನೀಡಲಾಯಿತು. ೧೯೯೭ ರಲ್ಲಿ ಏಷಿಯಾದ ನೊಬೆಲ್ ಪ್ರಶಸ್ತಿ' ಎಂದು ಕರೆಯಲಾಗುವ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಹಣದಿಂದ ಪರಿಸರ ಸಂಶೋಧನಾ ಸಂಸ್ಥೆಯೊಂದನ್ನು ಸ್ಥಾಪಿಸುವುದು ಮೆಹತಾ ಅವರ ಹಂಬಲವಾಗಿದೆ.

———

ದೇವರು

ದೇವರೇ ಬೆಳಕು, ಕತ್ತಲೆಯಲ್ಲ. ದೇವರೇ ಪ್ರೀತಿ, ದ್ವೇಷಿಯಲ್ಲ.
ದೇವರೇ ಸತ್ಯ, ದೇವರು ಅಸತ್ಯವಲ್ಲ. ದೇವರೊಬ್ಬನೇ ಎಲ್ಲರಿಗಿಂತ ದೊಡ್ಡವನು
ದೇವರು ತನ್ನ ಮಕ್ಕಳಲ್ಲಿ ಉತ್ತಮ ಮತ್ತು ಕೀಳು ಎಂಬ ಭೇದ ಭಾವವನ್ನು
ತೋರುವುದಿಲ್ಲವೆಂದು ಸತ್ಯ.

—ಗಾಂಧೀಜಿ

ಅಂತರ್ನಾದ

ವಿ. ಮೋ. ಸೋಲಾಪೂರಕರ್
೧೧೪೧ ಸುಮೇಘ, ಕಾಂಟೂರ್ ರಸ್ತೆ
ಒಂದನೆಯ ಮುಖ್ಯ ರಸ್ತೆ, ಗೋಕುಲಂ,
ಮೂರನೆಯ ಹಂತ, ಮೈಸೂರು–೨

ಬಾಬಾ ಆಮಟೆಯವರಿಗೆ ೧೯೯೯ ರ ಸಾಲಿನ ಗಾಂಧಿ ಪ್ರತಿಷ್ಠಾನ ಪ್ರಶಸ್ತಿ ರೂ. ೧ ಕೋಟಿ ಗೌರವ ಧನ ಸಹಿತ ಪ್ರದಾನವಾಗಿದೆ.

ಸೌ. ಸಾಧನಾ ಮುರಳೀಧರ ಆಮಟೆಯವರ ಸಂದರ್ಶನ. ಕನ್ನಡ ಅನುವಾದಕರು : ವಿ. ಮೋ. ಸೋಲಾಪೂರಕರ್. ಬಾಬಾ ಅವರ ಹೆಸರು ಮುರಳೀಧರ ದೇವಿದಾಸ ಆಮಟೆ. ಇವರ ಹೆಸರು ತಿಳಿದಿರದ ಭಾರತೀಯ ಇರಲಾರ. ಈ 'ಬೈರಾಗಿ' ಹೇಗೆ ಇಂದುಮಳೇ ಎಂಬ ಸುಂದರ ಸುಶಿಕ್ಷಿತ ಕನ್ಯೆಯನ್ನು ಆಕರ್ಷಿಸಿ ವರಿಸಿದರು, ಈ ಸಾಧಾರಣ ಸಾಮಾಜಿಕ ಘಟನೆ ಹೇಗೆ ಅಸಾಧಾರಣ ಪರ್ವವೊಂದಕ್ಕೆ ಕಾರಣವಾಯಿತು ಎಂಬ ಸಂಗತಿಯನ್ನು ಸ್ವತಃ ಶ್ರೀಮತಿಯವರ ಬಾಯಿಯಿಂದಲೇ ಕೇಳಿ.

ನನ್ನ ಸ್ವಭಾವದ ಪಾರ್ಶ್ವ ಭೂಮಿಕೆಯ ಬಗ್ಗೆ ಹೇಳುತ್ತೇನೆ. ಅಂದರೆ ನಮ್ಮ ಮದುವೆಯ ಮುಂಚಿನದು. ಇನ್ನಾರ ಹತ್ತಿರವೂ ಹೇಳದೇ ಇದ್ದದ್ದು. ಮನೆ ವಾತಾವರಣ ಅತ್ಯಂತ ಸನಾತನ, ಎಲ್ಲರೂ ಮಹಾಮಹೋಪಾಧ್ಯಾಯರೇ. ಅದೇ ಪರಂಪರೆ, ಕರ್ಮಬಂಧಿ, ನಾನು ಇನ್ನೂ ಬಂಧಿಸ್ಥೆ ಹೆಣ್ಣಾದ್ದರಿಂದ. ತಂದೆ ಬೇಗನೇ ದೇಹಾಂತ. ಆದ್ದರಿಂದ ಮನೆ ಹುಡುಗಿ ಕುರಿತು ಅತಿಶಯ ಕಾಳಜಿ. ಸಿನೆಮಾ, ನಾಟಕ ವರ್ಜ್ಯ. ಮನೆ ಹೊರಗೆ ಹೋಗೋದೇ ನಿಷಿದ್ಧ. ಅದಿಬದಿ ಜನ ಹೇಳೋದು: "ಇಂದೂನ ಮಾತು, ಸಂಪರ್ಕ ಬಂಗಾರದ್ದು–ಬಲು ವಿರಳ." ನಾನು ತೀರ ಕಡಿಮೆ ಮಾತಾಡತಾ ಇದ್ದೆ. ಈಗ ಮಾತ್ರ ಸಾಕಷ್ಟು ಮಾತಾಡತಾ

ಇದ್ದೇನೆ. ಅಂದರೆ ೫೦ ವರ್ಷಗಳ ಅನಂತರ. ಎಂತಲೇ ನಾನು ಈ ದಿವಸಗಳನ್ನು ಎದುರಿಸ ಬಲ್ಲೆ. ಇಲ್ಲಿಯವರೆಗೆ ನಾನೂ ಒಬ್ಬ ಪ್ರೇಕ್ಷಕಿ. ಏನೇನೋ ಕಾರ್ಯಕ್ರಮ ಆದುವು. ಎಷ್ಟೆಲ್ಲ ಮಾನ್ಯಜನ ಆನಂದ ವನಕ್ಕೆ ಬಂದು ಹೋದರು—ಜಯಪ್ರಕಾಶ ನಾರಾಯಣರು ಸಹ. ನಾನು ಮಾತ್ರ ಎಂದೂ ವೇದಿಕೆ ಮೇಲೆ ಹೋಗಿರಲಿಲ್ಲ, ಭಾಷಣ ಮಾಡಿರಲಿಲ್ಲ.

ಒಂದು ನೆನಪು ಬಂತು ಎಂದು ಹೇಳು ತ್ತೇನೆ. ದಿಗ್ವಿಜಯಸಿಂಗ್ ಬಂದಿದ್ದರು ನಮ್ಮ ಮನೆಗೆ. ಮುಖ್ಯ ಮಂತ್ರಿಗಳು. ಬಾಬಾ ಮತ್ತು ಅವರು ಮಾತಾಡತಾ ಕುಳಿತಿದ್ದರು. ನಾನು ಅವರಿಗೆ ಹಿಂದೀ ಭಾಷೆಯಲ್ಲಿ ಹೇಳಿದೆ: "ನಾವು ನರ ನಾರಾಯಣ ಕೇಳಿದ್ದೆವು. ಈಗ ಮಾತ್ರ ನಾರಾನೇ (ಅಂದರೆ ಸ್ಲೋಗನ್) ನಾರಾಯಣ ಆಗಿಬಿಟ್ಟಿದೆ." ದಿಗ್ವಿಜಯರು ನಕ್ಕು ಒಪ್ಪಿಬಿಟ್ಟರು.

ಮುಂಚೆ ನಾನು ಹೀಗೆ ಯಾರ ಎದುರೂ ಹೋಗತಾ ಇರಲಿಲ್ಲ. ಇದು ನನ್ನ ಮುರಳೀಧರನ ಮಹಿಮೆ. ಅವರು ಮದುವೆಯೇ ಬೇಡ ಎಂದಿದ್ದರು. ೧೯೪೦ ರಿಂದ ೧೯೪೫ ರ ತನಕ ಈ ಮುರಳೀಧರರು ದಾಡಿ ಜಟಾಧಾರಿಯಾಗಿ ನಾಟಕ ಮಾಡತಾ ಇದ್ದರು. ನಿಜವಾಗಿ ಹೇಳಬೇಕಾ ದರೆ ಅವರು ನನ್ನ ಹತ್ತಿರದ ಬಳಗದವರು.

ಆವಾಗ ನನ್ನ ಅಕ್ಕನಿಗೆ ಮದುವೆ ವಯಸ್ಸು. ಆದ್ದರಿಂದ ಇವರನ್ನು ಕರೆದದ್ದು. ಆದರೆ ಮದುವೆ ಆಗಬಾರದೆಂದೂ ಬ್ರಹ್ಮಚಾರಿ ಇರಬೇಕೆಂದೂ ಇವರ ನಿರ್ಧಾರ.

ಹೌದಾ?

ಬಾಬಾರ ತಾಯಿ ಮಾನಸಿಕ ರೋಗಿ ಆಗಿದ್ದರು. ಮನೆಗೆ ಬರುವ ಸೊಸೆಗೆ ಈ ಅತ್ತೆ ಖಾತ್ರಿ ದೊಡ್ಡ ಸಮಸ್ಯೆ ಆಗಲಿದ್ದಾರೆ. ಎಂದೇ ಬಾಬಾರ ನಿರ್ಧಾರ.

ನನ್ನಲ್ಲಿ ಕಾರುಣ್ಯ ಮತ್ತು ಸೇವಾವೃತ್ತಿ ಮೊದಲಿನಿಂದಲೂ ಪ್ರಬಲವಾಗಿದ್ದುವು. ಅವನ್ನು ನಾನು ಈ ಮುರಳೀಧರರಿಂದ (ಬಾಬಾ) ಕಲಿಯಲಿಲ್ಲ. ಅವರಿಂದ ಕಲಿತದ್ದು ಏನೆಂದರೆ ಜಾತಿ ಧರ್ಮಗಳ ಭೇದ ಮಾಡದೇ ಇರೋದು. ನಾನು ಅವರಿಗೆ ಹೇಳಿದೆ: "ನೀವು ನನ್ನಿಂದ ಕರುಣೆ ಕಲಿಯಿರಿ."

ನನ್ನಲ್ಲಿ ಮನೆಮಾಡಿದ್ದ ಕರುಣೆ ಬಗ್ಗೆ ಹೇಳುತ್ತೇನೆ. ಮನೆ ಎದುರು ಮುನಿಸಿಪಾಲಿಟಿ ನಳ ಇತ್ತು. ಅಲ್ಲಿ ನೀರು ತುಂಬಲು ಹೊರಗಿನಿಂದ ಹೆಂಗಸರು ಬರುತ್ತಿದ್ದರು—ಸ್ಪೃಶ್ಯ ಅಸ್ಪೃಶ್ಯ ಎಲ್ಲರೂ. ಸ್ಪೃಶ್ಯರು ಒಂದು ಬದಿ ಅಸ್ಪೃಶ್ಯರು ಇನ್ನೊಂದು ಬದಿ. ನಲ್ಲಿ ಬಂದ್ ಆದ ಮೇಲೆ ಅಸ್ಪೃಶ್ಯರು ಇಳಿ ಮೋರೆ ಮಾಡಿ ಕಾಯೋದು. ಆವಾಗ ನಾನು ದೊಡ್ಡವಳಿರಲಿಲ್ಲ, ೮-೯ ವರ್ಷ ದವಳಿರಬೇಕು. ದಯೆ ಬರುತ್ತಿತ್ತು. ಪಾಪ ಅವರದೇನು ದೋಷ ಅನಿಸುತ್ತಿತ್ತು ಆದರೆ ನನ್ನ ಮೇಲೆ ಇಷ್ಟು ಕರ್ಮಠ ಸಂಸ್ಕಾರಗಳಿದ್ದದ್ದರಿಂದ ಅಸ್ಪೃಶ್ಯನಿಂದ ಒಂದು ಹನಿ ಮೈಮೇಲೆ ಸಿಡಿದಿದ್ದರೂ ನಾನು ಮತ್ತೆ ಸ್ನಾನ ಮಾಡುತಾ ಇದ್ದೆ. ಸಂಸ್ಕಾರದ ವಿರುದ್ಧ ಹೋಗುವ ಶಕ್ತಿ ನನಗಿರಲಿಲ್ಲ. ಅದೇ ಸಾಚೆಯಲ್ಲಿ ಬೆಳೆದಿದ್ದೆ. ನಮ್ಮ ಅಂಗಳದಲ್ಲಿ ಒಂದು ಬಾವಿ ಇತ್ತು.

ದೂರದಿಂದ ಅಸ್ಪೃಶ್ಯರ ಎಲ್ಲ ಕೊಡಗಳನ್ನೂ ತುಂಬಿ ಕೊಡುತ್ತಿದ್ದೆ. ಅಂದರೆ ನನ್ನಲ್ಲಿ ಕರುಣೆ ಇತ್ತು, ಧೈರ್ಯ ಇರಲಿಲ್ಲ.

ನಾನು ನನ್ನ ಪತಿ (ಬಾಬಾ) ಇಬ್ಬರೂ ಶ್ರೀಮಂತ ಪರಿವಾರದವರು. ನಮ್ಮಲ್ಲಿ ಏಳು ಮಹಾಮಹೋಪಾಧ್ಯಾಯರು ಆಗಿದ್ದರು. ಬಾಳಾಶಾಸ್ತ್ರಿ ಹರಿದಾಸ, ಡಾ|| ಶಿವದಾಸ ಬಾರಲಿಂಗೆ, ಕೇಶವರಾವ್ ತಮ್ಹಾಣೆ ಇವರೆಲ್ಲ ನನ್ನ ತಾತನ ಶಿಷ್ಯರಿದ್ದರು. ಆದ್ದರಿಂದ ಅವರೆಲ್ಲರೂ ಸನಾತನ ವೃತ್ತಿಯ ಸಂಸಾರವಿತ್ತು.

ಬಾಬಾ ಅವರ ಸೇವೆಗಾಗಿ ನಾನೆಂದೂ ಅವರ ಮುಂದೆ ಸುಳಿಯುತ್ತಿರಲಿಲ್ಲ. ಅದು ನನ್ನ ಸ್ವಭಾವದಲ್ಲಿರಲಿಲ್ಲ. ಬಾಬಾ ಅವರು ನಮ್ಮ ಮನೆಗೆ ಬಂದಿದ್ದ ಒಂದು ದಿನ ಪಿಎಚ್‌ಡಿ ಪದವೀಧರರೊಬ್ಬರು ನನ್ನನ್ನು ನೋಡಲು (ವಧೂ ಪರೀಕ್ಷೆ) ಬಂದಿದ್ದರು. ಎಲ್ಲ ವಿದ್ವಾಂಸರ ಪರಿವಾರ ನನ್ನನ್ನು ನೋಡಿದ್ದಾಯಿತು. ತಾತನ ಎದುರು ಮಾತಾಡುವ ಧೈರ್ಯ ನನಗಿರಲಿಲ್ಲ. ಆದರೆ ನನ್ನ ತಾಯಿಗೆ ಮತ್ತು ಅಕ್ಕನಿಗೆ ಹೇಳಿಯೇ ಬಿಟ್ಟೆ: ಅವರಂಥಾ ಗಿಡ್ಡ ವ್ಯಕ್ತಿ ನನಗೆ ಹಿಡಿಸೋದಿಲ್ಲ ಅಂತ. ತಾನಿಗೆ ಈ ಸಂಗತಿ ತಿಳಿದಾಗ ಕೋಪಾಗ್ನಿ ಧಗಧಗಿಸಿತು. ಈ ಪೊಟ್ಟೇಗೆ ಇವರಿಗಿಂತ ಇನ್ನೂ ಚೆನ್ನಾಗಿರೋರು ಯಾರು ಸಿಕ್ತಾರೆ, ಮನೆಗೆ ನಡೆದು ಬಂದವರನ್ನು ಬಿಡೋದಕ್ಕೆ ಎಂದೆಲ್ಲಾ ಕೋಪ ಮಾಡಿದರು.

ಅಷ್ಟರಲ್ಲಿ ಬಾಬಾ ಹೇಳಿದರು: "ನೀವು ಅವಳ ಕಾಳಜಿ ಮಾಡಬೇಡಿ. ನಾನು ನೋಡಿ ಕೊಡುತ್ತೇನೆ."

ಆವಾಗ ಬಾಬಾರವರ ಸ್ನೇಹಿತರೆಲ್ಲಾ ಐ.ಸಿ.ಎಸ್. ಆಫೀಸರ್ ವಗೈರೆ ಇದ್ದರು. ಅವರ ಮನಸ್ಸಿನಲ್ಲಿ ಯಾವ ಪಾಪವೂ ಇರಲಿಲ್ಲ. ಮುಂದೆ ೧೫-೨೦ ದಿವಸಗಳು ಕಳೆದಾಗ ಬಾಬಾರಲ್ಲಿ ಪರಿವರ್ತನೆ ಆದಂತೆ ತೋರಿತು. ಕೆಲವು ದಿವಸಗಳ ಬಳಿಕ ಮನೆಗೆ ಬಂದು ಧೈರ್ಯ ತಂದುಕೊಂಡು ಹೇಳಿದರು: ನನಗಿಂತ ಹೆಚ್ಚು ಅರ್ಹತೆಯವರು ಯಾರೂ ಕಾಣಲ್ಲ. ಆದಕ್ಕೆ ಇಂದೂನ ಜೊತೆ ನಾನೇ ಮದುವೆ ಮಾಡಿಕೊಳ್ಳುತ್ತೇನೆ." ಆಗ ಎಲ್ಲರಿಗೂ ಅತಿಕೋಪ. "ಈ ಸನ್ಯಾಸಿ ಚೆನ್ನಾಗಿಯೇ ಕರಗಿದ್ದಾನೆ ವಿಶ್ವಾಮಿತ್ರನ ತರ."

ನಾನೂ ಒಪ್ಪಿ ಬಿಟ್ಟೆ. ನನಗೂ ಬೇರೆ ತರಹದ ಜೀವನದ ಆಕಾಂಕ್ಷೆ ಇತ್ತು. ನನ್ನ ಅಕ್ಕನ ಮೂಲಕ ಎಲ್ಲರಿಗೂ ಒಪ್ಪಿಗೆ ತಿಳಿಸಿಬಿಟ್ಟೆ. ಆದರೆ ಮನೆಯಲ್ಲಿ ಇದು ಯಾರಿಗೂ ಸರಿ ಅನಿಸಲಿಲ್ಲ. ಬಾಬಾರವರ ರೂಪ ನೋಡಿ "ನಿನಗೆ ಇನ್ಯಾರೂ ಸಿಗುತ್ತಿರಲಿಲ್ಲವೆ ?" ಅಂದರು. ಎಲ್ಲರ ವಿರೋಧವಿದ್ದರೂ ನಮ್ಮ ಮದುವೆ ಆಯಿತು. ನಾನು ಅದೃಷ್ಟದ ಮೇಲೆ ಭರವಸೆ ಇಟ್ಟು ಆದದ್ದಾಗಲಿ ಎಂದು ಸುಮ್ಮನಿದ್ದೆ. ಆದರೆ ಮುಂದೆ ನಮ್ಮ ಜೀವನದಲ್ಲಿ ಏನು ಇದೆಯೋ ಅಂತ ಆವಾಗ ಗೊತ್ತಿರಲಿಲ್ಲ, ಅಷ್ಟೆ. ನನಗೆ ಇತರರಿಗಿಂತ ಬೇರೆ ತರಹದ ಜೀವನ ಬೇಕಿತ್ತು.

ಮದುವೆ ಗೊತ್ತಾದನಂತರ ಬಾಬಾ ಅವರು ತಮ್ಮ ಕಾಯದೆ ಡಿಗ್ರಿ ಹರಿದು ಹಾಕಿದರು. ವಕೀಲಿ ಮಾಡಕೂಡದೆಂದು ನಿರ್ಧರಿಸಿ ನೂರಾಐವತ್ತು ರೂಪಾಯಿ ಸಂಬಳದ ಕೋರಗಾವಂಕರ್ ಟ್ರಸ್ಟಿನ

ಕೆಲಸ ಶುರುಮಾಡಿದರು. ಈ ಟ್ರಸ್ಟ್‌ನ ಅಧ್ಯಕ್ಷರು ಶಂಕರರಾವ್ ದೇವ. ಆಚಾರ್ಯ ಭಾಗವತ, ಆಚಾರ್ಯ ಜಾವಡೇಕರ್, ಅಪ್ಪಾ ಸಾಹೇಬ್ ಪಟವರ್ಧನ್, ಎಸ್. ಎಂ. ಜೋಶಿ, ಧರ್ಮಾಧಿಕಾರಿ ಇವರೆಲ್ಲ ಟ್ರಸ್ಟ್‌ನ ಸದಸ್ಯರು. ಆದಾಯ ಸಂಬಳ ಮಾತ್ರ. ಇಷ್ಟರಲ್ಲೇ ಸಂಸಾರ ನಿರ್ವಹಿಸಬೇಕೆಂದು ನಿಶ್ಚಯಿಸಿದೆವು. ಪಿತ್ರಾರ್ಜಿತ ಧನ ಆಸ್ತಿಗಳಿಗೆ ಕೈಚಾಚಲಿಲ್ಲ. ಆನಂದವನ ಆರಂಭ ಮಾಡೋ ಮುಂಚೆ, ಅಂದರೆ ೧೯೪೫-೫೧ರ ಮಧ್ಯಕಾಲ, ಅತ್ಯಂತ ಕಠಿಣವಾಗಿತ್ತು. ಅನೇಕ ಘಟನೆಗಳು ನಡೆದು ಹೋದ ಅವಧಿ ಅದು.

ನಮ್ಮ ಮಧುಚಂದ್ರ ದಿನಗಳು ಹೇಗಿದ್ದುವು? ಸ್ವಲ್ಪದರಲ್ಲಿಯೇ ಹೇಳತೇನೆ. ಬಾಬಾ ಅವರಿಗೆ ದಲಿತರ ಬಗ್ಗೆ ಅತಿಶಯ ಕರುಣೆ. ಮೊದಲಿನಿಂದಲೂ ಹಾಗೆ. ನಮ್ಮ ವಿಕಾಶ ಜನ್ಮ ಆಗೋವರೆಗೆ ನಾವಿಬ್ಬರೂ ದಿನಾಗಲೂ ದಲಿತರ ಮೊಹಲ್ಲಾಗಳಿಗೆ ಹೋಗುತಾ ಇದ್ದೆವು. ಅದರ ಮುಂಚೆ ನಾವು ಅವರು ಯಾರ ಕೈಯಿಂದಲೂ ನೀರು ಸಹ ಕುಡಿದಿರಲಿಲ್ಲ. ಮಧುಭಾಯಿ ಪಂಡಿತರಿಗೆ ನಾನು ಯಾವಾಗಲೂ ಹೇಳುತಾ ಇದ್ದೆ: ನೀವು ಮೀನು ತಿನ್ನುವ ಸಾರಸ್ವತರು, ನಿಮ್ಮ ಕೈಯಿಂದ ನಾನು ಖಂಡಿತ ನೀರು ಕುಡೀಲಿಕ್ಕಿಲ್ಲ.

ಆದರೆ ಮದುವೆಗೆ ಮುಂಚೆಯೇ ಬಾಬಾ ಅವರು ನನಗೊಂದು ಲೆಕ್ಚರ್ ಹೊಡೆದಿದ್ದರು. ಈ ಜಾತಿ, ಧರ್ಮ, ಪಂಥ ಇವಕ್ಕೆ ಏನೂ ಅರ್ಥವಿಲ್ಲ. ಹುಟ್ಟಿದ ಮನುಷ್ಯ ಒಂದೇ ಇರಬೇಕು. ಇದು ನನಗೆ ಅರ್ಥವಾದ ಮೇಲೆ ನಾನೂ ತಯಾರಾದೆ. ನಮ್ಮ ಮದುವೆ ಆದ ಮೇಲೆ ನಮ್ಮ ಸ್ವಾಗತ ಹರಿಜನ ಮೊಹಲ್ಲಾದಲ್ಲೇ ಆಯಿತು. ಎಲ್ಲ ತರದ ಹರಿಜನರೂ ಅಲ್ಲಿದ್ದರು. ಅವರಿಂದಲೇ ನಮ್ಮ ಸ್ವಾಗತ ನಡೆಯಿತು. ಅಲ್ಲಿಯೇ ನಾನು ಬಂಗಿಯರ ಕೈಯಿಂದ ನೀರು ಕುಡಿದೆ ಗಾಜಿನ ಗ್ಲಾಸಿನಲ್ಲಿ. ಅಂದರೆ ಸಾಮಾಜಿಕವಾಗಿ ಹನುಮಾನನ ಉಡ್ಡಾಣವಾಯಿತು. ಅನಂತರ ನಮ್ಮವರ ಮನೆತನಗಳ ಸಂಬಂಧ ಕಡಿದು ಬಿತ್ತು. ನಮ್ಮಿಂದ ಭ್ರಷ್ಟಾಚಾರವಾಗಿತ್ತು. ನಮ್ಮ ಮನೆಗೆ ಯಾರೂ ಬಂದು ಹೋಗೋದು ಬಂದ್ ಆಯಿತು. ಅಸ್ಪೃಶ್ಯರನ್ನು ಹತ್ತಿರ ಮಾಡಿದ್ದಕ್ಕೆ ನಾವು ಭ್ರಷ್ಟಾಚಾರಿಗಳು ಅಂತ. ಆವಾಗ ಈ ತರಕ್ಕೆ ಭ್ರಷ್ಟಾಚಾರ ಅಂತ ಸಾಮಾಜಿಕ ತಿಳಿವಳಿಕೆ. ಈಗಿನ ಭ್ರಷ್ಟಾಚಾರ ಬೇರೆ ತರದ್ದು. ನಾವಿಬ್ಬರೂ ಹರಿಜನ ವಸತಿಯಲ್ಲಿ ರಾಷ್ಟ್ರಭಕ್ತಿಪರ ಹಾಡು ಹೇಳೋದು, ಅವರಿಗೆ ಎಲ್ಲಾ ತರ ಸಹಾಯ ಮಾಡೋದು, ಶಿಕ್ಷಣ ಕೊಡೋದು.

ವಿಕಾಸನ ಜನ್ಮದ ಬಳಿಕ ಎರಡು ತಿಂಗಳಲ್ಲೇ ನಾವು ಊರಲ್ಲಿಯ ಮನೆ ತೆರವು ಮಾಡಬೇಕಾಯಿತು. ಮನೆ ಮಾಲೀಕರು ಬ್ರಾಹ್ಮಣರು. ಹರಿಜನರಿಗೆ ಸಹಾಯ ಮಾಡಿದ್ದರಿಂದ ನಮಗೆ ಮನೆ ಖಾಲಿ ಮಾಡಿ ಎಂದರು. ರಾತ್ರಿ ವೇಳೆ ಮನೆ ಮೇಲೆ ಕಲ್ಲು ತೂರೋದು ಶುರು ಆಗಿತ್ತು.

ಆವಾಗ ಆರ್. ಕೆ. ಪಾಟೀಲರು ಆಹಾರ ಮಂತ್ರಿ. ಇವರು ಮುಸಲ್ಮಾನರ ಕಬ್ರಸ್ಥಾನದ ಬಳಿ ಒಂದು ಹಳೇ ಮನೆ ಕೊಂಡಿದ್ದರು. ಇಲಿ ಹೆಗ್ಗಣಗಳ ಕಾಟದಲ್ಲಿಯೇ ನಾವು ಅದನ್ನು ರಿಪೇರಿ ಮಾಡಿ ವಾಸಕ್ಕೆ

ಹೋದೆವು. ಮನೆ ದೊಡ್ಡದಾಗಿತ್ತು. ಬಾಬಾ ಅಂದರು: "ನಾವೊಂದು ಪ್ರಯೋಗ ಮಾಡೋಣ—ಸಾಮ್ಯ (ಸರ್ವಸಮತ್ವ) ಯೋಗದಲ್ಲಿಯ ಪ್ರಯೋಗವದು." ಹೊಲೆಯರು, ಮಚಗಾರರು, ಅಸ್ಪೃಶ್ಯರು ಹಾಗೂ ಸ್ಪೃಶ್ಯರು ಸೇರಿ ಒಂದು ಮನೆಯಲ್ಲಿ ವಾಸ ಮಾಡೋದಿಕ್ಕೆ ಶುರುವಾಯಿತು. ಬದಿಗೆ ಮುಸಲ್ಮಾನರ ಶವಗಳು ಹತ್ತಿರ ಕಾಣೋದು. ನಮ್ಮ ಕಷ್ಟಮಯ ಜೀವನ ಸಮಾನ ಪಾತಳಿಯಲ್ಲಿ ಜಾತಿ ಧರ್ಮ ಎಲ್ಲ ಮರೆತು ಮುನ್ನಡೆಯಿತು. ಆವಾಗ ವಿಕಾಸನಿಗೆ ಎರಡೇ ತಿಂಗಳು. ಎಲ್ಲರೂ ಕೂಡಿ ವಾಸ ಮಾಡುತಾ ಇರೋದರಿಂದ ನಮಗೆ ಬೇರೆ ಊಟ ತಿಂಡಿ ವ್ಯವಸ್ಥೆ ಇರಲಿಲ್ಲ. ಹಾಲು ಗೀಲು ಎಲ್ಲ ಬಂದ್. ಒಬ್ಬ ಮಾದಿಗ ಜಾತಿಯುವನಿಗೆ ಮೂವರು ಹೆಂಡಂದಿರು. ಅವರ ಅನೇಕ ಮಕ್ಕಳ ಉಸಾಬರಿ, ತಲೆಹೇನು ತೆಗೆಯುವುದು ಎಲ್ಲ ನನ್ನ ಕೆಲಸ.

ನನ್ನ ಮನೆಯಲ್ಲಿ ಸಿಕ್ಕಿದ ಕಿಮ್ಮತ್ತಿನ ಬಟ್ಟೆ ಎಲ್ಲವನ್ನೂ ಹರಿದು ಎಲ್ಲ ಮಕ್ಕಳಿಗೆ ಬಟ್ಟೆ ಹೊಲಿದೆ. ನಾವು ಖಾದಿ ವ್ರತ ತೊಟ್ಟಿದ್ದೆವಲ್ಲ. ಎಲ್ಲರಿಗಾಗಿ ಅಡುಗೆ ಮಾಡೋದು. ಪಲ್ಯ ಪ್ರತಿ ರವಿವಾರ ಮಾತ್ರ. ಉಳಿದ ಎಲ್ಲಾ ದಿವಸ ರೊಟ್ಟಿ ತನಿ, ಚಟ್ನಿ. ವಾರದಲ್ಲಿ ಒಂದು ಸಲ ೨ ರೂಪಾಯಿ ಪಲ್ಲೆ.

ಜೊತೆಗೆ ಇದ್ದ ಹೆಣ್ಣು ಮಕ್ಕಳಿಗೆ ಏನೇನೋ ಚರ್ಮರೋಗ. ಆಗಿನ ದಲಿತರಿಗೂ ಈಗಿನ ದಲಿತರಿಗೂ ಮಹದಂತರವಿದೆ. ನಾನು ಮನಸ್ಸು ತಯಾರಿಸಿ ಎಲ್ಲ ಕೆಲಸ ಮಾಡತಾ ಇದ್ದೆ. ಕಸಬರಿಗೆ ಕಟ್ಟೋದು, ಬಟ್ಟೆ ಹೆಣೆಯೋದು ಎಲ್ಲವೂ ನನಗೆ ಅವರಿಗಿಂತ ಚೆನ್ನಾಗಿ ಅಭ್ಯಾಸವಾಯಿತು. ಅವೆಲ್ಲವನ್ನೂ ಮಾರಾಟ ಮಾಡಿ ೫೦ ರೂಪಾಯಿ ಸಿಕ್ಕೋದು. ಬಾಬಾ ನಾಗಪುರಕ್ಕೆ ೨ನೇ ಕ್ಲಾಸ್ ರೇಲಿನಿಂದ ಹೋಗೋರು. ಗಾಜಿನ ಗ್ಲಾಸುಗಳನ್ನೂ ಕಲ್ಲಿನ ಪಾತ್ರೆಗಳನ್ನೂ ಕೊಂಡುತಂದು ಈ ನಮ್ಮ ಜನಕ್ಕೆ ಮಾರಾಟ ಮಾಡಲು ಕಳಿಸೋರು.

ಕಠಿಣ ದಿವಸಗಳು. ಆ ಜಾಗದಲ್ಲಿ ಹಾವು, ಚೇಳು ಬಹಳ. ನನ್ನ ಜೀವನದಲ್ಲಿ ಇಲ್ಲೀವರೆಗೆ ನಾನು ೫೦೦ಕ್ಕಿಂತಲೂ ಹೆಚ್ಚು ಚೇಳು ಹೊಡೆದಿರಬಹುದು. ಸಾಯಂಕಾಲ ಧಾರಾಳ ಹಾವುಗಳು ಬರೋವು. ಬಾಬಾ ಅವರಿಗೆ ಒಂದು ಸಲ ಹಾವು ಕಚ್ಚಿತು. ಅದರ ಮೇಲೆ ಔಷಧಿ ಏನೂ ಇಲ್ಲ. ಇಡೀ ರಾತ್ರಿ ಅವರನ್ನು ಕಾಲಮೇಲೆ ನಿಲ್ಲಿಸಿದರು. ಅಷ್ಟರಲ್ಲೇ ಪರಮೇಶ್ವರನೇ ಕಳಿಸಿದ ಹಾಗೆ ಅಪ್ಪಾ ಮಾಂಗಲೇಕರ ಎಂಬ ಗೃಹಸ್ಥ ರಾತ್ರಿ ೧೨ ಗಂಟೆಗೆ ಬಂದರು. ಬಾಬಾ ಅವರ ನರಳಾಟ ನಡೆದೇ ಇತ್ತು. ಅಷ್ಟು ಖಾರ ತಿನ್ನದೇ ಇದ್ದವರಾದ್ರೂ ಎಷ್ಟೋ ಮೆಣಸಿನ ಕಾಯಿ ತಿಂದರು. ಜೊತೆಗೆ ಬೇವಿನ ತೊಪ್ಪಲು. ಅಂದರೆ ಹಾವು ವಿಷವುಳ್ಳದ್ದೋ ಅಲ್ಲವೇ ಎಂದು ತೀರ್ಮಾನ ಮಾಡೋಕ್ಕೆ. ಆಮೇಲೆ ಮೂಲಿಕೆ ಕೊಟ್ಟರು ಯಾವುದೋ ಏನೋ. ಅವರನ್ನು ರಾತ್ರಿ ಎಲ್ಲ ನಿಂತ್ಕೊಂಡೇ ಇರೋಕ್ಕೆ ಹೇಳಿದರು. ನಾವೆಲ್ಲರೂ ರಾತ್ರಿ ರಘುಪತಿ ರಾಘವ ರಾಜಾ ರಾಮ್ ಎಂದು ಭಜನೆ ಮಾಡುತ್ತ ಕಾಲ ತಳ್ಳಿದೆವು. ಅವರಿಗೆ ಕುಣೀಲಿಕ್ಕೆ ಹೇಳಿದೆವು. ಮಾರನೇ ದಿವಸ ಬಾಬಾ ಅವರು ಸರಿಯಾದರು.

ನಮ್ಮ ಪ್ರಕಾಶನ ಜನ್ಮದ ಕತೆ ಹೇಳುತ್ತೇನೆ. ನನಗೆ ಏಳನೇ ತಿಂಗಳು ಹೋಪ

ಮೇಲೆ ಟೈಫಾಯ್ಡ್ ರೋಗ ಅಂಟಿತು. ಅದಕ್ಕಿಂತ ತುಸು ಹಿಂದಿನ ಮಾತು. ಹತ್ತಿರದ ಕಬ್ರಸ್ಥಾನದಲ್ಲಿ ಒಬ್ಬಳು ಕುರುಡಿ ಮುಸಲ್ಮಾನಳಿದ್ದಳು. ನಮ್ಮ ತಿರುಗಾಟದಲ್ಲಿ ಅವಳನ್ನು ನೋಡಿ ಬಾಬಾ ಅವರಿಗೆ ಅತಿ ದಯೆ ಬಂದಿತು. ಚಿಂದಿಬಟ್ಟೆ ಭಿಕ್ಷುಕಿ. ನಮ್ಮ ಸಾಮ್ಯಯೋಗದಲ್ಲಿಯು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದ್ದರು.

ಬಾಬಾ ಕುರುಡಿಯನ್ನು ಮನೆಗೆ ಕರೆದರು—ಸೇವೆ ಮಾಡೋದಕ್ಕೆಂದು. ಅವಳು ಕಾಫಿರನ ಮನೆಗೆ ಬರೋದಿಲ್ಲ ಎಂದಳು. ಬಾಬಾ ಅವರಿಗೆ ಖೇದ ಎನಿಸಿತು. ಆದರೂ ದಿನಾಲೂ ಅವಳ ಬಟ್ಟೆಗಳನ್ನು ಒಗೀಲಿಕ್ಕೆ ಮನೆಗೆ ತರುವರು. ಅವಳ ನಾಷ್ಟಾ ಮತ್ತು ಬಿಸಿನೀರು ಅವಳ ಜಾಗಕ್ಕೆ ಹೋಗಿ ಕೊಡತಾ ಇದ್ದರು. ಅವಳಿಗೆ ಸ್ನಾನ ಮಾಡುಸೋದು ಮಧ್ಯಾಹ್ನ ಊಟ ಕೊಡೋದು ನನ್ನ ಕಡೆ. ರಾತ್ರಿ ಮಾತ್ರ ಅವರೇ ಹೋಗಿ ಕೊಡೋರು.

ನಾನು ಮನೆಯಲ್ಲಿ ಅಜಾರಿನೇ ಇದ್ದೆ. ೧೦೫ ಡಿಗ್ರಿ ಜ್ವರ ಇರತ್ತಿತ್ತು ಟೈಫಾಯ್ಡಿನಿಂದ. ನನ್ನ ಹತ್ತಿರ ಯಾರೂ ಇರತಿರಲಿಲ್ಲ. ವಿಕಾಸ ಚಿಕ್ಕವನಾಗಿದ್ದ—೮, ೯ ತಿಂಗಳವನ. ನಮ್ಮ ಪಾತ್ರೆ, ಬಟ್ಟೆ ವಿಕಾಸನ ಶೀ-ಶೂ ಎಲ್ಲಾ ಬಾಬಾರವರೇ ಮಾಡೋದು. ಹಳ್ಳಿಯಿಂದ ಎರಡು ಮುಗ್ಗಿ ಆಕಳು ತಂದಿದ್ದೆವು. ಹಾಲು ಕರೆಯೋದು ಎಲ್ಲಾ ಅವರ ಕೆಲಸ. ಹೀಗಾಗಿ ತೂಕ ೧೬೦ ಪೌಂಡ್ ಇದ್ದವರು ೧೦೦ಕ್ಕೆ ಇಳಿದರು. ಕೈಕಾಲು ಕಡ್ಡಿ ಆಗಿದ್ದುವು. ನನ್ನ ಹಣೆ ಮೇಲೆ ನೀರಿನ ಪಟ್ಟಿ ಇಡಕ್ಕೂ ಯಾರೂ ಇರಲಿಲ್ಲ.

ವಿಕಾಸನನ್ನ ಕೆಲವು ದಿವಸ ಮಾತೃಸೇವಾ ಸಂಘಕ್ಕೆ ಕಳಿಸಿದೆವು. ಅಲ್ಲಿ ಸಹ ನರ್ಸ್ ಯಾರೂ ಇರಲಿಲ್ಲ. ಮಹದೇವ ಹೆಸರಿನ ಹುಡುಗ ಇದ್ದ. ಲೈಬ್ರರಿಯಲ್ಲಿಯು ಚಪರಾಸಿ. ಅವನಿಗೆ ತಿಂಗಳಿಗೆ ೧೦ ರೂಪಾಯಿ ಸಂಬಳದ ಮೇಲೆ ಅವನಿಂದ ವಿಕಾಸನ್ನ ನೋಡಿಕೊಳ್ಳೋ ಸಹಾಯವೇನೋ ಒದಗಿತು. ಆದರೆ ಅವನು ಹೇಳುತಾ ಇದ್ದ. ವಿಕಾಸನಿಗೆ ಹಾಲು ಕುಡಿಸಿ ರೂಮ್‌ನಲ್ಲಿ ಬಂದ್ ಮಾಡಿ ಇಡತಾರೆ, ಅವನು ಅಲ್ಲಿ 'ಶೀ' ಮಾಡಿ ಸಾರಿಸತಾ ಇರ್ತಾನೆ. ಇದೆಲ್ಲ ಕೇಳಿ ವಿಕಾಸನ್ನ ಮನೆಗೆ ತರಿಸಿದೆವು. ನನ್ನ ಪ್ರಕೃತಿ ನೋಡೋಕೆ ಬಂದವರು ತಲೇ ಮೇಲೆ ನೀರ ಪಟ್ಟಿ ಇಡತಾ ಇದ್ದರು. ಬಾಬಾ ಅವರು ಅಡುಗೆ ಮಾಡೋದರಲ್ಲಿ ಮಗ್ನರಾಗಿರುತ್ತಿದ್ದರು. ನನ್ನ ಟೈಫಾಯ್ಡ್ ಜ್ವರ ಇನ್ನೂ ವಿಕೋಪಕ್ಕೆ ಹೋಯಿತು. ದೂರದ ಊರಿಂದ ಕಾಲ್ನಡಿಗೆಯಲ್ಲಿ ಬಂದ ಡಾಕ್ಟರ್ ಕ್ವಿನಾಯ್ನ್ ಇಂಜೆಕ್ಷನ್ ಚುಚ್ಚಿದರು. ಶ್ವಾಸ ಕಠಿಣವಾಗಿತ್ತು. ಬಾಬಾ ಅವರಿಗೆ ಹೇಳಿದೆ: "ನಾನು ಇನ್ನು ಹೊರಟೆ. ವಿಕಾಸನ್ನ ನೋಡಿಕೊಳ್ಳಿ." ನಿಶ್ಚಿಂತೆಯಿಂದ ಕಣ್ಣು ಮುಚ್ಚಿದೆ. ಬೆಳಿಗ್ಗೆ ಕಣ್ಣು ತೆರೆದೆ! ಇನ್ನೂ ಜೀವಂತವಾಗಿ ಇದ್ದೇನೆಂದು ಆಶ್ಚರ್ಯವಾಯಿತು.

ಒಂಬತ್ತು ತಿಂಗಳು ಪೂರ್ತಿ ಆಯಿತು. ಎಲ್ಲರೂ ಹೇಳತಿದ್ದರು ಹೊಟ್ಟೇಲಿರೋ ಮಗು (ಪ್ರಕಾಶ) ಬದುಕೋದಿಲ್ಲ ಅಂತ. ಆದರೆ ನಿಯಮ ಬೇರೇನೇ ಇತ್ತು. ಆತ ಮುಂದೆ ಇಷ್ಟೆಲ್ಲ ಕೆಲಸ ಮಾಡಬೇಕಾಗಿತ್ತಲ್ಲ.

ನಾವು ಆಯ್ದು ಅನುಸರಿಸಿದ್ದು ದಾರಿದ್ರ್ಯ. ಹೊಟ್ಟೆ ತುಂಬ ಊಟ ಇರಲಿಲ್ಲ. ಮನೆಯಲ್ಲಿ

ಬರೀ ದೊಡ್ಡ ದೊಡ್ಡ ಉಪ್ಪಿನಕಾಯಿ ಭರಣಿಗಳು. ರ್‍ಯಾಕ್ ಮೇಲಿಂದ ಎತ್ತಲಿಕ್ಕೆ ಹೋಗಿ ಜಾರಿ ಬಿದ್ದೆ. ಭರಣಿ ತಲೆ ಮೇಲೆ. ತಲೆ ಒಡೆದು ನೆತ್ತರು ಹರಿಯಿತು. ಡಾಕ್ಟ್ರು ಬಂದು ಪಟ್ಟಿ ಮಾಡಿದರು. ಮಂತ್ರಿ ಆರ್.ಕೆ. ಪಾಟೀಲರು ಆಗ ಬಂದಿದ್ದರು. ಬಾಬಾರ ಬಂಧು ಸಮಾನ. ಅವರನ್ನು ಆರಿಸಿ ತರಲು ಬಾಬಾರು ಎಷ್ಟೊಂದು ಸಹಾಯ ಮಾಡಿದ್ದರು!

ಪ್ರಶ್ನೆ: ನೀವೆಲ್ಲಾ ಇದನ್ನು ಅನುಭವಿಸಿದ್ದು ಮತ್ತು ಸಹಿಸಿದ್ದು ಹೇಗೆ?

ಉತ್ತರ: ಮಧ್ಯದಲ್ಲಿ ಇನ್ನೇನೂ ಕೇಳಬೇಡಿ. ನನ್ನ ಲಿಂಕ್ ತಪ್ಪಿ ಹೋಗುತ್ತದೆ. ಪ್ರಕಾಶನ ಜನ್ಮ ಆಗಲಿ ಮೊದಲು. ನಾನು ಬಿದ್ದು ತಲೆ ಒಡೆದದ್ದು ೯ನೆಯ ತಿಂಗಳಿನಲ್ಲಿ. ಇಂಥ ಸ್ಥಿತಿಯಲ್ಲಿ ವರೋರಾದಲ್ಲಿಯ ಸಿಸ್ಟರ್ "ನಾವು ಇವರ ಹೆರಿಗೆ ಮಾಡಿಸೋದಿಲ್ಲ" ಎಂದರು. ಆಮೇಲೆ ಆರ್. ಕೆ. ಪಾಟೀಲರು ಸಿವಿಲ್ ಸರ್ಜನ್‌ರನ್ನು ಕರೆತಂದರು ನನ್ನನ್ನ ನಾಗಪುರಕ್ಕೆ ಸಾಗಿಸುವ ಸಲುವಾಗಿ.

ನಾನು ಹೇಳಿದೆ: ನನ್ನ ಬದಲಿಗೆ ಇನ್ನಾವ ಬಡ ಹೆಂಗಸು ಇದ್ದಿದ್ದರೆ ಅವಳನ್ನು ಯಾರು ನಾಗಪುರಕ್ಕೆ ಕೊಂಡೊಯ್ಯುತ್ತಿದ್ದರು? ಇವೆಲ್ಲಾ ನನಗೆ ಬೇಡ. ಇಲ್ಲಿಯೇ ಇದ್ದ ಹಾಗೇ ಹೆರಿಗೆ ಆಗಲಿ. ಬಾಬಾ ಮಂತ್ರಿಗಳಿಗೆ ಹೀಗೆಯೇ ಹೇಳಿದರು. ಮತ್ತೆ ನನ್ನನ್ನು ಟಾಂಗಾದಲ್ಲಿ ಆಸ್ಪತ್ರೆಗೆ ಒಯ್ದು ಬಿಟ್ಟು ತಮ್ಮ ಕೆಲಸಕ್ಕೆ ಹೋದರು. ಅವರು ಆಗ ಸಂಸ್ಥೆಯ ವೈಸ್-ಪ್ರೆಸಿಡೆಂಟ್ ಆಗಿದ್ದರು.

ನನ್ನನ್ನು ಒಂದು ಮಂಚದ ಮೇಲೆ ಮಲಗಿಸಿ ನರ್ಸ್ ಬೇರೆ ಕೆಲಸಕ್ಕೆ ಹೋದಳು. ನಾನು ಆಗ ಒಬ್ಬಳೇ ಪೇಶಂಟ್. ನರ್ಸ್ ಬೇರೆ ರೂಮ್‌ನಲ್ಲಿ ಏನೋ ತಯಾರಿ ನಡೆಸುತ್ತಿದ್ದಳು. ಅಷ್ಟರಲ್ಲೇ ಕಾಟ್‌ನ ಮೇಲೆಯೇ ಪ್ರಕಾಶನ ಜನ್ಮ ಆಗಿಬಿಟ್ಟಿತು. ನಾನು ಕಿರುಚಿ ಹೇಳಿದೆ. ಆಮೇಲೆ ಎಲ್ಲರೂ ಬಂದರು. ಅನಂತರ ಎಲ್ಲ ವ್ಯವಸ್ಥೆಯೂ ಆಯಿತು. ಈ ಪ್ರಕಾಶ ಹೀಗೆ ಯಾರದೂ ಸಹಾಯವಿಲ್ಲದೆ ಹೊರಗೆ ಬಂದ, ಬೇವರಸಿ ತರ. ಈಗ ಎಷ್ಟು ಜನರಿಗೆ ಅವನ ಆಶ್ರಯ!

ಹನ್ನೊಂದು ದಿನಗಳು ಕಳೆದುವು. ಮನೆಗೆ ಪ್ರಕಾಶನ ಸಹಿತ ಮರಳಿದೆ. ಎಲ್ಲಾ ಅಸ್ತವ್ಯಸ್ತ, ಹಾಳು ದೂಳು, ಕಡ್ಡಿ ಕಸ. ಬಾಬಾ ಮನೆಯಲ್ಲಿರಲಿಲ್ಲ. ಧೈರ್ಯಮಾಡಿ ಪ್ರಕಾಶನ ಮಂಚದ ಮೇಲೆ ಮಲಗಿಸಿ ಕಸಗುಡಿಸಿ ಒಪ್ಪತಂದು, ಅವರು ಬರೊದಕ್ಕೆ ಮುಂಚೇನೇ ಮಲಗಿಬಿಟ್ಟೆ. ಬಂದರು. ಅವರಿಗೆ ಗಾಬರಿ.

ಆವಾಗ ನಾನು ಅವರಿಗೆ ಅಂಜತಾ ಇದ್ದೆ. ಈಗ ಮಾತ್ರ ಇಲ್ಲ. ಎಷ್ಟು ವರ್ಷಗಳಾದವಲ್ಲಾ! ಈವಾಗ ಅವರ ತಪ್ಪನ್ನ ಅವರಿಗೆ ಹೇಳತೇನೆ. ಅವರದನ್ನು ಮಾನ್ಯಮಾಡಲೇಬೇಕಾಗುತ್ತದೆ. ಅವರದು ಬರೇ ದೂರದೃಷ್ಟಿಯ ಚಷ್ಮ. ನನ್ನದಾದರೋ ಬೈಫೋಕಲ್ ದೂರದ್ದೂ ಸಮೀಪದ್ದೂ ಒಂದರಲ್ಲೇ ಇದೆ. ಜೀವನದಲ್ಲಿ ಎರಡರದ್ದೂ ಆವಶ್ಯಕತೆ ಇರುತ್ತೆ.

ಪ್ರಶ್ನೆ: ಇಂದೂ ತಾಯಿ! ನಾವು ಇಷ್ಟು ವರ್ಷ ನಿಮ್ಮನ್ನೂ ಬಾಬಾರನ್ನೂ ನೋಡತಾ ಇದ್ದೇವೆ. ಬಾಬಾ ಅತಿ ಉಗ್ರ ಪ್ರವೃತ್ತಿಯವರೆಂದು ಖ್ಯಾತಿ ಇದೆ. ಇಂಥವರ ಜೊತೆ ನೀವು ಅದ್ಹೇಗೆ ಸುದೀರ್ಘ ಸಂಸಾರ ಮಾಡಿದಿರಿ?

ಉತ್ತರ: ಅದು ಹೀಗಿದೆ. ಆವಾಗ ಸ್ತ್ರೀ ಮುಕ್ತಿ ಭಾಷೆ ಇರಲಿಲ್ಲ. ಅದು ಇದ್ದಿದ್ದರೆ ಕದಾಚಿತ್ ಪರಿಸ್ಥಿತಿ ಬೇರೆಯೇ ಆಗಿರುತ್ತಿತ್ತು. ಸ್ತ್ರೀಮುಕ್ತಿ ಇರದಿದ್ದುದು ಒಂದು ದೃಷ್ಟಿಯಿಂದ ಸರಿಯೇ ಅನ್ನಿ. ಆವಾಗ ಪತಿವ್ರತೆಯ ಧರ್ಮ ಇತ್ತು. ನಿಜ ಹೇಳಬೇಕಾದರೆ ನನಗೆ ಆವಾಗ ಮದುವೆಯ ಬಾಜಾರದಲ್ಲಿ ಒಳ್ಳೇ ರೇಟ್ ಇತ್ತು. ಅಂದರೆ ಚಪ್ಪಲಿ ಸವೆಸಿ ವರ ಹುಡುಕುವ ಅಗತ್ಯ ಇರಲಿಲ್ಲ. ಆದರೆ ನನಗೇನೇ ಬೇರೆ ತರಹದ ಬದುಕಿನ ಆಶೆ ಇತ್ತು. ನಾನಾಗಿಯೇ ಎಲ್ಲ ಬಿಟ್ಟು ಇವರ ಹಿಂದೆ ಬಂದಿದ್ದೆ. ಆದದ್ದನ್ನೆಲ್ಲಾ ಖುಷಿಯಿಂದ ಅಂಗೀಕರಿಸುವ ಧೈರ್ಯ ಇತ್ತು.

ಪ್ರಶ್ನೆ: ನಿಮ್ಮ ಅಷ್ಟು ಸುಖಾಸೀನ ಆಯುಷ್ಯ ಬಿಟ್ಟುಕೊಟ್ಟು?

ಉತ್ತರ: ಅದನ್ನು ಬಿಟ್ಟುಕೊಡಲು ಯಾವುದೂ ಕಠಿಣವಾಗಲಿಲ್ಲ. ಅವರ ಸಹವಾಸದ ಯಾತ್ರೆಯಲ್ಲಿ ಯಾವತ್ತೂ ಗಾಬರಿ ಪಡಲಿಲ್ಲ. ಈ ಆಯುಷ್ಯದಲ್ಲಿ ಬಾಬಾರವರು ಅನೇಕ ಸಲ ಮೃತ್ಯು ಹತ್ತಿರ ಹೋಗಿದ್ದನ್ನು ನೋಡಿದ್ದೇನೆ. ಎಲ್ಲಾ ದವಾಖಾನೆಗಳಲ್ಲಿ ವಾಸಮಾಡಿದ್ದೇನೆ. ಟಿ.ಬಿ. ಆಗಿ ನಾಗಪುರ ಆಸ್ಪತ್ರೆಯಲ್ಲಿ ಭರತಿ ಆದಾಗ ೫೦ ವರ್ಷಗಳಲ್ಲಿ ಮೊದಲನೇ ಸಲ ಒಂದು ತಿಂಗಳು ತವರು ಮನೆಯಲ್ಲಿದ್ದೆ. ವಿಕಾಸ, ಪ್ರಕಾಶ ಚಿಕ್ಕವರಿದ್ದರು. ಮನೆಯಲ್ಲಿದ್ದಾಗ ಅವರಿಬ್ಬರನ್ನು ಬಿಟ್ಟು ಕೀಲಿ ಹಾಕಿ ರಿಕ್ಷಾದಲ್ಲಿ ಆಸ್ಪತ್ರೆಗೆ ಹೋಗುತ್ತಾ ಇದ್ದೆ—೬ ಆಣೆ ಕೊಟ್ಟು. ಅನೇಕ ಸಲ ನಡೆದು ಹೋಗುತಾ ಇದ್ದೆ, ರಿಕ್ಷಾ ದುಡ್ಡು ಉಳಿಸುತಾ ಇದ್ದೆ.

ಮನೆಯಲ್ಲಿದ್ದ ಎಲ್ಲ ಫರ್ನೀಚರನ್ನೂ ಅವರ ಸಂಸ್ಥೆಗೆ ಕೊಟ್ಟಾಗಿತ್ತು. ಇನ್ನು ಮನೆಯಲ್ಲಿದ್ದದ್ದು ಬರೀ ಚಾಪೆ ಮತ್ತು ಚುಚ್ಚುವ ಕಂಬಳಿ. ಮಕ್ಕಳು ಚಿಕ್ಕವರೆಂದು ಒಂದು ರಜಿಯ ಕೊಂಡಿದ್ದೆ ೧೨ ರೂಪಾಯಿಗೆ. ಖರ್ಚಿಗೆ ಹಣವಿಲ್ಲವೆಂದು ಅದನ್ನು ೧೦ ರೂಪಾಯಿಗೆ ಮಾರಿದೆ. ನಮಗಿಬ್ಬರಿಗೂ ಸಂಕಟಗಳ ಪರಂಪರೇನೆ ಇದೆ. ಅಪಘಾತ ಮಾಡದೇನೇ ಓವರ್‌ಟೇಕ್ ಮಾಡತಾ ನಡೆದು ಬಂದೆವು. ಈತ ಮಾತ್ರ ನರ್ಮದೆಯ ಹತ್ತಿರ ಬಂದಿದ್ದೇವೆ. ಮೊದಲಿನದು ತಂತಿಯ ಮೇಲಿನ ಕಸರತ್ತು. ಈಗಿನದು ಗಾಳಿಯ ಮೇಲಿನ ಕಸರತ್ತು.

ನನ್ನಲ್ಲಿ ಸಾಕಷ್ಟು ಎದೆಗಾರಿಕೆ ಇತ್ತು. ಯಾವ ಕೆಲಸಗಾರ ಹೆಂಗಸಿಗಿಂತಲೂ ನಾನು ಹೆಚ್ಚು ಶ್ರಮಮಾಡಿ ತೋರಿಸಿದ್ದೇನೆ. ಈಗಲೂ ಹಾಗೆಯೇ ಕೆಲಸಮಾಡಬಲ್ಲೆ. ೪೦–೫೦ ಜನ ಬಂದಾಗ ನಾನೊಬ್ಬಳೇ ಅಡುಗೆ ಮಾಡಿ ಊಟ ಹಾಕತಾ ಇದ್ದೆ. ಬಾಬಾ ಗಾಡಿ ತುಂಬ ಉರುವಲ ಕಟ್ಟಿಗೆ ಒಡೆದು ತುಂಬುವರು. ಊಟ ಮುಗಿದ ಬಳಿಕ ಅವರೇ ಸಫಾಯಿ ಮಾಡುತ್ತಿದ್ದರು. "ಶ್ರಮವೇ ಶ್ರೀರಾಮ" ಅನ್ನೋದರಲ್ಲಿ ವಿಶ್ವಾಸ. ಯಾವ ಕೆಲಸಕ್ಕೂ ಹೇಸಿಗೆ ಪಡುವವರಲ್ಲ. ಅವರಿಗೆ ಅಪಾರ ಕರುಣೆ ಮತ್ತು ಶೀಘ್ರಕೋಪ ಗುಡಿ ಹೂಡಿದ್ದುವು—ಒಂದು ಏಟು, ಎರಡು ತುಂಡು. ನಾನು ಮತ್ತೆ ಆ ತುಂಡುಗಳನ್ನ ಜೋಡಿಸುತ್ತಾ ಇರೋದು. ನಾನು ಯಾವಾಗಲು ಅನ್ನೋದು ಹೈಲಿ ಇನ್‌ಫ್ಲೆಮಬಲ್, ಹ್ಯಾಂಡಲ್ ವಿತ್ ಕೇರ್. ಅದಕ್ಕೆ ಅವರು ಚೇಷ್ಟೆಯಿಂದ

ಅನ್ನೋರು "ನಾಟ್ ಟು ಬಿ ಲೂಸ್ ಪರ್‌ಟೆಡ್."

ಇನ್ನೊಂದು ಮರ್ಮದ ಸಂಗತಿ. ಒಂದು ಸಲ ಬಾಬಾರವರು ವಿನೋಬಾಜಿ ಬಗ್ಗೆ ಬರೆದಿದ್ದರು: ನಿನ್ನ ಪ್ರವಚನದಿಂದ ಪಾವನತೆ ಕುಡಿದು ಅನೇಕರು ಹೋಗುತ್ತಾರೆ. ಆದರೆ ನಿನ್ನ ಶಿಷ್ಯರ ಪಾಲಿಗೆ ವಂಚನೆಯು ಕಸಾನೆ ಬರತಾ ಇದೆ." ಇದರ ಮೇಲಿಂದ ನಾನು ಬಾಬಾರಿಗೆ ಹೇಳಿದೆ" : ನಿಮ್ಮ ಮಾತಿನಿಂದಲೂ ಅನೇಕರು ಪ್ರೇರಣೆ ತೆಗೆದುಕೊಂಡು ಹೋಗುತಾರೆ, ಆದರೆ ನಿಮ್ಮ ಸಾಧನೆಯಲ್ಲಿ ಅಡ್ಡಿ ಅಡಚಣೆಗಳೇ ಹೆಚ್ಚು". ಈ ತರ ನಮ್ಮ ಜುಗಲಬಂದಿ ನಡಿತಾನೇ ಇರುತ್ತೆ.

ಬಾಬಾ ಇನ್ನೊಬ್ಬರ ದುಃಖ ನೋಡಿ ಕರಗಿ ಹೋಗುತಾರೆ. ಅದರಿಂದಲೇ ಈ ಕೆಲಸದ ವ್ಯಾಪ್ತಿ ಬೆಳೆಯಿತು. ಅವರು ರೇಲಿನಲ್ಲಿ ಡೆಲ್ಲಿಗೆ ಹೋಗುವವರಿದ್ದರು. ಹಾದಿಯಲ್ಲಿ ಬೇವಾರ್ಸಿತರ ಹೊರಳಿಕೊಂಡಿದ್ದ ಒಬ್ಬ ಮುದುಕನನ್ನು ಕಂಡರು. ಯಾರೂ ಅವನನ್ನು ನೋಡತಾ ಇರಲಿಲ್ಲ. ಗಾಡಿ ಹೊರಡುವ ವೇಳೆ ಆಗಿದ್ದರೂ ಬಾಬಾ ಆ ಮುದುಕನನ್ನು ಮನೇಗೆ ತಂದು ಅವನ ಕೊಳೇನೆಲ್ಲಾ ತೊಳೆದು ಆಮ್ಯಾಲೆ ಓಡಿ ಓಡಿ ರೇಲ್ ಹಿಡಿದರು.

ನನ್ನ ಅಂಥ ಶ್ರದ್ಧೆಯ ಬಗ್ಗೆ ಒಂದು ಉದಾಹರಣೆ ಹೇಳತೀನಿ. ಸತಿ ಸಾವಿತ್ರಿ ತನ್ನ ಗಂಡನನ್ನ ಯಮನಿಂದ ಪಡೆದರೆ ನನಗೇಕೆ ಆಗದು? ಬಾಬಾ ಅಂದು ಡಾ. ಗಿಂಡೆಯವರ ಆಸ್ಪತ್ರೆಯಲ್ಲಿ ಸೀರಿಯಸ್ ಆಗಿ ನರಳುತ್ತಿದ್ದರು. ಮಧ್ಯ ರಾತ್ರಿ ಫೋನ್ ಬಂತು. ಪರಿಸ್ಥಿತಿ ತೀರ ವಿಷಮಿಸಿದೆ ಎಂದು. ಆಗ ನನ್ನ ತಂಗಿ ಮನೆಯಲ್ಲಿದ್ದಳು. "ಇವತ್ತು ವಿಕಾಸ, ಪ್ರಕಾಶರನ್ನು ನೋಡಿಕೊಂಡು ಅಡುಗೆ ನೀನೇ ಮಾಡು." ಅಂತ ಹೇಳಿ ವಟಸಾವಿತ್ರಿ ಪೂಜೆ ಮಾಡಲೆಂದು ನಸುಕಿನಲ್ಲೇ ಹೊರಟುಹೋದೆ. ಅತಿ ವಿಶಾಲವಾದ ಗಿಡಗಳ ನಿಬಿಡ ಕಾಡೇ ಅಲ್ಲಿತ್ತು. ವನ್ಯಮೃಗಗಳಿಂದ ತುಂಬಿದ ಅರಣ್ಯ. ಇದು ೧೯೫೪-೫೫ರ ಮಾತು. ವಿನೋಬಾ ಭಾವೆಯವರ ಗೀತೆಯ ಪಾಠವಿತ್ತು. ಅದರ ೧೮ ಆವರ್ತನೆ ಶುರು ಮಾಡಿದೆ—ವಟವೃಕ್ಷಕ್ಕೆ ಸುತ್ತು ಹಾಕತಾ. ಇಷ್ಟೆಲ್ಲಾ ಆವರ್ತನೆ ಪೂರ್ತಿ ಮಾಡಲಿಕ್ಕೆ ೨೪ ಗಂಟೆಗಳಿಗಿಂತಲೂ ಹೆಚ್ಚು ಸಮಯ ಬೇಕು. ಸಂಜೆ ಕವಿಯಿತು. ರಾತ್ರಿ ೧೧ ಗಂಟೆ ಆಯಿತು. ನನಗೆ ಗೊತ್ತಿದ್ದ ಎಲ್ಲಾ ಜನ ನನ್ನನ್ನು ಹುಡುಕಾಡುತಾ ಕೂಗುತಾ ಅಲ್ಲಿಗೆ ಬಂದೇಬಿಟ್ಟರು. ಆ ತನಕ ೧೧ ಆವರ್ತನ ಮುಗಿದಿದ್ದವು—ಬೆಳಗ್ಗಿನಿಂದ ಅನ್ನ ನೀರು ಇಲ್ಲದೇ. ಇದೇ ರೀತಿ ನಾನು ೫೦ಕ್ಕಿಂತಲೂ ಹೆಚ್ಚು ಉಪವಾಸ ಮಾಡಿದ್ದೇನೆ ಇಡೀ ಆಯುಷ್ಯದಲ್ಲಿ. ಆದರಲ್ಲೂ ತಲೆ ಮೇಲಿಂದ ನೀರು ತರೋದು, ಪಾತ್ರೆ ತಿಕ್ಕೋದು, ಬಟ್ಟೆ ಒಗೆಯೋದು, ನನ್ನ ಮಕ್ಕಳು ಎರಡು ಮತ್ತು ದತ್ತು ಮಗು ಒಂದು ಇಷ್ಟನ್ನೂ ಸಂಬಾಳಿಸುತ್ತ.

ಇವೆಲ್ಲದರ ಜೊತೆ ಬಾಬಾರವರ ಅಸ್ವಾಸ್ಥ್ಯ. ಸುತ್ತೆಲ್ಲ ಕಾಡುಪ್ರದೇಶ. ಅವರಿಗೆ ಸೀರಿಯಸ್ ಆದರೆ ಎತ್ತಿನ ಗಾಡಿಯಲ್ಲಿ ಹಾಕಿ ಉಪಚಾರಕ್ಕೆ ಕಳಿಸುತ್ತಿದ್ದೆವು. ಇದು ಗೊತ್ತಾಗಿ ಹಳ್ಳೀಜನ ಗಾಬರಿಗೊಂಡು ಅವರನ್ನು ನೋಡೋಕೆ ಮನೆಗೆ ಬರೋರು. ಬಾಬಾ ಮತ್ತೆ ಹುಷಾರಾಗಿ

ಬರತಾ ಇದ್ದರು. ಅವರಿಗೆ ಮೇಲಿಂದ ಮೇಲೆ ಬಡಿಯುವ ಖಾಯಿಲೆ, ಪ್ರತಿಸಲವೂ ಸಾವಿನ ಜೊತೆ ಹೋರಾಟ—ಇದೆಲ್ಲ ಬರೆದರೆ ಒಂದು ಗ್ರಂಥವೇ ಆದೀತು. ಎಂಥೆಂಥ ಅಸಾಧ್ಯ ರೋಗಗಳು ಆಗ ಎದುರಿಸಿದರು, ಕೊರಾಮೀನ್‌ನಂಥ ಕಟ್ಟ ಕಡೆಯ ಇಂಜೆಕ್ಷನ್ ಕೊಟ್ಟಮೇಲೆಯೂ, ೩ಗ ಆಪರೇಶನ್‌ಗಳಾಗಿ, ಮೂರು ಸಲ ಪೇಸ್ ಮೇಕರ್ ಹಾಕಿಕೊಂಡು ಬದುಕಿದರು.

ಪ್ರಶ್ನೆ: ಬಾಬಾ ಅವರು ಅನೇಕ ಕ್ಷೇತ್ರಗಳಲ್ಲಿ ದುಡಿದರು. ಕ್ಷೇತ್ರ ಬದಲಾಯಿಸುವ ಸಮಯದಲ್ಲಿ ನಿಮ್ಮ ಸಮ್ಮತಿ ಪಡೆದಿದ್ದಾರಾ?

ಉತ್ತರ: ಇಲ್ಲ. ನಾನು ಅವರ ವಿಧೇಯ ಸಂಗಾತಿಯಾಗಿ ನಡೆದೆ. ಆದರಿಂದಲೇ ನನಗೆ ಅವರನ್ನು ಇಷ್ಟೆಲ್ಲ ಶರೀರ ಸಂಕಟಗಳಿಂದ ಉಳಿಸುವ ನೈತಿಕ ಧೈರ್ಯ ಬಂದಿತು.

ಆವಾಗ ಮನೆಯಲ್ಲಿ ೧೬ ಆಕಳುಗಳು ಇದ್ದುವು. ಅವನ್ನು ನೋಡಿಕೊಳ್ಳೋಕ್ಕೆ ತಿಂಗಳಿಗೆ ೨೦ ರೂಪಾಯಿ ಪಗಾರ ಕೊಡುವ ತಾಕತ್ತು ನಮಗಿರಲಿಲ್ಲ. ನಾನೇ ಕಲಿತುಕೊಂಡೆ. ಹಾಲು ಕರೀವಾಗ ಅನೇಕ ಸಲ ಒದೆ ತಿಂದೆ. ಮಾಡತಾ ಮಾಡತಾ ಅದರಲ್ಲಿ ಒಳ್ಳೆ ತರಬೇತಿ ಪಡೆದೆ. ಕೈಗಳು ಬಾತು ಹೋಗುತ್ತಿದ್ದುವು. ಬಾಬಾ ಅವರು ಹಾಲಿನ ಪಾತ್ರೆ ತಿಕ್ಕುವರು, ನನ್ನ ಕೈಗಳಿಗೆ ಬಿಸಿನೀರ ಶಾಖ ಕೊಡುವರು. ಸೇವಾಗ್ರಾಮದಲ್ಲಿ ನನ್ನನ್ನು ಆನಂದ ವನದ ಗೌಳಿಣಿ ಅಂತ ಕರೆಯೋರು.

"ಭಾರತ ಜೋಡೋ" ಚಳವಳಿಯಲ್ಲಿ ಬಾಬಾ ಪಂಜಾಬಿಗೆ ಹೋದಾಗ ನನಗೆ ಭಯಾ ಆಗತಾ ಇತ್ತು. ಆದರೆ ಅವರಿಗೆ ತೋರಿಸಿಕೊಡಲಿಲ್ಲ. ಅವರು ಒಬ್ಬರೇ ಹೋದರು ಆತಿರೇಕಿಗಳ ಮಧ್ಯೆ. ಅವರ ನಿರ್ಭಯತೆಯು ಖಾಯಂ ಆಗಿದೆ.

ಇಲ್ಲಿ ಕೂತುಕೊಂಡು ನನಗೆ ಅನಿಸುತಾ ಇತ್ತು : ಏನು ಹೆಚ್ಚು ಕಡಿಮೆ ಆದರೂ ನನ್ನ ದೂರ ನಿಯಂತ್ರಣ ಇದೆ ಎಂಬ ವಿಶ್ವಾಸವಿತ್ತು.

ಪ್ರಶ್ನೆ : ಬಾಬಾ ಈಗ ನರ್ಮದೆಯನ್ನು ಉಳಿಸುವ ಕೆಲಸ ಹಿಡಿದಿದ್ದಾರೆ. ನರ್ಮದೆಯಲ್ಲಿ ಸಮರ್ಪಣೆ ಮಾಡುವ ಸಿದ್ಧತೆಯಲ್ಲಿದ್ದಾರೆ. ಅವರಿಗೆ ನೀವೇನು ಹೇಳಿದಿರಿ?

ಉತ್ತರ: ಬಾಬಾರ ವ್ಯಕ್ತಿತ್ವ ಮತ್ತು ಬುದ್ಧಿ ನಾಲ್ಕೂ ದಿಶೆಗಳಲ್ಲಿವೆ. ಅವರನ್ನು ನಾನು ಯಾಕೆ ಹಿಂದೆ ಎಳೀಲಿ? ನಾನು ಅದರಲ್ಲಿ ದುಡುಕಿಬಿಟ್ಟೆ. ನರ್ಮದೆಯಲ್ಲಿ ನಾನು ಆರು ವರ್ಷ ಸ್ನಾನ ಮಾಡಿದ್ದೇನೆ, ಪೂಜೆ ಮಾಡಿದ್ದೇನೆ. ಮಳೆ ಚಳಿ ಬಿಸಿಲಲ್ಲಿ ಸಹ ಬಿಡಲಿಲ್ಲ. ಎರಡು ಸಲ ನರ್ಮದೆಯಲ್ಲಿ ಮುಳುಗಿ ಸಾಯ್ತಿದ್ದೆ. ಹೇಗೆ ಉಳಿದೆನೋ ತಿಳೀದು. ನನಗೆ ನರ್ಮದಾ ರಿಟರ್ನ್ಡ್ ಪದವಿ ಇದೆ!

ಅವರ ಮತ್ತು ನನ್ನ ನಡುವೆ ಮತಭೇದಗಳೇನೂ ಇಲ್ಲ. ಆದರೆ ಯಾವ ವಿಷಯವೂ ನನಗೆ ಅವರಿಗಿಂತ ಹೆಚ್ಚು ಗೊತ್ತಿರುತ್ತೆ. ಆದರ ಬಗ್ಗೆ ಅವರೇನಾದರೂ ಹೇಳಿದರೆ ನನಗೆ ಅತಿಶಯ ಕೋಪ ಬರುತ್ತೆ. "ಸೂರ್ಯ ಇರುವಾಗ ನೀವು ನನಗೆ ಟಾರ್ಚ್ ಯಾಕೆ ತೋರಿಸುತ್ತೀರಾ? ಅದರಲ್ಲಿ ನನ್ನ ಅವಮಾನ ಅಡಗಿಲ್ಲವೇ? ಈಗ ಮಾತ್ರ ನಾನು ಮೊದಲಿಗಿಂತಲೂ ಹೆಚ್ಚು ಮಾತಾಡೋದು ಕಲಿತಿದ್ದೇನೆ. ನಿಮಗಿಂತಲೂ ನನಗೆ ವ್ಯವಹಾರ ಜ್ಞಾನ ಹೆಚ್ಚು: ನಿಮಗೆ ಅತಿ

ದೂರದ್ದು ಕಾಣತಾ ಇರುತ್ತೆ, ಹತ್ತಿರದ್ದು ಏನೂ ಇಲ್ಲ" ಹೀಗೆಲ್ಲ ನಾನು ಅವರನ್ನು ಛೇಡಿಸುತಾ ಇರತೇನೆ.

ಬಾಬಾ ಅವರದು ಕವಿ ಮನ. ಸಾದಾ ಮಾತಾಡುವಾಗಲೂ ಅವರ ಬಾಯಿಯಿಂದ ಕಾವ್ಯಮಯ ಸೂತ್ರಬದ್ಧ ಭಾಷೆ ಉದುರುತ್ತಿರುತ್ತದೆ ಅವರು ಹೇಳೋದು : "ಆನಂದವನ್ ಇಸ್ ಎ ಪೋಯೆಟ್ರಿ ಇನ್ ಆ್ಯಕ್ಷನ್."

ಆದರೆ ಇಂಥ ಕವಿಹೃದಯದ ವ್ಯಕ್ತಿ ಜೊತೆ ನನ್ನ ಮಧುಚಂದ್ರ ಮಾತ್ರ ಬೆಳದಿಂಗಳ ರಾತ್ರಿಯ ಸವಿಯೂಟವಲ್ಲ. ಅದು ಭಯಾನಕ ಬಿರುಗಾಳಿಯಲ್ಲಿ ಆಯಿತು ಒಂದು ನೆನಪು ಹೇಳತೇನೆ. ಇಂಥಾ ಒಂದು ಬಿರುಗಾಳಿ ವೇಳೆ ಬಾಬಾ ನಾಗಪುರಕ್ಕೆ ಹೋಗಿದ್ದರು. ನಾನು ಹಾಲು ಕರೀತಾ ಇದ್ದೆ. ಮಧ್ಯಾಹ್ನದ ಹೊತ್ತು. ಟೆಂಪೊರರಿ ಶೆಡ್ ಕೆಳಗೆ.ಬಿರುಗಾಳಿಯಲ್ಲಿ ಶೆಡ್ ಮೇಲಿನ ಪತ್ರಾವಳಿಗಳು ಮೈಲುದೂರ ಹಾರಿ ಹೋದುವು.ಎಲ್ಲಾ ಹಾಹಾಕಾರ. ಪ್ರಕಾಶ, ವಿಕಾಸ ಮನೆಯೊಳಗೆ ಬಾಗಿಲು ಹಾಕಿ ಆಡುತ್ತಿದ್ದರು. ಬಿರುಗಾಳಿ ಶಾಂತವಾದ ಮೇಲೆ ಒಳಗೆ ಹೋಗಿ ನೋಡಿದೆ: ಮಕ್ಕಳು ಜೀವಂತವಿದ್ದರು. ಇಬ್ಬರೂ ಪಲ್ಲಂಗದ ಕೆಳಗೆ ಅವಿತು ಕುಳಿತಿದ್ದರು. ಅದರ ಮೇಲೆ ಚಪ್ಪರದ ಮಣ್ಣು ಏನೇನೋ ಕುಸಿದಿತ್ತು.ಇಂಥ ಬಿರುಗಾಳಿ ಮಳೆಯಲ್ಲೂ ಬಾಬಾರವರು ತಿರುಗಾಡಲಿಕ್ಕೆ ಹೋಗೋಣವೆಂದು ಕರೆಯುವರು.

ನನಗೆ ಬಾಬಾರವರ ಮಿತ್ರರಿಂದ ಬಿರುದಾವಳಿ : ಆನಂದ ವನದ ಅನ್ನಪೂರ್ಣೆ ಯಶೋದಾ, ಅಡುಗೆಗಾರ್ತಿ ಇನ್ನೂ ಏನೇನೋ. ನಾನು ಅವರ ಮನೆಗೆ ಹೋದರೆ ಅಲ್ಲಿ ಕೆಲಸದಾಕೆ ಬರುವುದು ಬಂದ್ ಆಗುತ್ತಿತ್ತು—ವರೋರಾದ ಕೆಲಸದಾಕೆ ಬಂದಿದ್ದಾಳೆ ಎಂದು.

ಒಂದು ರಾತ್ರಿ ನಾವೆಲ್ಲರೂ ದಣಿದು ಮಲಗಿದ್ದೆವು. ಇದ್ದಕ್ಕಿದ್ದಂತೆ ಇರುಳ ೧೧ ಗಂಟೆಗೆ ಪ್ರತ್ಯಕ್ಷರಾದರು ಐದಾರು ಮಂದಿ: ಅಣ್ಣಾಸಾಹೇಬ್, ರಾಮ ಬೆಲವಾಡಿ ಇಸ್ರೇಲ್ ರಾಜ್ಯದ ರಾಯಭಾರಿಯವರ ಹೆಂಡತಿ ಮೊದಲಾದವರು. ಎದ್ದು ಎಲ್ಲರಿಗೂ ಅಡುಗೆ ಮಾಡಿ ಬಡಿಸಿದೆ— ಕತ್ತಲಲ್ಲೇ ಲೈಟ್ ಸಹ ಇರಲಿಲ್ಲ; ತಂದೀಲು ಬೆಳಕೇ ಗತಿ. ಕಾದಿದ್ದ ಹಂಚನ್ನು ಅರಿಯದೇ ಮುಟ್ಟೆ ಕೈ ಪೂರ್ಣ ಬೆಂದು ಹೋಯಿತು. ಬೆಳಗ್ಗೆ ಎದ್ದು ಇಷ್ಟೆಲ್ಲ ಆಕಳು ಕರೆಯೋದು ಹೇಗೆ ? ನಿಯತದಂತೆ ಬೆಳಗ್ಗೆ ೨ಕ್ಕೆ ಎದ್ದೆ. ಅಣ್ಣಾ ಸಾಹೇಬರೇ ನನ್ನನ್ನು ಆಕಳಿಗೆ ಕಾಣುವ ಹಾಗೆ ತೋರಿಸಿ ತಾವು ಹಿಂದೆ ಮರೆಯಿಂದ ಹಾಲು ಕರೆದರು.

ನಮಗೆ ಭವಿಷ್ಯದ ಬಗ್ಗೆ ವಿಚಾರವೇ ಬರಲಿಲ್ಲ. ಇದ್ದದ್ದೆಲ್ಲಾ ಬಿಟ್ಟುಕೊಟ್ಟೆವು. ನಮ್ಮ ಮಕ್ಕಳ ಮೇಲೆ ನಮ್ಮ ಆಯುಷ್ಯ ಗುರಿಗಳನ್ನು ಹೇರಿಲ್ಲ. ನಮ್ಮಲ್ಲಿ ಕರುಣೆ ದಯತುಂಬಿದ್ದುವು. ಆದ್ದರಿಂದ ಮಕ್ಕಳು ಹರಿದ ಹಳೇ ಬಟ್ಟೆಗಳಲ್ಲಿಯೇ ಬೆಳೆದರು. ಅವರಿಗೆ ಬಿಸ್ಕತ್ತು ತಿಂಡಿಕೊಡಿಸುವ ಶಕ್ತಿ ಸಹ ನಮಗಿರಲಿಲ್ಲ.ಚಳಿಯಲ್ಲಿ ಸ್ವೆಟ್ಟರೂ ಇರಲಿಲ್ಲ. ನನ್ನ ಬ್ಲಾವುಜ ಹಾಕಿ ಮಲಗುವರು. ಅಷ್ಟೇ ಅಲ್ಲದೆ ಅವರ ಜೊತೆಯಲ್ಲಿ ಆಡಲು ನಾರಾಯಣನೆಂಬ ಹುಡುಗನನ್ನು ಅಡ್ಜೆಸ್ಟ್ ಮಾಡಿದ್ದೆವು. ನಾನು ನಾಗಪುರಕ್ಕೆ ಹೋದಾಗ ಮಕ್ಕಳು ಮೊದಲಬಾರಿ

ಅಂಗಡಿಗಳನ್ನು ನೋಡಿ ಆಸೆಪಟ್ಟರು ನನಗೆ ನಾಚಿಕೆಯಾಯಿತು.

ಈಗಲೂ ಸಹ ನನ್ನ ಮಕ್ಕಳಿಗೆ ಹಣದ ಲೋಭವಿಲ್ಲ ಎಂದು ಅಭಿಮಾನವಿದೆ. ಅದೇ ನನ್ನ ಸೊಸೆಯಂದಿರು ಎಲ್ಲರೂ ಡಾಕ್ಟರ್ ಆಗಿದ್ದಾರೆ. ಬೇಕಿದ್ದರೆ ಲಕ್ಷ್ಮಿ ಅವರ ಮನೆಯ ನೀರು ತುಂಬುವ ಹಾಗಿತ್ತು. ಆದರೆ ಇವರೆಲ್ಲಾ ತಮ್ಮ ತಾರುಣ್ಯದಲ್ಲೇಅಷ್ಟೆಲ್ಲಾ ತ್ಯಾಗ ಮಾಡಿದ್ದಾರೆ. ಅವರ ಮುಂದೆ ನಾನು ಏನೂ ಅಲ್ಲ. ಕಲಿಯುಗದಲ್ಲಿ ನಿಜವಾದ ಈ ಪತಿವ್ರತೆಯರು ಬಡವರ ಸೇವೆಯಲ್ಲಿ ತಮ್ಮ ಪತಿಗಳ ಸಹಿತ ನಿರತ ರಾಗಿದ್ದಾರೆ.

ನಾವೆಲ್ಲಾ ಇದುವರೆಗೆ ಮಾಡಿದ ಸೇವೆ ಸರಕಾರಿ ಬೆಂಬಲದಿಂದ ಅಲ್ಲ. ನಮ್ಮ ಹೊಣೆಯ ಮೇಲೇನೇ. ಮನೆಯಲ್ಲಿ ಎರಡು ಎಡಾಪ್ಟ್ ಮಾಡಿದ (ದತ್ತು) ಮಕ್ಕಳಿರು ವಾಗಲೇ ಮೂರನೆಯ ಹೆಣ್ಣು ಮಗುವನ್ನು ಯಾರೋ ತಂದುಬಿಟ್ಟರು. ಹಿಂದೆ ಕಳಿಸೋಕೆ ಆಗಲಿಲ್ಲ. ನನ್ನ ಮಕ್ಕಳ ತೆರದಲ್ಲೇ ಅವಳನ್ನೂ ಬೆಳೆಸಿದೆ. ಒಂದು ಸಲ ಆನಂದ ವನ ಮನೆಯಲ್ಲಿ ಹುಲಿ ಬಂದು ಬಿಟ್ಟಿತು. ಪಲ್ಲಂಗದ ಕೆಳಗಿನಿಂದ ನಮ್ಮ ನಾಯನ್ನು ಕಿತ್ತುಕೊಂಡು ಹೋಯಿತು. ಬೇಸಗೆಯ ದಿವಸಗಳವು. ಮಕ್ಕಳ ಸಹಿತ ನಾವೆಲ್ಲಾ ಅಂಗಳದಲ್ಲಿ ಮಲಗಿದ್ದೆವು. ಬಾಬಾ ಆ ಕಗ್ಗತ್ತಲೆಯಲ್ಲೇ ಹುಲಿಯ ಬೆನ್ನಟ್ಟಿದರು. ನಾನೂ ಓಡಿದೆ. ಬಾಬಾ ಅವರು ಏನೋ ಸದ್ದು ಗದ್ದಲ ಮಾಡಿ ನಾಯಿಯನ್ನ ಹುಲಿಯ ಬಾಯಿ ಯಿಂದ ಬಿಡಿಸಿದರು.ಗಾಯಗಳಿಂದ ನೆತ್ತರು ಸುರಿಯುತ್ತಿದ್ದ ನಾಯಿಯನ್ನು ಮನೆಗೆ ತಂದು ಉಪಚರಿಸಿದರು. ಅವರ ಸಹವಾಸ ದಲ್ಲಿ ನನಗೆ ಯಾವ ಭಯವೂ ಇಲ್ಲ.

ನನಗೆ ಚಿಕ್ಕಂದಿನಿಂದಲೇ ಮಕ್ಕಳ ಮೇಲೆ ಬಹಳ ಪ್ರೀತಿ. ನಮ್ಮ ಆನಂದವನದ ಗೋಕುಲದಲ್ಲಿ ಮಹಾ ರೋಗದ ಅನೇಕ ಮಕ್ಕಳಿದ್ದರು. ಬಿ.ಕಾಮ್ ಓದುತ್ತಿದ್ದ ಒಬ್ಬ ಹುಡುಗ ಹೋದ ವರ್ಷ ಏಕಾಏಕಿ ತೀರಿಕೊಂಡ. ಅವನ ತಂದೆ ತಾಯಿ ಅವನು ಸಾಯುವ ಹೊತ್ತಿನಲ್ಲಿ ಅಲ್ಲಿದ್ದರು. ಅವನ ಕಡೇ ಇಚ್ಛೆ ಹೇಳಿದ: "ಅಜ್ಜಿ ಹತ್ತಿರ ನನ್ನನ್ನು ತೆಗೆದುಕೊಂಡು ಹೋಗಿ." ಹಾಗೇ ಉಸಿರೂ ಬಿಟ್ಟ.

ಅರುವತ್ತೇಳು ವರ್ಷಗಳಿಂದ ಸೋಮನಾಥದಲ್ಲಿ ನಮ್ಮ ಶ್ರಮ ಸಂಸ್ಕಾರ ನಡೀತಾ ಇದೆ. ಈ ಟೆಲಿವಿಶನ್ ಕಾಲದಲ್ಲಿ ಜನರ ವಿಶನ್ ಹೋಗಿಬಿಟ್ಟಿದೆ. ಶ್ರಮ ಮಾಡೋದೇ ನಿಂತು ಹೋಗಿದೆ. ನಾನು ಕಳೆದ ೫೭ ವರ್ಷಗಳಲ್ಲಿ ಥಿಯೇಟಂಗೆ ಹೋಗಿ ಸಿನೆಮಾ ನೋಡಿಲ್ಲ. ನಾಟಕ ಸಹ ಇಲ್ಲ ಅಂತಲೇ ನನಗೆ ನಾಟಕ ಮಾಡೋಕೆ ಬರೋದಿಲ್ಲ. ನನ್ನ ಮನೆತನ ಸಂಗೀತ ಸಂಸ್ಕಾರದಿಂದ ತುಂಬಿದ್ದು. ನನಗೆ ಮಾತ್ರ ದರಿದ್ರರ ಮತ್ತು ಮಹಾರೋಗಿಗಳ ಸೇವೆ ಬಿಟ್ಟು ಬೇರೆ ಏನೂ ಇಲ್ಲ ಬಾಬಾ ಅವರು ಮೊದಲು ಸಂಗೀತ ಚಿತ್ರಪಟಗಳ ಮೇಲೆ ಸಾಕಷ್ಟು ಬರೆದಿದ್ದಾರೆ.

"ಭಾರತ ಜೋಡೋ" ಚಳವಳಿಯಲ್ಲಿ ಬಾಬಾ ಅವರು ಅಮೃತಸರಕ್ಕೆ ಹೋಗಿ ದ್ದರು. ಹೋಗಬೇಡಿ, ನೀವೇನೂ ಜೀವಂತ ಮರಳೋದಿಲ್ಲ, ಅಲ್ಲಿ ಅಂಥ ಅತಿರೇಕಿಗಳು ಇದ್ದಾರೆ ಸಾಕಷ್ಟು ಮಂದಿ ಎಂದು ಹೇಳತಾ ಇದ್ದೆ. ಆದರೂ ಇವರು ಕೇಳಲಿಲ್ಲ- ಅತಿರೇಕಿ

ಗಳು ಅಡಗಿದ್ದ ಮನೆ ಹಿಂದಿನ ಬಾಗಿಲನ್ನು ತಟ್ಟಿದರು ಒಬ್ಬರೇ ಹೋಗಿ. ಒಬ್ಬ ಅತಿರೇಕಿ ಹೊರಬಂದು ಬಾಬಾರನ್ನು ಒಳಗೆ ಕರೆದುಕೊಂಡು ಹೋದ ಬಾಬಾ ಹೇಳಿದರು: "ನಮ್ಮ ಗಾಡಿಯಲ್ಲಿ ಇಷ್ಟೆಲ್ಲಾ ಜನರಿದ್ದಾರೆ." ಅತಿರೇಕಿಗಳು ನಮಗೆಲ್ಲಾ ಹಾಲು ತಂದುಕೊಟ್ಟರು. ಮಾತುಕತೆ ಮುಗಿಸಿ ಬಾಬಾ ಸುರಕ್ಷಿತವಾಗಿ ಹಿಂತಿರುಗಿ ಬಂದರು. ಸೂಪರ್‌ಕಾಪ್ ರಿಬೈರೋ ಅವರು ಬೆರಗಿನಿಂದ ಮೂಕರಾಗಿ ಬಾಬಾರ ಕಾಲು ಮುಟ್ಟಿದರು. ಬಾಬಾರಿಗೆ ಜೀವಿತದ ಭಯವೇ ಇರಲಿಲ್ಲ. ನನಗೆ ಗೃಹಿಣೀ, ಸಖೀ, ಸಚಿವೆ ಪುರಸ್ಕಾರ ಕೊಟ್ಟರು ನಾನು ಹೇಳಿದೆ: ಪ್ರತಿಯೊಬ್ಬ ಸ್ತ್ರೀಯೂ ಗೃಹಿಣಿ ಆಗಿರುತ್ತಾಳೆ, ನಾನು ಮಾತ್ರ ಈ ವಿಶಾಲ ಕುಟುಂಬದ ಗೃಹಿಣಿ, ಮತ್ತು ೧೯೪೯ರಿಂದ ಮಹಾರೋಗಿ ಸೇವಾಸಮಿತಿಯ ಸಚಿವೆ.

ಈ ನಮ್ಮ ಕಾರ್ಯದಲ್ಲಿ ಅನೇಕ ಅಡಚಣೆಗಳು ಎದುರಾದುವು–ಸರಕಾರದಿಂದ, ವೃತ್ತಪತ್ರಿಕೆಗಳಿಂದ. ಒಂದು ಸಲ "ಮಹಾರಾಷ್ಟ್ರ ಟೈಮ್ಸ್" ಬರೆಯಿತು: "ಇದೆಲ್ಲಾ ಬಾಬಾ ಅವರ ಬುವಾಬಾಜಿ" ಅಂತ. ನಾವು ಪ್ರಸಿದ್ಧಿಗಾಗಿ ಯಾರ ಹತ್ತಿರವೂ ಹೋಗೋದಿಲ್ಲ. ನಮ್ಮ ನಂಬಿಕೆ, ನಮ್ಮ ಕೆಲಸ ನಮಗೆ ಸಾಕು. ಹೃದಯ ಸರಿಯಾಗಿರುವ ಜಾಗಕ್ಕೆ ಜನ ತಾವಾಗಿಯೇ ಬರತಾರೆ.

ಪ್ರಶ್ನೆ: ನಿಮ್ಮ ಜಾಗದಲ್ಲಿ ಬೇರೆ ಯಾರಾದರೂ ಬಾಬಾ ಅವರ ಸಂಗಾತಿ ಆಗಿದ್ದಿದ್ದರೆ?

ಉತ್ತರ: ಅವಳು ಸ್ತ್ರೀ ಮುಕ್ತಿಯವಳಾಗಿದ್ದರೆ ಎರಡೇ ದಿನದ ಮೇಲೆ ಘಟಸ್ಫೋಟ ಆಗತಾ ಇತ್ತು. ನಮ್ಮ ಇಬ್ಬರು ಮಕ್ಕಳೂ ಸೊಸೆಯಂದಿರೂ ಈ ಕೆಲಸದಲ್ಲಿ ತಾವಾಗಿಯೇ ಸ್ವಯಂಸ್ಫೂರ್ತಿಯಿಂದ ದುಮುಕಿದರು. ಈಗ ಡಾ. ಪ್ರಕಾಶನ ಮಕ್ಕಳು ಇನ್ನೂ ಒಳ ಕಾಡಿನಲ್ಲಿ ಹೋಗಿ ಕಾರ್ಯ ಮುಂದುವರಿಸಲು ಸಿದ್ಧರಾಗಿದ್ದಾರೆ. ಇದು ಹೇಗೆ ಆಯಿತು? ಇದೆಲ್ಲಾ ಸಂಸ್ಕಾರಗಳ ಫಲ. ಹಮಾಲ ಶ್ರಮಿಕರ ಮಕ್ಕಳು ಓದಿದ ಶಾಲೆಯಲ್ಲೇ ನಮ್ಮ ಮಕ್ಕಳ ಶಿಕ್ಷಣವೂ ಆಯಿತು. ನಮ್ಮ ಮನೆಯಲ್ಲಿಯೇ ಶ್ರಮಕ್ಕೆ ಪ್ರತಿಷ್ಠೆ ಇತ್ತು. ಯಾವ ಕೆಲಸಕ್ಕೂ ನಾಚಿಕೆ ಆಗತಾ ಇರಲಿಲ್ಲ. "ಶ್ರಮವೇ ಶ್ರೀರಾಮ" ಅನ್ನುವರು ಬಾಬಾ. ಮಕ್ಕಳೂ ಅದೇ ತರ.

ಈಗ ನರ್ಮದಾ ಆಂದೋಲನದಿಂದ ಬಾಬಾ ಅವರಲ್ಲಿ ಒಂದು ತರದ ಬದಲಾವಣೆ ಆಗಿದೆ. ನಾನು ದಿನಾಲು ನರ್ಮದೆಯ ಪೂಜೆ ಮಾಡತೇನೆ. ನಾನು ಇಲ್ಲದೇ ಇರುವಾಗ ಬಾಬಾ ಅವರೇ ಸ್ವಂತ ಪೂಜೆ ಮಾಡೋದು ಶುರುಮಾಡಿದ್ದಾರೆ. ಮೊದಲು ಅವರು ಪೂಜೆಯ ವಿರೋಧಿ ಆಗಿದ್ದರು.

ಬಾಬಾ ಹೇಳೋರು ನಿನ್ನ ಹೆಸರು 'ಸಾಧನಾ' ಬದಲು 'ವೇದನಾ' ಇರಬೇಕಾಗಿತ್ತು." ವೇದನಾ ಸಹ ಸಾಧನಾ ಅಲ್ಲವೇ!

ತಮ್ಮ ಎಲ್ಲ ಮಾತುಗಳನ್ನು ಬಾಬಾರವರು ನನ್ನ ಹೆಸರಿನಿಂದ–ಸಾಧನಾ ಆಮಟೆ–ಶುರುಮಾಡುವ ಪರಿಪಾಠ, ರಾಷ್ಟ್ರಪತಿಗಳಿಂದ ಪ್ರಶಸ್ತಿ ಪಡೆಯುವಾಗ ಕೂಡ, ಅವರು ಮಾಡತಾ ಇರುವ ಕೆಲಸದಲ್ಲಿ ನಾನು ವಿಘ್ನ ತರಬಾರದೆಂಬುದೇ ಅವರ ಇಂಗಿತವಿರಬೇಕು.

ಬದುಕಿನಲ್ಲಿ ಶ್ರದ್ಧೆಯ ಪಾತ್ರ

ಜಯಲಕ್ಷ್ಮಿ ಬಿ.
೨೫೭೭, ಕೆಎಚ್‌ಬಿ ಕಾಲನಿ, ಕೋರಮಂಗಲ
೫ನೆಯ ಬ್ಲಾಕ್, ಬೆಂಗಳೂರು-೫೬೦೦೯೫

ನನ್ನ ಮಗ ಚಿಕ್ಕವನಾಗಿದ್ದಾಗ ನನ್ನ ತೊಡೆಯ ಮೇಲೆ ಕುಳಿತು ಟಿ. ವಿ. ನೋಡಲು ಇಷ್ಟಪಡುತ್ತಿದ್ದ. ಟಿ. ವಿ. ಯ ಕಾರ್ಯಕ್ರಮಗಳಲ್ಲಿ ಆತ ಕಾರು ಅಪಘಾತಗಳು. ಬೆಂಕಿ, ಗಗನಯಾತ್ರಿಗಳು—ಹೀಗೆ ವಾಸ್ತವಿಕ ಸಂಗತಿಗಳನ್ನು ಮತ್ತು ಕಾಲ್ಪನಿಕ ಚಿತ್ರಣಗಳನ್ನು ಪ್ರತ್ಯೇಕಿಸಿ ಗುರುತಿಸುತ್ತಿದ್ದ.

ಆ ಕಾರ್ಯಕ್ರಮಗಳಲ್ಲಿ ಪ್ರಾಣಿಗಳ ವಿಷಯವನ್ನು ತೋರಿಸುವಾಗ ಡೈನೊಸಾರ್‌ಗಳ ಚಿತ್ರಣ ಬಂದರೆ ಲ್ಯೂಕ್‌ನಲ್ಲಿ ಸಮಸ್ಯೆ ಉದ್ಭವಿಸುತ್ತಿತ್ತು. ಅವುಗಳ ವಿಚಾರವನ್ನು ಅರ್ಥಮಾಡಿಕೊಳ್ಳುವುದು. ಆತನಿಗೆ ಕಷ್ಟವಾಗುತ್ತಿತ್ತು. ಡೈನೊಸಾರುಗಳು ಹಿಂದೆ ಈ ನೆಲದಲ್ಲಿ ಜೀವಿಸಿದ್ದುವು. ಈಗ ಅವು ಅಳಿದುಹೋಗಿವೆ ಎಂದು ನಾನು ಕೊಡುತ್ತಿದ್ದ ವಿವರಣೆಯು ಆತನ ಸಮಸ್ಯೆಯನ್ನು ಬಿಡಿಸುವ ಬದಲು ಇನ್ನಷ್ಟು ಕಗ್ಗಂಟಾಗಿಸಿ,ಅವನನ್ನು ವ್ಯಗ್ರಗೊಳಿಸುತ್ತಿತ್ತು. ಈಗ ಅವು ಇಲ್ಲ ಎಂದಾದರೆ ಹಿಂದೆಂದೂ ಇರಲಿಲ್ಲ, ಅಷ್ಟೆ.

ಒಂದು ದಿನ ಆತನ ಮುತ್ತಜ್ಜಿಯು ಆತನಿಗೆ ತಾನು ಬಿಡಿಸಿದ ಚಿಕ್ಕ ಚಿತ್ರವನ್ನು ಕಳಿಸಿದ್ದಳು. ಅದರೊಂದಿಗೆ ಇರಿಸಿದ್ದ ಪುಟ್ಟ ಚೀಟಿಯೊಂದರಲ್ಲಿ ಅವನು ಆ ಚಿತ್ರಕ್ಕೆ ಬಣ್ಣವನ್ನು ತುಂಬಿಸಲು ಸೂಚಿಸಿದ್ದಳು. ಆಕೆ ಅವನಿಗೆ ಈ ರೀತಿಯ ಸಣ್ಣ ಪುಟ್ಟ ಕಾರ್ಯಗಳನ್ನು ಆಗಾಗ ವಹಿಸುತ್ತಿದ್ದಳು. ಆಕೆಯಿಂದ ಪತ್ರ ಬರುವುದು ಇವನಿಗೂ ಬಹಳ ಅಚ್ಚುಮೆಚ್ಚಾಗಿತ್ತು. ಈ ಬಾರಿ ಆಕೆ ತನಗೊಪ್ಪಿಸಿದ ಕೆಲಸವನ್ನು ಮುಗಿಸಿ, ಅದನ್ನು ನನಗೆ ತೋರಿಸಲು ನಾನು ಕುಳಿತಿದ್ದ ಕುರ್ಚಿಗೇ ಹತ್ತಿದ. ಆ ಚಿತ್ರವನ್ನಾತ ಕೆಂಪು, ನೀಲಿ ಹಾಗೂ ಹಸಿರು ಬಣ್ಣಗಳಿಂದ ತುಂಬಿಸಿದ್ದ.

೧೯೯೮ರ ಮಾರ್ಚ್ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಡಬ್ಲ್ಯು. ಡಬ್ಲ್ಯು. ವಿಸಾರ್ಡ್‌ರ "ಸಮ್ ಥಿಂಗ್ಸ್ ಯು ಜಸ್ಟ್ ನೋ" ಲೇಖನದ ಅನುವಾದ

"ನಾನು ಈ ರೀತಿಯ ಬಣ್ಣಬಣ್ಣದ ಬೆಕ್ಕನ್ನೆಂದೂ ನೋಡಿರಲಿಲ್ಲ" ನಾನೆಂದೆ.

"ನೀನು ಖಂಡಿತಾ ನೋಡಿರಲಾರೆ ಡ್ಯಾಡ್, ಅದು ನನಗೆ ಹಾಗೂ ಮಾಮಾಳಿಗೆ (ಮುತ್ತಜ್ಜಿ) ಸೇರಿದ್ದು" ಎಂದು ಆತ ವಿವರಣೆ ನೀಡಿ. ನನ್ನ ತೊಡೆಯ ಮೇಲೆ ಆರಾಮವಾಗಿ ಪವಡಿಸಿದ. ನಾನು ಟಿ. ವಿ.ಯ ಗುಂಡಿಯನ್ನೊತ್ತಿದೆ. ಜಾನ್ ಎಫ್. ಕೆನಡಿಯು ಅಮೆರಿಕದ ಅಧ್ಯಕ್ಷರಾಗುವುದಕ್ಕೆ ಮೊದಲಿನ ಆತನ ಜೀವನದ ಕುರಿತು ಕಾರ್ಯಕ್ರಮ ಬರುತ್ತಿತ್ತು. ಪರದೆಯ ಮೇಲೆ ಕೆನಡಿಯು ಸಣ್ಣ ದೋಣಿಯನ್ನು ಚಾಲಿಸುತ್ತಿರುವ ಚಿತ್ರ ಮೂಡಿದಾಗ ಆ ವ್ಯಕ್ತಿ ಯಾರೆಂದು ಲ್ಯೂಕ್ ಪ್ರಶ್ನಿಸಿದ.

"ಅವರು ಜಾನ್ ಕೆನಡಿ, ಅಮೆರಿಕದ ಅಧ್ಯಕ್ಷರಾಗಿದ್ದರು."

"ಅವರು ಈಗೆಲ್ಲಿದ್ದಾರೆ?"

"ಅವರು ಈಗ ಇಲ್ಲ, ತೀರಿಕೊಂಡಿದ್ದಾರೆ."

"ಅವರು ತೀರಿಹೋಗಿಲ್ಲ. ದೋಣಿ ನಡೆಸುತ್ತಿದ್ದಾರೆ."

ಅನಂತರ ಚಿತ್ರ ಬದಲಾಗಿ ಕೆನಡಿ ಉದ್ಘಾಟನಾ ಭಾಷಣ ಮಾಡುತ್ತಿದ್ದ ಚಿತ್ರ ಬಂದಿತು.

"ನೋಡಲ್ಲಿ. ಆತ ಇನ್ನೂ ಇರುವುದು."

"ಲ್ಯೂಕ್, ಆದು ಬಹಳ ಹಿಂದಿನ ಚಿತ್ರ. ಅವರು ಈಗ ತೀರಿಹೋಗಿದ್ದಾರೆ." ನಾನು ತಮಾಷೆ ಮಾಡುತ್ತಿಲ್ಲವಷ್ಟೆ ಎಂಬ ಸಂಶಯದ ನೋಟವನ್ನು ಆತ ನನ್ನತ್ತ ಬೀರಿದ. ಅನಂತರ "ಆತ ಇಡಿಯಾಗಿ ತೀರಿರುವರೇ?" ಎಂಬ ಪ್ರಶ್ನೆಯನ್ನೆಸೆದ.

"ಹೌದು"

"ಅವರ ಪಾದಗಳು ತೀರಿಕೊಂಡಿವೆಯೆ?"

"ಹೌದು"

"ಅವರ ತಲೆಯೂ ಸತ್ತುಹೋಗಿದೆಯೇ?"

"ಹೌದು"

ಈ ಕೊನೆಯ ಪ್ರಶ್ನೆಯ ಅನಂತರ ಲ್ಯೂಕ್ ಮೌನವಾಗಿ ದೀರ್ಘಾಲೋಚನೆಯಲ್ಲಿ ಮುಳುಗಿದ. ಬಳಿಕ "ಸರಿ, ಅವರು ನಿಜವಾಗಿಯೂ ತುಂಬಾ ಚೆನ್ನಾಗಿ ಮಾತನಾಡುತ್ತಾರೆ" ಎಂಬ ಮೆಚ್ಚುಗೆಯ ನುಡಿ ಅವನಿಂದ ಬಂತು.

ಲ್ಯೂಕ್ ತನ್ನ ಈ ಸಮಸ್ಯೆಯನ್ನು ತುಂಬು ಗಾಂಭೀರ್ಯ ಹಾಗೂ ದೃಢತೆಯೊಂದಿಗೆ ವಿಶ್ಲೇಷಿಸುತ್ತಿದ್ದ ರೀತಿಯನ್ನು ನೋಡಿ, ಅದುಮಿಡಬೇಕೆಂದು ಪ್ರಯತ್ನಿಸಿದರೂ ಸಾಧ್ಯವಾಗದೇ ನಗು ನನ್ನಿಂದ ಸ್ಫೋಟಗೊಂಡಿತು.

ಜಾನ್ ಕೆನಡಿಯ ಕುರಿತಾದ ಈ ಪ್ರಸಂಗದ ಅನಂತರ ಸಾವು ಮತ್ತು ಸಾಯಲ್ಪಡುವುದರ ಸಮಸ್ಯೆಯು ಲ್ಯೂಕ್‌ನನ್ನು ಗಾಢವಾಗಿ ತಟ್ಟಿದಂತಿತ್ತು. ವಿಹಾರಕ್ಕಾಗಿ ಇಕ್ಕೆಲಗಳಲ್ಲೂ ಮರಗಳಿಂದ ಆವೃತವಾಗಿದ್ದ ಹಾದಿಯಲ್ಲಿನ ನಮ್ಮ ನದಿಗೆ ಆತನ ಮಟ್ಟಿಗೆ

ಸತ್ತ ಪ್ರಾಣಿ, ಪಕ್ಷಿಗಳಿಗಾಗಿ ನಡೆಸುವ ಅನ್ವೇಷಣೆಯಾಗಿತ್ತು. ಸತ್ತ ಪ್ರಾಣಿ ಕಣ್ಣಿಗೆ ಬಿದ್ದರೆ ಆತ ಅದರ ಬಳಿ ತುದಿಗಾಲೂರಿ ಕುಳಿತು, ತಾನು ಸಾಯುವಾಗ ಆ ಪ್ರಾಣಿಯು ಏನು ಮಾಡುತ್ತಿದ್ದಿರಬಹುದು ಎಂಬುದರ ಬಗ್ಗೆ ಕಲ್ಪನೆಗಳನ್ನು ಹೆಣೆಯುತ್ತಿದ್ದ. ಕೊನೆಗೊಮ್ಮೆ ಆ ಪ್ರಾಣಿಗಳಿಗೆ ನಾವು ಅಂತಿಮ ಸಂಸ್ಕಾರವನ್ನೂ ನೆರವೇರಿಸುತ್ತಿದ್ದೆವು.

ಸಾವಿನ ಪರಿಕಲ್ಪನೆಯು ಮೂರು ವರ್ಷದ ಎಳೆಯನನ್ನು ಆಳವಾದ ಚಿಂತನೆಗೆ ದೂಡಿವ ವಿಚಾರ ನನ್ನನ್ನು ಬಾಧಿಸುತ್ತಿತ್ತು.

ಒಂದು ದಿನ ಎಂದಿನಂತೆ ವಿಹಾರಕ್ಕೆಂದು ನಾವು ಹೋಗುತ್ತಿದ್ದಾಗ ನಮಗೆ ಮೊಲವೊಂದರ ಕಂದು, ಬಿಳಿ ಮಿಶ್ರಿತ ಬಣ್ಣದ ರೋಮಗುಚ್ಛ ಕಾಣಿಸಿತು. ಲ್ಯೂಕನು ಕಡ್ಡಿಯ ಸಹಾಯದಿಂದ ಅದನ್ನು ಮುಟ್ಟಿದ. "ಇದು ಪೀಟರ್ ಮೊಲದ ರೋಮ. ರಾತ್ರಿಯೂಟಕ್ಕೆ ಆತ ತನ್ನ ಮನೆಗೆ ಹೋಗುತ್ತಿದ್ದಾಗ ನರಿ ಆತನನ್ನು ತಿಂದು ಹಾಕಿತು, ಈಗಾತ ನರಿಯ ಹೊಟ್ಟೆಯೊಳಗಿದ್ದಾನೆ" ಎಂದು ತನ್ನ ತೀರ್ಮಾನವನ್ನು ಹೇಳಿದ.

"ಆದರೆ ಪೀಟರ್ ಮೊಲ ಕಥೆಗಳಲ್ಲಿ ಬರುವಂಥದ್ದು. ಇದಾದರೆ ನಿಜವಾದ ಮೊಲದ್ದು" ನಾನೆಂದೆ.

"ನನಗೆ ಗೊತ್ತು, ನಾನು ಸುಮ್ಮನೇ ನೋಡುತ್ತಿದ್ದೇನೆ" ಲ್ಯೂಕನೆಂದ.

ಕಥೆಯ ಮೂಲಕವಾದರೂ ಈ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಅವನು ಪ್ರಯತ್ನಿಸುತ್ತಾ ಇದ್ದಾನೆಂದು ನಾನು ಭಾವಿಸಿದೆ.

"ಬಹಳ ಜನರು ಮರಣ ಬರುವುದು ದೇಹಕ್ಕೆ ಮಾತ್ರ, ಆದರೆ ದೇಹದೊಳಗಿರುವ ಚೇತನವು ಸಾಯುವುದಿಲ್ಲ ಎಂದು ನಂಬಿದ್ದಾರೆ. ಈ ವಿಷಯದ ಬಗ್ಗೆ ಖಚಿತವಾಗಿ ಏನೂ ತಿಳಿಯದು. ನಿರಾಧಾರವಾದ ಒಂದು ಭ್ರಮೆಯನ್ನು 'ಸತ್ಯ' ಎಂದು ಅಚಲ ವಿಶ್ವಾಸವಿರಿಸಿ ಭಾವಿಸಿದರೆ ಅದು 'ನಂಬಿಕೆ' ಎನಿಸಿಕೊಳ್ಳುತ್ತದೆ" ನಾನು ವಿವರಿಸಿದೆ.

ನನ್ನ ವಿವರಣೆಯು ಆತನಲ್ಲಿ ಅಚ್ಚರಿಯನ್ನುಂಟುಮಾಡಿ, ಒಂದು ವಾರದ ತನಕ ಅವನು ಈ ಕುರಿತು ಯೋಚಿಸುವಂತೆ ಮಾಡಿತ್ತು. ಹೀಗೇ ಇನ್ನೊಂದು ದಿನದ ನಮ್ಮ ಸಂಚಾರದಲ್ಲಿ ಚಿಟ್ಟೆಯು ಕೋಶಾವಸ್ಥೆಯಲ್ಲಿ ನೇಯ್ದ ಬಲೆಯನ್ನು ತೋರಿಸಿದೆ. ಈ ಚಿಟ್ಟೆಯು ಹಿಂದೆ ಕಂಬಳಿ ಹುಳುವಾಗಿದ್ದು. ಆ ಕಂಬಳಿಹುಳುವು ಬಲೆಯನ್ನು ನೇಯ್ದು ಕೊನೆಗೆ ಚಿಟ್ಟೆಯಾಗುವ ರೂಪಾಂತರಣ ಪ್ರಕ್ರಿಯೆಯನ್ನು ಆತನಿಗೆ ತಿಳಿಸಿದೆ. ಈ ವಿಚಾರವನ್ನು ಆತ ಈ ಮೊದಲೇ ನೋಡಿ ತಿಳಿದಿದ್ದ ಕಾರಣ ಸುಲಭವಾಗಿಯೇ ಒಪ್ಪಿಕೊಂಡ. ಅನಂತರ ಹೇಳಿದ, "ನೀನು ನಿಜವಾದ ಚಿಟ್ಟೆಯನ್ನು ಅದು ಸ್ಥಳಕ್ಕೆ ಹಾರುವುದನ್ನು. ನೋಡ

ಬಹುದು, ಅದನ್ನು ಸ್ಪರ್ಶಿಸಬಹುದು. ಆದರೆ ಒಬ್ಬ ಸತ್ತರೆ ಜನರು ಆತನನ್ನು ಕೇವಲ ಟಿ. ವಿ.ಯಲ್ಲಿ ಮಾತ್ರ ನೋಡ ಬಹುದು ಅಲ್ವೆ?"

"ಅದು ನಿಜ, ಆದರೆ ನೀನು ಮಾನಸಿಕ ವಾಗಿ ಅವರನ್ನು ಕಾಣಬಹುದು" ಈ ಬಗ್ಗೆ ಆತ ದೀರ್ಘವಾಗಿ ಚಿಂತಿಸಿ, ಅದು ಹೇಗೆಂದು ನನ್ನನ್ನು ಪ್ರಶ್ನಿಸಿದ.

ನಾನು ಆತನಿಗೆ ಆತನ ಕಣ್ಣುಗಳನ್ನು ಮುಚ್ಚಿಕೊಂಡು, ನಮ್ಮೊಂದಿಗೆ ಇರದವ ರನ್ನು ನೆನೆಯುವಂತೆ ಹೇಳಿದೆ. ಉದಾಹರಣೆ ಗಾಗಿ ಆತನ ಅಪ್ತಗೆಳೆಯ ಚಾರ್ಲಿಯನ್ನು ಹೆಸರಿಸಿ, ಆತನನ್ನು ನೆನಪಿಸಿಕೊಳ್ಳಲು ಸಾಧ್ಯವೇ ಎಂದು ಕೇಳಿದೆ.

ನಾನು ಹೀಗೆ ಕೇಳಿದ್ದೇ ಆತ ಸಂತಸ ದಿಂದ ಕೇಳಿದ್ದೇ ಆತ ಸಂತಸದಿಂದ ಕೇಕೆ ಹಾಕುತ್ತಾ, "ಅವನನ್ನು ಜ್ಞಾಪಿಸಿಕೊಳ್ಳ ಲಾರೆ, ಆದರೆ ಆತನ ದನಿಯನ್ನು ಜ್ಞಾಪಿಸಿ ಕೊಳ್ಳಬಲ್ಲೆ" ಎಂದ.

"ಸರಿ, ಅದೇ ರೀತಿ ಈ ಕ್ಷಣದಲ್ಲಿ ನಿನ್ನ ಕಣ್ಣೆದುರಿಗಿರದ ವ್ಯಕ್ತಿಗಳಾದರೂ ಅವರು ನಿನ್ನಲ್ಲಿ ನೆನಪಾಗಿ ಇರುವ ಕಾರಣ ಅವರು ಇಲ್ಲೇ ಸುತ್ತ ಇರುವರೆಂದು ಅನಿಸುತ್ತದೆ."

"ನಾನು ಚಾರ್ಲಿಯೊಂದಿಗೆ ಆಟವಾಡ ಬಲ್ಲೆ. ಆದರೆ ಬನ್ನಿಯೊಂದಿಗೆ ಆಡಲಾರೆ. ಏಕೆಂದರೆ ಆತ ತೀರಿಹೋಗಿದ್ದಾನೆ."

"ಹೌದು, ಅದು ಸರಿ."

ಇನ್ನೂ ಕೆಲವು ದಿನಗಳ ತನಕ ಲ್ಯೂಕನು ಸಾವಿನ ಬಗ್ಗೆ ನಿರಂತರ ಯೋಚನೆ ನಡೆಸಿದ್ದ. ಅನಂತರ ಆತನ ಲಕ್ಷ್ಯವೆಲ್ಲ ಬರಲಿರುವ ತನ್ನ ಜನ್ಮದಿನದ ಆಚರಣೆಯತ್ತ ಹೊರಳಿತು. ಪುನಃ ತನ್ನ ಮನಸ್ಸನ್ನು ಬಹಳವಾಗಿ ತಟ್ಟಿದ್ದ ವಿಚಾರದ ಕುರಿತು ಆತ ಮಾತಾಡ ಲಿಲ್ಲ.

ಸುಮಾರು ಒಂದೂವರೆ ವರ್ಷದ ಬಳಿಕ ಮಾಮಾಳು ತೀರಿಕೊಂಡಳು. ತನ್ನನ್ನು ಅವಳ ಮನೆಗೆ ಹೋಗಗೊಡಬೇಕೆಂದು ಲ್ಯೂಕ್ ಒತ್ತಾಯಿಸಿದಾಗ ನನ್ನ ಪತ್ನಿ ಮತ್ತು ನಾನು ಒಪ್ಪಿಕೊಂಡೆವು.

ಮಾಮೂಳ ಮನೆಯು ಬಂಧುಗಳು, ಊಟೋಪಚಾರ ಹಾಗೂ ಮಾತು ಗಳಿಂದ ತುಂಬಿ ತುಳುಕುತ್ತಿತ್ತು. ಆಕೆ ದೀರ್ಘಾಯುಷಿಯಾಗಿ, ಶ್ರೀಮಂತವಾಗಿ ಬಾಳಿದ್ದಳು. ಆದುದರಿಂದ ಅಲ್ಲಿ ಅಕಾಲ ಮೃತ್ಯು ಅಥವಾ ಅನಿರೀಕ್ಷಿತ ಮರಣವನ್ನು ಎದುರಿಸಿದಂಥಾ ಮನೆಯಲ್ಲಿರುವ ಸಂತಪ್ತ ವಾತಾವರಣವಿರಲಿಲ್ಲ. ಅಲ್ಲಿ ನೆರೆದಿದ್ದವರು ಆಕೆಯ ಜೀವನಾಸಕ್ತಿ, ಅದ್ಭುತವಾದ ವೈಯಕ್ತಿಕ ಸಾಮರ್ಥ್ಯ, ಹಾಸ್ಯಪ್ರಜ್ಞೆ, ಕರುಣೆ ತುಂಬಿದ ಸ್ವಭಾವ ಇವುಗಳನ್ನು ನೆನಪಿಸಿಕೊಳ್ಳುತ್ತಿದ್ದರು.

ಲ್ಯೂಕನು ಆತನ ಮುತ್ತಜ್ಜಿಯು ಚಿರ ನಿದ್ರೆಯಲ್ಲಿರುವ ಕೋಣೆಗೆ ಹೋಗಬಯಸು ತ್ತಾನೆಯೇ ಎಂದು ನಾವು ಅವನನ್ನು

ಕೇಳಲಿಲ್ಲ. ಆತನನ್ನು ಆತನ ಇಚ್ಛಾನುಸಾರ ವರ್ತಿಸಲು ಬಿಟ್ಟಿದ್ದೆವು.

ಆತ ಮಾಮಾಳನ್ನು ನೋಡಬಯಸಿದ. ನಾನು ಆತನ ಕೈ ಹಿಡಿದು ಆತನ ಮುತ್ತಜ್ಜಿಯ ಶವವನ್ನಿರಿಸಿದ ಪೆಟ್ಟಿಗೆಯತ್ತ ಕರೆದೊಯ್ದು ತೋರಿಸಿದೆ. ಆತ ಅದನ್ನು ದೀರ್ಘವಾಗಿ ನೋಡಿ, "ಸರಿ ಡ್ಯಾಡ್" ಎಂದು ಸರಿದ.

ನಾವು ಕೋಣೆಯಿಂದ ಹೊರಬಂದು ಅಡುಗೆಮನೆಯತ್ತ ಹೆಜ್ಜೆ ಹಾಕತೊಡಗಿದೆವು. ಅಲ್ಲಿಗೆ ತಲಪುವ ಮುನ್ನ ಆವನು ನನ್ನನ್ನು ಸಣ್ಣ ಕೋಣೆಯೊಂದರತ್ತ ಕರೆದೊಯ್ದ. ಅಲ್ಲಿ ನನ್ನ ಅಜ್ಜಿಯು ಹೂಗಳನ್ನು ಸವರುತ್ತಲೇ ಕಸೂತಿ ಕೆಲಸದಲ್ಲಿಯೇ ತನ್ನನ್ನು ತೊಡಗಿಸಿಕೊಂಡಿರುತ್ತಿದ್ದಳು. ವಿಷಾದದಿಂದ ಭಾರವಾದ ನೋಟವನ್ನು ನನ್ನತ್ತ ಬೀರುತ್ತಾ ಆತ ಮೆಲ್ಲನೆ ಉಸುರಿದ, "ಡ್ಯಾಡ್, ಅದು ಮಾಮಾ ಅಲ್ಲ!

"ಏನು ಹೇಳುತ್ತಿರುವೆ?"

"ಅವಳು ಆ ಪೆಟ್ಟಿಗೆಯೊಳಗಿಲ್ಲ"

"ಮತ್ತೆಲ್ಲಿದ್ದಾಳೆ ? ಅವಳು ?" ನನ್ನ ಪ್ರಶ್ನೆ.

"ಎಲ್ಲಿಯೋ ಮಾತನಾಡುತ್ತಿದ್ದಾಳೆ"

"ನೀನೇಕೆ ಹಾಗೆ ಯೋಚಿಸುತ್ತಿರುವೆ?"

"ನಾನು ಯೋಚಿಸುತ್ತಿಲ್ಲ. ನನಗೆ ಗೊತ್ತು"

"ಹೇಗೆ ಗೊತ್ತು ?"

"ನನಗೆ ಗೊತ್ತು ಎಂದರೆ ಗೊತ್ತು ಅಷ್ಟೆ"

ನಾವು ಹಾಗೆಯೇ ಒಬ್ಬರ ಮುಖವನ್ನೊಬ್ಬರು ಬಹಳ ಹೊತ್ತಿನ ತನಕ ನೋಡುತ್ತಿದ್ದೆವು. ಕೊನೆಗೆ ಆತ ಕೇಳಿದ, "ನಂಬಿಕೆ ಎಂದರೆ ಇದೆ ಏನು?

"ಹೌದು ಲ್ಯೂಕ್, ನಿನ್ನದು ನಂಬಿಕೆ"

"ಓ! ಈಗ ನನಗೆ ತಿಳಿಯಿತು" ಲ್ಯೂಕ್ ಉದ್ಗರಿಸಿದ.

ಅಚ್ಚರಿ, ಸಂತಸ ಮಿಳಿತಗೊಂಡ ನೋಟವನ್ನು ನಾನು ಅವನತ್ತ ಹರಿಸಿದೆ. ತನ್ನೊಳಗೆ ಮೂಡುವ ಪ್ರಶ್ನೆಗಳಿಗೆ ತನ್ನಲ್ಲೇ ಉತ್ತರ ಕಂಡುಕೊಳ್ಳುವ ಸಾಮರ್ಥ್ಯವನ್ನು ಆತ ಗಳಿಸಿದ್ದಾನೆಂಬುದು ನನಗೆ ವ್ಯಕ್ತವಾಗಿತ್ತು. ಈ ಅರಿವು ಅವನಿಗೆ ತಂದೆ-ತಾಯಿಗಿಂತಲೂ ಮಿಗಿಲಾದ ಮಾರ್ಗದರ್ಶಿ ಆತನೊಂದಿಗೆ ಜೀವಮಾನವಿಡೀ ಇರುವ, ಸಾವಿನ ಕರಿನೆರಳು ಚಾಚಿದಾಗಲೂ ಮರೆಯಾಗದ ಸಂಗಾತಿ.

ಅಡುಗೆ ಮನೆಯಿಂದ ಬಂಧು-ಮಿತ್ರರ ಉಲ್ಲಸಿತ ದನಿಯು ನಮ್ಮತ್ತ ಹರಿದು ಬರುತ್ತಿತ್ತು. ಅಲ್ಲಿ ಮಾಮಾಳ ಓಕ್ ಮರದ ಮೇಜಿನ ಮೇಲೆ ಪುಷ್ಕಳವಾದ ಮೇಜವಾನಿಯು ಸಿದ್ಧವಾಗಿತ್ತು. ನಾವೆಲ್ಲ ಅತ್ಯಂತ ಪ್ರೀತಿಸುತ್ತಿದ್ದ ಅದ್ಭುತ ಮಹಿಳೆಯ ಕುರಿತು ಕಥೆಗಳನ್ನು ಅವರೆಲ್ಲ ಪರಸ್ಪರ ಹೇಳಿಕೊಳ್ಳುತ್ತಿದ್ದರು. ನಾನು ಮತ್ತು ಲ್ಯೂಕ್ ಮುಗುಳ್ನಗುತ್ತಾ ಒಬ್ಬರನ್ನೊಬ್ಬರು ನೋಡಿ, ಕೈಗೆ ಕೈ ಸೇರಿಸಿ, ಹುರಿದ ಕೋಳಿಮಾಂಸವನ್ನು ತೆಗೆದುಕೊಳ್ಳಲು ಹೋದೆವು. ನಾವು ಸಹಾ ಅವರೊಂದಿಗೆ ಒಂದೆರಡು ಕಥೆಗಳನ್ನು ಹಂಚಿಕೊಳ್ಳಬೇಕಿತ್ತು.

———

ಅಡುಗೆ ಕೋಣೆಯೊಳಗೆ ನರಿ

ಕೆ. ಸುಕನ್ಯಭಟ್
"ಶ್ರೀ ಶಾಕಾಂಬರಿ" ಶಂಕರಮಠ ರಸ್ತೆ
ಧಾರವಾಡ ೫೮೦೦೦೪

"ಅಲಾಸ್ಕಾ ಮೂಲದ ನರಿಯನ್ನು ಆ ಮನೆಯವರು ಕಾಪಾಡಿದ್ರೊ ಅಥವಾ ಆ ನರಿಯೇ ಅವರನ್ನು ಕಾಪಾಡಿದ್ರೊ ?"

"ನನ್ನ ಮಗಳು ಹನ್ನೆರಡು ವರ್ಷದವಳಾದಾಗ, ಅವಳಿಗೆ ಮ್ಯಾಲಿಗ್ನೆಂಟ್ ಗ್ರೋತ್ ಇದೆ, ಅದಕ್ಕಾಗಿ ಅವಳ ಕಾಲು ಕತ್ತರಿಸಬೇಕಾಗುತ್ತದೆಂಬ ಆಘಾತಕರ ವಿಷಯ ನಮಗೆ ತಿಳಿಯಿತು. ಅವಳನ್ನು ಶಸ್ತ್ರಕ್ರಿಯೆಗೆ ಒಳಪಡಿಸಬೇಕಾಗಿತ್ತು, ಅನಂತರ ಬಹಳ ಕಾಲ ಉಪಚರಿಸಿ ಮೊದಲಿನ ಸ್ಥಿತಿಗೆ ತರಬೇಕಾಗಿತ್ತು. ಉತ್ಸಾಹದ ಬುಗ್ಗೆಯಂತಿದ್ದ ನನ್ನ ಜ್ಯೋನ್‌ಳ ಬಗ್ಗೆ ಎಲ್ಲ ತಾಯಿಯರಂತೆ ನಾನೂ ಚಿಂತಿತಳಾಗಿದ್ದೆ. ಆ ಒಂದು ರಾತ್ರಿ, ಆಸ್ಪತ್ರೆಯಲ್ಲಿ ನಿದ್ರೆ ಅವಳತ್ತ ಸುಳಿಯದಿದ್ದಾಗ—"ಮಮ್ ವಿಕಿಯ ನೆನಪಿದೆಯಾ ?" ಎಂದು ಕೇಳಿ ನನಗೆ ಅಚ್ಚರಿಯನ್ನುಂಟುಮಾಡಿದ್ದಳು.

ಅಮೇರಿಕಾದ "ಫೇರ್‌ಬ್ಯಾಂಕ್ಸ್"ನ ಜನಸಂಚಾರವಿಲ್ಲದ ರಸ್ತೆಯ ಸಮೀಪ ಇದ್ದ ತೋಟದಲ್ಲಿ ನಮ್ಮ ಸಂಸಾರ ವಾಸವಾಗಿತ್ತು. ಕಾಡು ಪ್ರಾಣಿಗಳೂ ಅಲ್ಲಿ ಸಾಕಷ್ಟಿದ್ದುವು. ಶರತ್ಕಾಲದ ಒಂದು ರಾತ್ರಿ, ನಾನೂ, ನನ್ನ ಪತಿ ಜೋ, ವಾಕಿಂಗ್ ಹೋಗುತ್ತಿದ್ದಾಗ, ದೂರದಿಂದ ಕೂಗೊಂದನ್ನು ಕೇಳಿದ್ದೆವು.

'ಆಟಮ್ ಮ್ಯಾಪಲ್'ನ ಬಣ್ಣದ ಪುಟ್ಟ ನರಿಯೊಂದು ಹಿಮದ ಮೇಲೆ ಇಡಲ್ಪಟ್ಟ ಅನಧಿಕೃತ ಜಾಲದಲ್ಲಿ ಸಿಲುಕಿ ಒದ್ದಾಡುತ್ತಿತ್ತು. ಬೆನ್ನನ್ನು ಬಿಲ್ಲಿನಂತೆ ಬಗ್ಗಿಸಿ, ಗಾಳಿಯಲ್ಲಿ ಹಾರಿ, ಅದು ಪುನಃ ನೆಲಕ್ಕೆ ಬಿದ್ದುಬಿಟ್ಟಿತ್ತು.

"ಆ ಕಾಲನ್ನು ನೋಡು, ಅದು ನಾಶವಾಗಿಬಿಟ್ಟಿತಲ್ಲ"—ಎಂದು ಜೋ ಹೇಳಿದ್ದ. ತನ್ನ ಜಾಕೆಟನ್ನು ಬಿಚ್ಚಿ ಅದಕ್ಕೆ ಹೊದಿಸಿದ್ದ. ನಾನು ಅದರ ಹರಿದ ಕಾಲನ್ನು

೧೯೯೪ರ ಏಪ್ರಿಲ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ಅವ್ರಿಲ್ ಜೋಹನ್ಸ್‌ರವರ "ಫಾಕ್ಸ್ ಇನ್ ದ ಕಿಚನ್" ಎಂಬ ಲೇಖನದ ಅನುವಾದ.

ಮೆಲ್ಲನೆ ಜಾಲದಿಂದ ಬಿಡಿಸಿದ್ದೆ. ಆಗ ಅದು ನನ್ನನ್ನು ಕಚ್ಚಲು ಮುಂದಾಗುವಳೇನೊ ....ಎಂದೂ ತಿಳಿದಿದ್ದೆ. ಆದರೆ ಆ ನರಿ ಸ್ವಲ್ಪವೂ ಒದ್ದಾಡದೆ ಜೋನಳ ಕೋಟಿ ನೊಳಗೆ ಸೇರಿಬಿಟ್ಟಿತು. ಹೆದರಿಕೆ ಮತ್ತು ನೋವಿನಿಂದ ಅಗಲವಾಗಿದ್ದ ಅದರ ಹಳದಿ ಕಣ್ಣುಗಳು ಮುಚ್ಚಿಕೊಳ್ಳದೆ ನಮ್ಮನ್ನೆ ನೋಡುತ್ತಿದ್ದುವು. ಮನೆಗೆ ಹಿಂತಿರುಗು ವಾಗ, ದಾರಿಯಲ್ಲಿ ಈ ನರಿ ಮರಿಗೆ "ವಿಕಿ" ಎಂದು ಹೆಸರಿಟ್ಟೆವು.

ವೆಟರಿನರಿ ಅಸಿಸ್ಟೆಂಟ್, ಜೊತೆಗೆ ಗಾಯ ಗೊಂಡ ಕಾಡು ಪ್ರಾಣಿಗಳನ್ನ ಮೊದಲ ಸ್ಥಿತಿಗೆ ತರುವ ಬಗ್ಗೆಯೂ ಪರಿಣತಿಯನ್ನು ನಾನು ಪಡೆದಿದ್ದೆ. ಯಾವಾಗ ನಾವು, ಅವಳನ್ನು (ವಿಕಿ) ಅಡುಗೆ ಕೋಣೆಯೊಳಗೆ ಕರೆತಂದೆವೊ....ಆಗ, ಅಲ್ಲಿ ಪಂಜರದೊಳಗೆ ನೇತಾಡುತ್ತಿದ್ದ ಕಾಲು ಊದಿಸಿಕೊಂಡಿದ್ದ ಗೂಬೆಗಳೆರಡು ಅವಳನ್ನು ಗಮನಿಸು ತ್ತಿದ್ದುವು. ಒಂದು ತಲೆ ಬೋಳಿಸಲ್ಪಟ್ಟ ಹದ್ದು ಕೂಡಾ, ತನ್ನ ರೆಕ್ಕೆಯೊಂದು ಮುರಿದಿದ್ದರೂ, ಒರಗು ಕುರ್ಚಿಯನ್ನ ಹಿಡಿದುಕೊಂಡು ದಿಟ್ಟಿಸುತ್ತಿತ್ತು. ಚಳಿ ಯಿಂದ ಸತ್ತು ಹೋಗದಂತೆ ರಕ್ಷಿಸಿ ತಂದು ಪಂಜರದಲ್ಲಿಟ್ಟಿದ್ದ "ಮಿಂಕ್" ಕೂಡ ಜಾಲರಿಯಲ್ಲಿ ಮೂಗು ತೂರಿಸಿ "ಹಿಸ್ಸ್"SSS ಎಂದಿತ್ತು. ಆಚೆ ಇದ್ದ ನಮ್ಮ ಮನೆಯ ಬೆಕ್ಕು ಮತ್ತು ಮೊಲವೂ ಹೊಸಬಳನ್ನು ಎಚ್ಚರಿಕೆಯಿಂದ ನೋಡು ತ್ತಿದ್ದವು.

ಟೇಬಲ್‌ನ ಬಳಿ ವಿಕಿಯ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಜೋ ಕುಳಿ ತಿದ್ದರೆ ನಾನು, ಅವಳ ಕಾಲು ಸರಿಪಡಿಸುವ ಪ್ರಯತ್ನದಲ್ಲಿದ್ದೆ. ನಮ್ಮ ಮೂರು ಮಕ್ಕಳೂ ಸುತ್ತ ನೆರೆದಿದ್ದರು. ನನ್ನ ಏಳು ವರ್ಷದ ಜೋನ್‌ಳಂತೂ,ತನ್ನ ಕೆಂಬಣ್ಣದ ತಲೆಯನ್ನ ನರಿಯ ಹತ್ತಿರವೇ ಬಗ್ಗಿಸಿ ನೋಡುತ್ತ ಪಿಸುಗುಟ್ಟಿದ್ದಳು...."ಅವಳಿಗೆ ನೋವು ಮಾಡಬೇಡ"—ಎಂದು.

ಜೋ, ಹತ್ತಿಯ ಉಂಡೆಗಳನ್ನ ಈಥರ್ ನಲ್ಲಿ ಅದ್ದಿ ವಿಕಿಯ ಜ್ಞಾನತಪ್ಪಿಸಿದ್ದ. ವಿಕಿಗೆ ಜ್ಞಾನ ತಪ್ಪಿದೊಡನೆಯೇ ನಾನು, ಸೋಂಕು ತಗಲದಂತೆ ಗಾಯವನ್ನ ಸ್ವಚ್ಛ ಮಾಡಿದ್ದೆ. ಇಕ್ಕಳದಿಂದ ಮೂಳೆ ಚೂರು ಗಳನ್ನ ಹೆಕ್ಕಿ, ಗಾಯದ ಸುತ್ತಲಿನ ರೋಮ ಗಳನ್ನ ಕತ್ತರಿಸಿ ತುಂಡಾದ ಮೂಳೆ ಸರಿ ಕಾಣುವಂತೆ ಮಾಡಿದ್ದೆ.

ಅಲ್ಲಿ ಒಟ್ಟು ನಾಲ್ಕು ತುಂಡುಗಳಾಗಿ ದ್ದುವು. ತುಂಡಾದ ಮೂಳೆಗಳನ್ನು ಸಾಧ್ಯ ವಾದಷ್ಟು ಹತ್ತಿರ ಜೋಡಿಸಿ ಕಟ್ಟುತ್ತಿದ್ದಾಗ ಜೋ ಅವಳ ನಾಡಿಬಡಿತವನ್ನ ನೋಡಿ ಕೊಳ್ಳುತ್ತಿದ್ದ, ಚರ್ಮವನ್ನ ಹೊಲಿದು, ಕಾಲಿಗೆ ಬ್ಯಾಂಡೇಜು ಕಟ್ಟಿ ಆಧಾರಕ್ಕಾಗಿ ಸ್ಪ್ಲಿಂಟ್‌ಗೆ ಕಟ್ಟಿದ್ದೆ.

ಶಸ್ತ್ರಕ್ರಿಯೆ ಮುಗಿದ ಕೆಲವು ಗಂಟೆ ಗಳಾದ ಮೇಲೆ ಕಣ್ತೆರೆದ ವಿಕಿ ತಲೆ ಎತ್ತಿ ಸುತ್ತ ನೋಡಿದರು, ನಿಲ್ಲುವ ಪ್ರಯತ್ನ

ಮಾಡಲಿಲ್ಲ. ಏಕಾಂತವಿರಲೆಂದು ನಾನು, ಅವಳ ಬೋನಿನ ಸುತ್ತ ಒಂದು ಬ್ಲಾಂಕೆಟ್ ಮುಚ್ಚಿದೆ, ಬಾಗಿಲನ್ನು ಮಾತ್ರ ಅರೆ ತೆರೆದಿಟ್ಟಿದ್ದೆ.

ರಾತ್ರಿ ನಡೆದಾಟ

ಮಾರನೆ ದಿನ ಬೆಳಗ್ಗೆ ನೋಡಿದಾಗ ಸರಿಯಾಗಿ ಉಸಿರಾಡುತ್ತ ಒಂದೇ ಮಗ್ಗುಲಲ್ಲಿ ವಿಕಿ ಮಲಗಿದ್ದು ಕಂಡೆ. ಅವಳು ತನ್ನ ತಲೆ ಮಾತ್ರ, ರಾತ್ರಿ ಹೇಗೋ ಮಾಡಿ ಲಿವಿಂಗ್ ರೂಮಿನಲ್ಲಿದ್ದ ಪಿಂಕ್ ರಗ್ಗನ್ನ ಬೋನಿನೊಳಗೆ ತಂದಿರಿಸಿಕೊಂಡಿದ್ದಳಲ್ಲ....ಇಟ್ಟುಕೊಂಡ ವಿಚಾರ ಮಾತ್ರ ನನಗೆ ಅಚ್ಚರಿಯನ್ನಿತ್ತಿತ್ತು.

ಎರಡು ಬೆಳಗ್ಗೆಗಳನ್ನು ಕಳೆದಾಗ ಮಾತ್ರ ಕೆಟ್ಟ ಘಟನೆಯೊಂದು ನಡೆದಿತ್ತು. ರಾತ್ರಿ ವೇಳೆ ವಿಕಿ, ತನ್ನ ಕಾಲಿಗೆ ಕಟ್ಟಿದ್ದ ಸ್ಲಿಂಟನ್ನ ಕಚ್ಚಿ ತುಂಡು ಮಾಡಿಬಿಟ್ಟಿದ್ದಳು. ಮೂಳೆ ಮುರಿದಿದ್ದ ಅವಳ ಕಾಲು ಬೋನಿನ, ಸರಳಿನ ಕೆಳಗೆ ಸಿಕ್ಕಿ ಹಾಕಿಕೊಂಡಿತ್ತು. ಸೋಂಕು ತಗುಲಿದ್ದ,ಚೂರು–ಚೂರಾಗಿದ್ದ ಅವಳ ಕಾಲು ಸರಿಪಡಿಸಲಾರದ ಸ್ಥಿತಿಯನ್ನ ತಲುಪಿತ್ತು ಬೇರೆ ದಾರಿಗಾಣದೆ ಅದೇ ದಿನ ಅವಳ ಕಾಲನ್ನೆ ಕತ್ತರಿಸಿ ತೆಗೆದು ಹಾಕಿದ್ದೆ.

ಕಾತರದ, ದೀರ್ಘವಾದ ಆರು ಗಂಟೆಗಳು ಕಳೆದಾಗ ಪುಟ್ಟ ನರಿ ಅಲುಗಾಡಿತ್ತು, ತಣ್ಣೀರಿನಲ್ಲಿ ಅದ್ದಿದ ಹತ್ತಿಯಿಂದ ಅವಳ ಬಾಯಿಗೆ ನೀರು ಹನಿ-ಹನಿಯಾಗಿ ಹಾಕಿದ್ದೆ. ಆ ದಿನವಿಡೀ ಜೋ ಮತ್ತು ನಾವು, ಒಬ್ಬರಾದ ಮೇಲೊಬ್ಬರಂತೆ ಅವಳ ಬಳಿಇದ್ದರೆ, ರಾತ್ರಿ ಇಡೀ ಜೋನ್ ಮತ್ತ ವಳ ಸಹೋದರರು, ವಿಕಿಯ ಬಳಿ ಇದ್ದರು.

ಕೆಲ ದಿನಗಳಲ್ಲಿ ವಿಕಿ, ತಾನೇ ಆಹಾರ ತಿನ್ನುತ್ತ, ನೀರು ಕುಡಿಯುತ್ತಾ ಚುರುಕಾಗಿದ್ದಳು. ಅವಳು ಲಿವಿಂಗ್ ರೂಮಿನೆಡೆಗೇ ನೆಟ್ಟ ನೋಟ ಹರಿಸುತ್ತಿದ್ದಾಗ ಮೊದ ಮೊದಲು ನನಗೆ ಯಾಕೆಂದು ಗೊತ್ತಾಗದಿದ್ದರೂ, ಕೊನೆಗೆ, ನಾನು ಒಗೆಯಲೆಂದು ತೆಗೆದಿದ್ದ ಪಿಂಕ್‌ರಗ್ ಅವಳಿಗೆ ಬೇಕಾಗಿದೆಯೆಂದು ತಿಳಿದುಹೋಗಿತ್ತು. ಆ ರಗ್ಗನ್ನ ಅವಳ ಹತ್ತಿರಕ್ಕೆ ಒಯ್ದಾಗ ಅವಳು ಬೋನಿನ ಒಳಗಿನಿಂದಲೇ ತನ್ನ ಮುಖ ಚಾಚಿ, ಬಾಯಲ್ಲಿ ಕಚ್ಚಿ ಹಿಡಿದು ಒಳಗೆಳೆದುಕೊಂಡಿದ್ದಳು.

ಮನೆ ಇಡೀ ಅವಳು ಓಡಾಡಲು, ಅವಳ ಬೋನಿನ ಬಾಗಿಲನ್ನ ತೆರೆದಾಗ, ನಿಂತ ವಿಕಿ, ತನ್ನ ಸಮತೋಲನ ತಪ್ಪಿದಂತಾಗಿ ಬಿದ್ದರೂ ಮತ್ತೊಮ್ಮೆ ನಿಲ್ಲುವ ಪ್ರಯತ್ನ ನಡೆಸಿದ್ದಳು 'ಓಹ್....ಮಮ್' ಅವಳೆಷ್ಟು ಧೈರ್ಯಶಾಲಿ, ಪುನಃ ನಿಲ್ಲುವ ಪ್ರಯತ್ನ ಮಾಡುತ್ತಿದ್ದಾಳೆ"—ಎಂದು ಜೋನ್ ಪಿಸುಗುಟ್ಟಿದಾಗ ನನ್ನೆದೆ ಕೂಡ ನೋವಿನಿಂದ ಆಗ ಹಿಂಡಿದಂತಾಗಿತ್ತು.

ಕೆಲವು ಸಲ ಮರು ಪ್ರಯತ್ನಿಸಿದ ವಿಕಿ ಕೊನೆಗೂ ನಿಂತಿದ್ದಳು. ತನ್ನ ಬೋನಿನಲ್ಲಿ

ಸುರಕ್ಷಿತವಾಗಿ ನಿಂತು ಹೊರ ನೋಡಿದ್ದಳೇ ವಿನಾ ನಡೆಯಲು ಪ್ರಯತ್ನಿಸಲೇ ಇಲ್ಲ. ನನ್ನ ಬೆಡ್‌ರೂಮಿನ ನೆಲದ ಮೇಲೆ, ಅದೇ ರಾತ್ರಿ ಅವಳ ಮೃದು ಹೆಜ್ಜೆಯ ಸಪ್ಪಳ ಕೇಳಿ ಎಚ್ಚರವಾಗಿತ್ತು. ತಣ್ಣಗಿನ ಅವಳ ಮೂಗೂ ನನ್ನ ಕೈಯನ್ನು ಸವರಿದಂತಾ ಗಿತ್ತು. ಅನಂತರ ಮಕ್ಕಳ ರೂಮಿನೆಡೆಗೆ ಅವಳು ಹೋದದ್ದು ತಿಳಿದಿತ್ತು.

ಬೇಗನೇ ಅವಳು ಆ ಜೋನನ್ನೆ ತನ್ನ ಸುರಕ್ಷಿತ ನೆಲೆಯನ್ನಾಗಿಸಿಕೊಂಡು, ಸುತ್ತ ಮುತ್ತ ತಿರುಗಾಡಿ ಆಹಾರ ತಂದು ಪಿಂಕ್ ರಗ್ಗಿನ ಕೆಳಗಿಟ್ಟುಕೊಳ್ಳುತ್ತಿದ್ದಳು. ಆ ರಗ್ಗನ್ನು ಅವಳು ತನ್ನದೇ ಎಂದು ತಿಳಿದು ಕೊಂಡಿದ್ದಾಳೆಂಬುದರ ಬಗ್ಗೆ ನಮಗ್ಯಾರಿಗೂ ಸಂಶಯವೇ ಇರಲಿಲ್ಲ, ನಿದ್ರಿಸುವಾಗಲೂ ಅದನ್ನಿಟ್ಟುಕೊಳ್ಳುತ್ತಿದುದರಿಂದ. ನಮಗೆ ಕಾಣುತ್ತಿದ್ದುದು ಬರೇ ಪಿಂಕ್ ರಗ್ ಆಗಿತ್ತು.

ವಿಕಿ ಸರಾಗವಾಗಿ ಮನೆ ಇಡೀ ಓಡಾಡುತ್ತಾ, ನಾವು ಹತ್ತಿರ ಹೋದಾಗ ಮಾತ್ರ ದೂರ ಸರಿಯುತ್ತಿದ್ದಳು. ತನ್ನ ಆಟದ ಸಾಮಾನುಗಳಾದ ಹಳೆ ಕೈಚೀಲ ವನ್ನ ಗಾಳಿಯಲ್ಲಿ ಹಾರಿಸಿ ಅನಂತರ ಹಿಡಿದು ಆಡುತ್ತಿದ್ದಳು. ಒಂದು ಸಲವಂತೂ ಹೊರ ಬಾಗಿಲ ಸಂದಿಯಲ್ಲಿ ಮುಖವಿಟ್ಟು ಹೊರ ಗಿನ ಗಾಳಿಯನ್ನು ಮೂಸಿದಾಗ, ನಾನೂ ಮುಗ್ಧಳಾಗಿದ್ದೆ.

ಕಾಡಿನ ಕರೆ :

ಏಳು ವಾರಗಳಿಗಿಂತಲೂ ಹೆಚ್ಚು ಜಾರಿ ಹೋಗಿತ್ತು. ಬ್ರೀಡಿಂಗ್ (ಬೆದೆಕಾಲ) ಹತ್ತಿರ ಬರುತ್ತಿದ್ದುದರಿಂದ ಹೊಸ ಜತೆ ಗಾರ ಮತ್ತು ಹೊಸ ನೆಲೆ ಹುಡುಕುವ ಸಲುವಾಗಿ ವಿಕಿಗೆ ನಾವು ಸ್ವಾತಂತ್ರ್ಯ ಕೊಡಬೇಕಾಗಿತ್ತು. ಕಾಡಿಗೆ ಅವಳನ್ನು ಪುನಃ ಬಿಡುವ ಮೊದಲು ಜೋ ಮತ್ತು ನಾನು, ಅವಳು ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಕೊಲ್ಲುವುದು ಸಾಧ್ಯವೇ ಎಂಬುದನ್ನು ಖಚಿತ ಮಾಡಿಕೊಳ್ಳಬೇಕಾ ಗಿತ್ತು.

ಒಂದು ರಾತ್ರಿ ಕೋಳಿ ಮರಿಯನ್ನು ಅವಳಿಗಾಗಿ ಅಡಿಗೆ ಕೋಣೆಯಲ್ಲಿ ಬಿಟ್ಟಿ ದ್ದೆವು. ಅದನ್ನು ಕಂಡರೂ ವಿಕಿ ಅಲುಗಾಡ ದಿದ್ದಾಗ ನಿರಾಸೆಯಾಗಿತ್ತು. ಬೆಳಗ್ಗೆ ನಾವೆದ್ದು ನೋಡಿದಾಗ ಅರ್ಧ ತಿಂದು ಬಿಟ್ಟಿದ್ದ ಕೋಳಿ ಮರಿಯ ಮಾಂಸವನ್ನ ವಳು ಪಿಂಕ್ ರಗ್ಗಿನ ಕೆಳಗೆ ಇಟ್ಟಿದ್ದಳು.

ಅನಂತರದ ದಿನಗಳಲ್ಲಿ ಅವರ ಚಡಪಡಿ ಸುವಿಕೆ ಹೆಚ್ಚಿ, ರಾತ್ರಿವೇಳೆ ಅವಳು ಕಿಟಕಿಯ ಹೊರಗೆ ನೋಡತೊಡಗಿದ್ದಳು. ಮನೆ ಹೊರಗಡೆ ಹಗಲು ಹೊತ್ತಿನಲ್ಲಿ ಮೊಲ ನರಿ, ಮುಂತಾದ ಪ್ರಾಣಿಗಳ ಹೆಜ್ಜೆ ಗುರುತು ಗಳೂ ಕಂಡುಬಂದಾಗ, ವಿಕಿ ರಾತ್ರೆ ನೋಡುತ್ತಿದ್ದುದೇನೆಂದು ತಿಳಿದು ಹೋಗಿತ್ತು.

ವಿಧಿ ಇಲ್ಲದ ನಾನು, ಮಕ್ಕಳಿಗೆ ಹೇಳಿದ್ದೆ 'ಕಾಡು ಪ್ರಾಣಿಗಳನ್ನು ಸಾಕಬಾರದು' ಎಂಬುದಾಗಿ ಅವಳು, ತಾನು ಹುಟ್ಟಿ-ಬೆಳೆದಿದ್ದ ಪರಿಸರಕ್ಕೆ ಹೋಗುವುದೇ ಸರಿ ಎಂದು ನಾನು ಹೇಳಿಕೊಂಡರೂ, ಮನಸ್ಸು ಅವಳನ್ನು ಬಿಟ್ಟಿರಲು ಒಪ್ಪದಾಗಿತ್ತು. ಕೊನೆಗೆ ಅವಳು ಹೊರಹೋಗಲೆಂದು ಬೋನಿನ ಬಾಗಿಲನ್ನು ನಿಧಾನವಾಗಿ ತೆರೆದಿದ್ದೆವು. ಅವಳು ಕೂಡಲೆ ಓಡಿಹೋಗಬಹುದೆಂದು ಕಾದರೂ, ಹೊರಹೋಗದ ಅವಳು ಬಾಗಿಲಲ್ಲೆ ನಿಂತಿದ್ದು, ನಂತರ ತನ್ನ ಸ್ವಸ್ಥಾನಕ್ಕೆ ತೆರಳಿ ಮುದುಡಿಕೊಂಡಿದ್ದಳು. "ನೋಡು ಮಮ್, ಅವಳಿಗೆ ಹೋಗುವುದು ಬೇಕಿಲ್ಲ"—ಎಂದಿದ್ದ ಸ್ಕಾಟ್. ಮತ್ತೊಂದು ದಿನ ಬಾಗಿಲು ತೆರೆದೊಡನೆ ಓಡಿದ ವಿಕಿ. ಹೊರಗಿಂದ ಬೀಸುವ ಗಾಳಿ ಹೊತ್ತುತಂದ ಸಂದೇಶವನ್ನೆಲ್ಲಾ ತಿಳಿದುಕೊಂಡರು. ತನ್ನ ಬೋನಿಗೇ ಹಿಂತಿರುಗಿದ್ದಳು.

ಐದು ರಾತ್ರಿಗಳ ನಂತರ, ಹೊರಗೋಡಿದ ವಿಕಿ ಮರಗಳೆಡೆ ಕಾಣದಾಗಿದ್ದಳು. ಸಂತಸ–ಬೇಸರ ಒಟ್ಟಿಗೇ ಆದರೂ ನಾನು ಮತ್ತು ಜೋ ರಾತ್ರಿ ಅವಳು ಬಂದರೆಂದು ಕೊಂಡು, ಬೋನನ್ನು ಹೊರಗಿಟ್ಟೆವು. ಮಕ್ಕಳು, ಅವಳ ಪಿಂಕ್ ರಗ್ ಆಟದ ಕೈಚೀಲ, ಮೂಳೆಗಳು ಮತ್ತು ಆಹಾರದ ತುಣುಕುಗಳನ್ನು ಹೊರತಂದು ಬೋನಿನೊಳಗಿಟ್ಟಿದ್ದರು.

ತವಕದಿಂದ ಮಾರನೇ ದಿನ ಬೆಳಗ್ಗೆ ನಾವಿಣಿಕಿದಾಗ ಕೆಲವು, ತಿಂದು ಬಿಟ್ಟ ಆಹಾರ ಕಂಡಿತ್ತು. ಕೆಲವನ್ನ ರಗ್ಗಿನ ಕೆಳಗೆ ಬಚ್ಚಿಟ್ಟಿದ್ದಳು. ಮೂರು ವಾರಗಳು ಪ್ರತಿ ರಾತ್ರಿ ನಾವಿಡುತ್ತಿದ್ದ ಮೊಟ್ಟೆಗಳನ್ನು ತಿಂದು ಹೋಗುತ್ತಿದ್ದಳು. ಮೂಳೆಗಳು ಮತ್ತು ಕೈಚೀಲಗಳನ್ನು ಅವಳು ತೆಗೆದು ಕೊಂಡು ಹೋಗಿಬಿಟ್ಟಳು. ತಾನು ಬೇಟೆ ಆಡಿ ತಂದಿರಿಸಿದ ಪ್ರಾಣಿಯ ಮಾಂಸ ಒಂದು ಸಲ ಬೋನಿನಲ್ಲಿ ಕಂಡಾಗ ಜೋನ್ಳು ನನ್ನೆಡೆ ನೋಡಿ—"ಮಮ್ ಅವಳು ತನ್ನ ಪ್ರಯತ್ನದಲ್ಲಿ ಸಫಲಳಾಗುತ್ತಾಳೆ" ಎಂದಿದ್ದಳು.

ಮಾರನೇ ರಾತ್ರೆ ಅವಳ ಪಿಂಕ್ ರಗ್ಗೂ ಮಾಯವಾಗಿತ್ತು. ಹೊರಗೆ ಅವಳ ಮೂರು ಪಾದಗಳ ಗುರುತುಗಳೂ ಸಿಕ್ಕಿದ್ದವು. ಅದೇ ಅವಳ ಕೊನೆಯ ಭೇಟಿ ಎಂದು ನಮಗೂ ಗೊತ್ತಾಗಿತ್ತು.

ಜೂನ್ ತಿಂಗಳಲ್ಲಿ ನಾವಲ್ಲಿಂದ ಬೇರೆಡೆ ಹೊರಟೆವು. ಅವಳು, ಅದು ತಿಳಿದುಕೊಂಡವಳಂತೆ ದಾರಿಯಲ್ಲಿ ಕೂತು ನಮ್ಮತ್ತ ನೋಡುತ್ತಿದ್ದಳು. ಸೊಬೆಯಿಂದಾಗಿ ಕೊಳಕಾಗಿದ್ದರೂ ವಿಕಿ ಆರೋಗ್ಯ ಸುಧಾರಿಸಿಕೊಂಡದ್ದು ನಮಗೆ ನೆಮ್ಮದಿ ಕೊಟ್ಟಿತ್ತು.

ಕಾರನ್ನು ನಿಲ್ಲಿಸಿ ನಾನು—"ವಿಕಿ, ಗುಡ್‌ಬೈ. ನಿನ್ನನ್ನು ಚೆನ್ನಾಗಿ ನೋಡಿಕೊ" ಎಂದಿದ್ದೆ. ಮೊದಲಿಂದೂ ಅವಳು ಬೊಗಳಿದ್ದನ್ನೇ ನಾ ಕೇಳಿರಲಿಲ್ಲ. ಆದರೂ ಅವಳು

ನಾ ಹೇಳಿದ್ದಕ್ಕೆ ಉತ್ತರವೆಂಬಂತೆ, ಪ್ರತ್ಯುತ್ತರಿಸುವಂತೆ ಎರಡು ಬಾರಿ ಬೊಗಳಿ ಕಾಡು ಸೇರಿದ್ದಳು.

"ಆಸ್ಪತ್ರೆಯಲ್ಲಿ ಆ ದಿನ ನಾನು ಮತ್ತು ಜೋನ್, ವಿಕಿಯ ಬಗ್ಗೆ ಬಹಳ ಹೊತ್ತಿನವರೆಗೆ ಮಾತಾಡಿದ್ದೆವು. ಜೋನ್‌ಳ ನೀಲ ಕಂಗಳಲ್ಲಿ ನೀರು ತುಳುಕುವಂತಿದ್ದರೂ.... ಕಂಬನಿಗರೆಯದೆ— "ಮಮ್.... ನಾನೂ ಜೀವನದಲ್ಲಿ ಧೈರ್ಯಗೆಡದೆ, ಸಾಧಿಸಬೇಕು ಎಂದಿರುವುದನ್ನೆಲ್ಲ ಸಾಧಿಸಲು ಯಾವುದೂ ....ಅಡ್ಡಿಯಾಗಲು ಬಿಡಲಾರೆ"—ಎಂದು ಹೇಳಿದಾಗ ನನ್ನೆದೆ ನಡುಗಿತ್ತು. ಜೋನ್ ಅಂದು ಹೇಗೆ ವಿಕಿಯ ಧೈರ್ಯ, ಕಾರ್ಯ ಸಫಲತೆ ಬಗ್ಗೆ ಹೇಳಿದ್ದಳೊ....ಹಾಗೆ, ನಾನೂ ಜೋನ್‌ಳ ಕಾರ್ಯ ಸಫಲತೆ ಬಗ್ಗೆ ಆತ್ಮವಿಶ್ವಾಸ ಹೊಂದಿದ್ದೆ.

ಇಂದು ಜೋನ್ ಹೆಂಡತಿಯಾಗಿ, ಇಬ್ಬರು ಪುಟ್ಟ ಮಗಂದಿರ ತಾಯಿಯಾಗಿ ತನ್ನ ಕರ್ತವ್ಯ ನಿಭಾಯಿಸುತ್ತಿದ್ದಾಳೆ. ವಿಕಿಯೂ ಜತೆಗಾರ ಮತ್ತು ಮಕ್ಕಳೊಂದಿಗಿರಬಹುದು ಎಂದು ಭಾವಿಸುತ್ತಾ... ನಮ್ಮ ಜೀವನದಲ್ಲವಳ ಆಗಮನವೇ ನಮಗೆಲ್ಲರಿಗೂ ....ಜೀವನದಲ್ಲಿನ ಕಷ್ಟ-ಸುಖಗಳನ್ನೆದುರಿಸುವ ಪರಿ ತಿಳಿಸಿದ್ದು. ಛಲ-ಬಲ ನೀಡಿದ್ದು ಎಂದು ನನ್ನ ಹೃದಯ ಹೇಳುತ್ತಿದೆ."



ಮದ್ಯಪಾನ

ಕುಡಿತ ಮನುಷ್ಯ ತನ್ನನ್ನು ತಾನು ಮರೆಯುವಂತೆ ಮಾಡುತ್ತದೆ. ಅವನು ಮೃಗಕ್ಕಿಂತಲೂ ಕಡೆಯಾಗುತ್ತಾನೆ.

ಒಂದು ರಾಷ್ಟ್ರ, ಮದ್ಯವನ್ನು ಕುಡಿಯಲು ಜನರಿಗೆ ಒದಗಿಸುವ ಕ್ರಮ ತಪ್ಪು ಮತ್ತು ಅನೀತಿಯುತವಾದುದು.

—ಗಾಂಧೀಜಿ

ಹುಡುಗಾಟದ ಆತ್ಮಹತ್ಯಾ ಪ್ರಯತ್ನ

ಜಿ. ಎ. ರುಕ್ಮಿಣಿಮಾಲಾ
೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು–೫೭೦೦೦೯

ನಾನು ಬರೆಯುತ್ತಿರುವ ಘಟನೆ ನಡೆದು ಹೆಚ್ಚು ಕಮ್ಮಿ ಹದಿನೈದು ವರ್ಷಗಳೇ ಸಂದುವು. ನಾನಾಗ ಹತ್ತನೇ ಈಯತ್ತೆಯಲ್ಲಿದ್ದೆ. ಸರ್ಕಾರೀ ಪ್ರೌಢಶಾಲೆ. ಸುತ್ತಮುತ್ತ ಅದೊಂದೇ ಪ್ರೌಢಶಾಲೆ ಇದ್ದದ್ದರಿಂದ ಆ ಹಳ್ಳಿಯ ಅಕ್ಕಪಕ್ಕದಿಂದ ಎಲ್ಲ ಮಕ್ಕಳೂ ಅದೇ ಶಾಲೆಗೆ ದಾಖಲಾಗುತ್ತಿದ್ದರು. ನಡೆದು ಬರುವವರ ಸಂಖ್ಯೆಯೇ ಹೆಚ್ಚಿತ್ತು. ದೂರದಿಂದ ಬರುವ ಬೆರಳೆಣಿಕೆಯಷ್ಟು ಜನ ಆ ವಲಯದಲ್ಲಿ ಓಡಾಡುತ್ತಿದ್ದ ಏಕೈಕ ಬಸ್ಸಿನಲ್ಲಿ ಬರುತ್ತಿದ್ದರು.

ನಮ್ಮ ತರಗತಿಯಲ್ಲಿ 'ಎ' ಮತ್ತು 'ಬಿ' ಎಂಬ ಎರಡು ವಿಭಾಗಗಳಿದ್ದುವು. ನಾನು ನಮ್ಮ ತರಗತಿಯ ಮೊದಲ ಅವಧಿಯ ವಿಷಯ ಇಂಗ್ಲಿಷ್. ನಾರಾಯಣಭಟ್ ಎಂಬ ಗುರುಗಳು ಪಾಠ ಮಾಡುತ್ತಿದ್ದರು. ಪಾಠ ಶುರುಮಾಡಿ ಒಂದೈದು ನಿಮಿಷಗಳಾಗಿರಬಹುದಷ್ಟೆ. ಆಗ 'ಎ' ವಿಭಾಗದ ವಿದ್ಯಾರ್ಥಿನಿ ಬಂದು ಮಾಸ್ತರರಲ್ಲಿ ಏನೋ ಹೇಳಿದಳು. ಗುರುಗಳು ನನ್ನನ್ನು ಹೊರ ಹೋಗಲು ಹೇಳಿದರು. ಏನು ವಿಷಯವೆಂದು ಗೊತ್ತಾಗಲಿಲ್ಲ. ತರಗತಿಯಿಂದ ಎದ್ದು ಹೊರಬಂದು ನನ್ನನ್ನು ಕರೆದ ವಿದ್ಯಾರ್ಥಿನಿಯಲ್ಲಿ ವಿಷಯವೇನೆಂದು ಕೇಳಿದೆ. "ನಮ್ಮ ಕ್ಲಾಸಿನ ಸುಮ ವಿಷ ಕುಡಿದಿದ್ದಾಳೆ. ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ನೀನು ಮತ್ತು ನಾನು ಅವಳ ಮನೆ ಪಕ್ಕ ಇರುವುದರಿಂದ ನಾವಿಬ್ಬರೂ ಅವಳೊಂದಿಗೆ ಆಸ್ಪತ್ರೆಗೆ ಹೋಗಬೇಕು. ನಮ್ಮೊಂದಿಗೆ ಪಿ.ಇ.ಟಿ. ಮಾಸ್ತರರು ಬರುತ್ತಾರೆ" ಎಂದಳು.

"ಓ! ನಿಜವಾಗಿಯೂ ಕುಡಿದೇಬಿಟ್ಟಳಾ?" ಎಂದು ಉದ್ಗರಿಸಿದೆ. ನನ್ನ ಮನೆಯಿಂದ ಅವಳ ಮನೆಗೆ ಹೋಗಲು ಹತ್ತು ನಿಮಿಷ ಸಾಕು. ಆ ದಿನ ಶಾಲೆಗೆ ಬರುವಾಗ ದಾರಿಯಲ್ಲಿ ಸುಮ ಮತ್ತು ಇನ್ನೂ ನಾಲ್ಕೈದು ಜನ ಜೊತೆಯಾಗಿದ್ದೆವು. ಆಗ ಸುಮ ಚೀಲದಿಂದ ಒಂದು ಕುಪ್ಪಿ ತೆಗೆದು ತೋರಿಸಿ "ಇದು ವಿಷ. ಬಾಳೆಗಿಡಕ್ಕೆ ಹಾಕಲು ತಂದದ್ದು ಫಾಲಿಡಾಲ್. ಇವತ್ತು ಇದನ್ನು ಕುಡಿಯುತ್ತೇನೆ" ಎಂದಿದ್ದಳು.

"ಸುಮ್ಮಗೆ ತಮಾಷೆ ಮಾಡಬೇಡ" ಎಂದು ನಾವು ಅಂದೆವು. ಅವಳೂ ಅದನ್ನು

ಚೀಲದೊಳಗೆ ಹಾಕಿಕೊಂಡಳು. ಅನಂತರ ವಿಷದ ವಿಷಯ ಬರಲಿಲ್ಲ. ಬೇರೆ ಸುದ್ದಿಗಳ ಕಡೆ ನಮ್ಮ ಗಮನ ಹರಿಯಿತು. ಆ ಸಂಗತಿಯನ್ನೇ ನಾವು ಮರೆತುಬಿಟ್ಟೆವು.

"ಸುಮ ಪ್ರಾರ್ಥನೆ ಆದ ಕೂಡಲೇ ತರಗತಿಗೆ ಬಂದು ನಮಗೆಲ್ಲರಿಗೂ ಆ ವಿಷದ ಕುಪ್ಪಿಯನ್ನು ತೋರಿಸಿದಳು. ನಮಗೆ ಮೊದಲ ತರಗತಿ ಇರಲಿಲ್ಲ. ಮಾಸ್ತರರು ರಜೆಯಲ್ಲಿದ್ದರು. ನಾವೆಲ್ಲ ಹರಟೆ ಹೊಡೆಯುತ್ತಿದ್ದೆವು. ಸುಮ ಪುನಃ ವಿಷದ ಕುಪ್ಪಿ ತೆಗೆದು "ನೋಡಿ, ಇದನ್ನು ನಾ ನೀಗ ಕುಡಿಯುತ್ತೇನೆ" ಎಂದಳು. "ಯಾಕೆ ಸುಮ ಹೀಗೆ ಮಾಡುತ್ತೀ? ಆ ಬಾಟಲಿ ಕೊಡು. ಅದನ್ನು ಹೊರಗೆ ಬಿಸಾಡುತ್ತೇವೆ," ಎಂದು ಎಲ್ಲರೂ ಬೈದೆವು. ಆದರೆ ಅವಳು ಅಷ್ಟರಲ್ಲೇ ಬಾಟಲಿ ಮುಚ್ಚಳ ತೆರೆದು ಬಾಯಿಯ ಬಳಿ ತಂದಳು. ಏನೋ ಹುಡುಗಾಟಕ್ಕೆ ಹೀಗೆಲ್ಲ ಮಾಡುತ್ತಿದ್ದಾಳೆ ಎಂದೇ ನಾವೆಲ್ಲ ತಿಳಿದಿದ್ದೆವು. ಅವಳು ಕುಡಿದೇಬಿಟ್ಟಳು. ಏನೋ ಸ್ವಲ್ಪ ವಿಷ ಒಳಗೆ ಹೋಗಿರಬಹುದು, ತತ್‌ಕ್ಷಣ ನಾನು ಬಾಟಲಿಯನ್ನು ಅವಳ ಕೈಯಿಂದ ಕಿತ್ತು ದೂರ ಎಸೆದೆ. ಕುಡಿದ ಅನಂತರ "ನನ್ನನ್ನು ಬದುಕಿಸು" ಎಂದು ಬೊಬ್ಬೆ ಶುರು ಮಾಡಿದಳು.

ವಿಷಪಾನ ದೇಹವನು ಕೊಲಬಹುದು,
ಮಾನವನು?
ವಶನಾಗದಿರು ಕ್ಷಣಿಕ ಭಾವಸಂಘಟ್ಟನೆಗೆ
ತನುವೀ ನಿಸರ್ಗದಾ ದಾನ ಸಂರಕ್ಷಿಸುತ
ಮನುಜತ್ವ ತಳೆ, ಬದುಕು ಸೊಗಮಹುದು
ಅತ್ರಿಸೂನು

ಬಾಡಿಗೆ ಕಾರಿನಲ್ಲಿ ದೈಹಿಕ ಶಿಕ್ಷಕರೊಂದಿಗೆ ನಾನು ಮತ್ತು ಶೋಭ ಸುಮಳನ್ನು ಕರೆದುಕೊಂಡು ಅಲ್ಲಿಂದ ಆರು ಕಿ.ಮೀ. ದೂರ ಇರುವ ಸರ್ಕಾರೀ ಆಸ್ಪತ್ರೆಗೆ ಹೋದೆವು. ಕಾರಿನಲ್ಲಿ ಹಿಂಬದಿ ನಾನು ಮತ್ತು ಶೋಭ ಸುಮಳನ್ನು ಮಲಗಿಸಿಕೊಂಡು ಕುಳಿತೆವು. ಸುಮಳ ತಲೆ ನನ್ನ ಮಡಿಲಲ್ಲಿ, ಕಾಲು ಶೋಭಳ ಮಡಿಲಲ್ಲಿ. ದಾರಿ ಉದ್ದಕ್ಕೂ ಸುಮ ವಾಂತಿ ಮಾಡಿಕೊಂಡೇ ಇದ್ದಳು. ನನ್ನ ಬಟ್ಟೆ ವಾಂತಿಯಿಂದ ತೊಯ್ದು ಹೋಗಿತ್ತು. ಆಸ್ಪತ್ರೆಗೆ ತಲಪಿದ್ದೇ ಸುಮಳನ್ನು ಕೋಣೆಗೆ ಸಾಗಿಸಿ ಉಪ್ಪು ನೀರು ಕುಡಿಸಲು ಮುಂದಾದರು. ಸುಮ ಕುಡಿಯುವುದಿಲ್ಲವೆಂದು ಹಟ ಹಿಡಿದಳು. ಅಂತೂ ವೈದ್ಯರು ಬಲವಂತದಿಂದ ಬಾಯಿಗೆ ಲಾಳಿ ಇಟ್ಟು ಉಪ್ಪು ನೀರು ಕುಡಿಸಿದರು. ವಾಂತಿಯಾಗಿ ಹೊಟ್ಟೆ ಖಾಲಿ ಆಯಿತು. ಅನಂತರ ಗ್ಲೂಕೋಸ್ ಡ್ರಿಪ್ ಹಾಕಿದರು. ನಾನು ಮಾತ್ರ ಮುಂದೆ ಆ ವಾಂತಿಯಾದ ಲಂಗವನ್ನು ಮತ್ತೆ ಧರಿಸಲಿಲ್ಲ. ಹಾಕಿಕೊಂಡರೆ ಅದೇ ನೆನಪು ಕಾಡುತ್ತದೆಂದೋ ಏನೋ ಆ ಲಂಗವನ್ನು ದಾನಮಾಡಿ ಬಿಟ್ಟೆ.


ಸುಮಳ ತಂದೆ ಆಸ್ಪತ್ರೆಗೆ ಧಾವಿಸಿ ಬಂದರು. ಬಂದದ್ದೇ ಸುಮಳನ್ನು ತರಾಟೆಗೆ ತೆಗೆದುಕೊಂಡು "ನಿನಗೇನಾಗಿತ್ತು ವಿಷ ಕುಡಿಯಲು? ನಿನಗೆ ಅಮ್ಮನ ಮುದ್ದು ಜಾಸ್ತಿಯಾಯಿತು. ಅದಕ್ಕೆ ನೀನು ಹೀಗೆ ಮಾಡುವುದು. ಇಡೀ ಬಾಟಲಿ ವಿಷ ಕುಡಿದುಬಿಡಬೇಕಿತ್ತು. ಅರ್ಧ ಕುಡಿದು ನಮ್ಮನ್ನು ಯಾಕೆ ಹೊಟ್ಟೆ ಉರಿಸುತ್ತಿ? ನಿನಗೆ ವಿಷ ಎಲ್ಲಿ ಸಿಕ್ಕಿತು?" ಎಂದು ಹೊಟ್ಟೆ ಸಂಕಟ ತಡೆಯಲಾರದೆ ಎಲ್ಲ ಒದರಿಬಿಟ್ಟರು.

ವೈದ್ಯರು, ನಾವು ಎಲ್ಲ ಸೇರಿ ಅವಳನ್ನು ಸಮಾಧಾನಗೊಳಿಸಿ ಕೋಣೆಯಿಂದ ಹೊರ ಕರೆದುಕೊಂಡು ಹೋದೆವು. "ನೋಡಿ, ಇನ್ನು ಜನರೆಲ್ಲ ನಮ್ಮನ್ನು ಆಡಿಕೊಂಡು ನಗಲಿಕ್ಕಿಲ್ಲವೇ? ಏನಾಗಿತ್ತು ಇವಳಿಗೆ? ಮನೆಯಲ್ಲಿ ನಾವೇನೂ ಕಷ್ಟಕೊಡುವುದಿಲ್ಲ ಎಲ್ಲ ಪ್ರೀತಿಯಿಂದಲೇ ಇದ್ದೇವೆ. ಯಾಕೆ ಹೀಗೆ ಮಾಡಿಕೊಂಡಳಿವಳು? ಸಧ್ಯ ಬದುಕಿದಳಲ್ಲ" ಎಂದು ಅವರ ಸಂಕಟ, ಕಷ್ಟ ತೋಡಿಕೊಂಡರು. ಆ ದಿನ ಸಂಜೆಯೇ ಅವಳನ್ನು ಆಸ್ಪತ್ರೆಯಿಂದ ಮನೆಗೆ ಹೋಗಲು ಬಿಟ್ಟರು.

ಎರಡು ದಿನಗಳ ಅನಂತರ ಶಾಲೆಗೂ ಬಂದಳು. ಶಾಲೆಯಲ್ಲಿ ಗಂಭೀರವದನೆಯಾಗಿದ್ದಳು. ಯಾರ ಬಳಿಯೂ ಹೆಚ್ಚು ಮಾತಿಲ್ಲ, ನಗುವಿಲ್ಲ. ತಾನು ಮಾಡಿದ್ದು ತಪ್ಪು ಎನಿಸಿ ಪಶ್ಚಾತ್ತಾಪ ಪಟ್ಟಿರಬೇಕು.

ಅವ ಋಣಕೋಸುಗವೊ ಅರ ಹಿತ
ಕೋಸುಗವೊ
ಆವಾವ ಕಾರಣಕೊ ಅವ ಯೋಜನೆಗೋ
ನೋವ ನಿಂ ಪಡುವುದೇ ದೈವೇಚ್ಛೆ
ಯಾಗಿರದೆ?
ದೈವ ಕುರುಡೆನ್ನದಿರು ಮಂಕುತಿಮ್ಮ

ಈಗ ಅವಳು ಎರಡು ಮಗುವಿನ ತಾಯಿಯಾಗಿ ತನ್ನದೇ ಸಂಸಾರದ ಸಮುದ್ರದಲ್ಲಿ ವಿಹರಿಸುತ್ತಿದ್ದಾಳೆ.



ಖಾದಿ

ಕೈಗಾರಿಕೆಗಳಲ್ಲಿ ಖಾದಿ ಸೂರ್ಯನಿದ್ದಂತೆ
ಭಾರತೀಯರ ಖಾದಿ ಸಮಾನತೆಯ ಸಂಕೇತ
ನೆಹರುರವರು ಹೇಳುವಂತೆ "ಸ್ವಾತಂತ್ರ್ಯದ ಉಡುಪು"

ಪುಸ್ತಕ ವಿಮರ್ಶೆ

ಬುದ್ಧ ಹರಿಶ್ಚಂದ್ರ (ನಾಟಕ)—ಲೇಖಕರು : ಕೇಶವ (ಡಾ|| ಎಂ. ಎನ್. ಕೇಶವರಾವ್, ೩೬೮, ವೆಂಕಟೇಶದಾಸ್ ರಸ್ತೆ, ಪದ್ಮನಾಭನಗರ, ಬೆಂಗಳೂರು ೫೬೦ ೦೭೦, ಪ್ರಕಾಶಕರು : ಕರ್ನಾಟಕ ಪ್ರಕಾಶಕರ ಪರಿಷತ್ತು, ೨೭, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು–೫೬೦ ೦೫೩

ಇದೊಂದು ವಿಶಿಷ್ಟ ಕೃತಿ, ರಾಜಾ ಸತ್ಯಹರಿಶ್ಚಂದ್ರನ ಕಥೆ ಅಪೂರ್ಣವೆಂದು ಈ ಲೇಖಕರ ನಿರ್ಣಯ. ಮೂಲಕಥೆಯಲ್ಲಿ ವಿಶ್ವಾಮಿತ್ರ ಚಂಡಾಲಕನ್ಯೆಯರನ್ನು ಸೃಷ್ಟಿಸುತ್ತಾನೆ. ಪ್ರಸಕ್ತ ನಾಟಕದಲ್ಲಿ ಕೇಶವರು ಹಲವಾರು ಘಟನಾವಳಿಗಳನ್ನು ಹೆಣೆಯುತ್ತಾ ವಿವಿಧ ಪಾತ್ರವರ್ಗಗಳ ಸೃಷ್ಟಿಸಿದ್ದಾರೆ. ಒಂದೊಂದು ಪಾತ್ರವೂ ವಿಡಂಬನಾತ್ಮಕವಾಗಿದ್ದು ಹರಿಶ್ಚಂದ್ರನ ಪ್ರಖರ ತೇಜಸ್ಸಿನ ಸತ್ಯಪರಿಪಾಲನೆಯು ನಿಸ್ತೇಜವಾಗಿ, ಮೂರ್ಖತೆ ಎಂದು ತೀರ್ಮಾನವಾಗುತ್ತದೆ. ಆತ ರಾಜ ಕರ್ತವ್ಯಗಳನ್ನು, ಗೃಹಸ್ಥ ಧರ್ಮವನ್ನು ಎಲ್ಲ ಬಿಟ್ಟ ಪತಿಯು ಕರ್ತವ್ಯಗಳನ್ನು ಕೂಡ ಮಾಡದ ಧರ್ಮಭ್ರಷ್ಟವೆಂದು, ಪ್ರಜೆಗಳನ್ನು ಪತ್ನೀ ಪುತ್ರರನ್ನು ಕಷ್ಟಕೀಡು ಮಾಡಿದ ನರಾಧಮನೆಂದೆಣಿಸಬೇಕಾಗುವಂಥ ಆಶ್ಚರ್ಯಕರ ದೃಶ್ಯವೇರ್ಪಡುತ್ತದೆ.

ವೇದಗಳ ಬಗ್ಗೆ, ನಮ್ಮ ಪರಂಪರೆಯ ಬಗ್ಗೆ ಅಭಿಮಾನವಿರಿಸಿಕೊಂಡ, ಆದರೆ ವೇದವನ್ನೋದದ, ಓದಿದರೂ ಅರ್ಥವಿಸಲಾರದ–ನಮ್ಮಂಥ ಅಜ್ಞಾನಿಗಳಿಗೆ ನುಂಗಲಾರದ ತುತ್ತಾಗುತ್ತದೆ. ದಿಕ್ಕು ಕಾಣದ ಕಾಡಿನ ಪಥಿಕನಂತೆ ಓದುಗ ಕಕ್ಕಾಬಿಕ್ಕಿಯಾಗುತ್ತಾನೆ. ಹರಿಶ್ಚಂದ್ರನನ್ನೂ ಇಲ್ಲಿ ಅದೇ ಸ್ಥಿತಿಯಲ್ಲಿ ಕಾಣಬಹುದು.

ಪ್ರಚಲಿತ ಬಹು ಚರ್ಚಿತ ವಿಷಯಗಳಾದ ಸ್ತ್ರೀಯರ ಮೇಲಿನ ಅನ್ಯಾಯ, ದಬ್ಬಾಳಿಕೆಗಳನ್ನು, ಜೀತಪದ್ಧತಿಯನ್ನು ನಿರ್ನಾಮಗೊಳಿಸುವ ಇಂದಿನ ಹೋರಾಟಕ್ಕೆ ಅಮೃತವೆರೆವಂತೆ, ಈ ನಾಟಕದ ವಾದ ಪ್ರತಿವಾದಗಳು ವ್ಯಂಗ್ಯಭರಿತ ವಾಗ್ಬಾಣಗಳು ಓದುಗರ ಮನದಕದಗಳನ್ನು ಭೇದಿಸಿ ಮುನ್ನುಗ್ಗುತ್ತವೆ. ಕೇಶವರು ಬಳಸಿದ ಒಂದೊಂದು ಸಂವಾದವೂ ಅಣಕವಾಡುತ್ತಾ ಅಣಿಮುತ್ತುಗಳಂತೆ ಅನನ್ಯವಾಗಿವೆ

ಮಹಿಳಾ ಮೀಸಲಾತಿಯ ಇಂದಿನ ದಿನಗಳಲ್ಲಿ ಈ ನಾಟಕ ಬಹಳ ಪ್ರಸ್ತುತವಾಗಿದೆ. ಆದರೂ ಈ ಕೃತಿಯಲ್ಲಿ ಚರ್ಚಾಸ್ಪದವಾದ ಹಲವು ವಿಚಾರಗಳಿರುವುದು ಓದುಗರ ಚಿಂತನೆಗೆ, ಆಕ್ಷೇಪ, ಆಕ್ರೋಶಗಳಿಗೆ ನಾಂದಿ ಆಗಬಹುದು" ನಮ್ಮ ಪೂರ್ವಿಕರು ಮಧ್ಯಯುಗೀನ ಯೂರೋಪ್, ಅರಬ್, ತುರ್ಕಿ ಜನಾಂಗಗಳಂತೆ ಗುಲಾಮ ವ್ಯಾಪಾರ ನಡೆಸುವ ತಮ್ಮ ಸ್ತ್ರೀಯರನ್ನೂ ಸೇವಕರನ್ನೂ ಹೇಯವಾಗಿ ನಡೆಸಿಕೊಳ್ಳುವ ಕ್ರೂರಿಗಳಾಗಿದ್ದರೇನು ? "ಮಾತೃದೇವೋಭವ, ಪಿತೃದೇವೋಭವ, ಎನ್ನುತ್ತಿದ್ದು ಪರನಾರೀ ಸೋದರತೆಯ ಹೆಗ್ಗಳಿಕೆಯ, ಸನಾತನರ, ಚರ್ಯೆ ಇದೇ ಏನು ?!! ಉತ್ತರರಾಮಚರಿತ್ರೆ ಬರೆದವರೂ ಇದಕ್ಕೆ ಉತ್ತರಿಸಬೇಕಾಗುವುದು.

ಉತ್ತರರಾಮ ಚರಿತ್ರೆಯಂತೆ ಇದೊಂದು 'ಉತ್ತರ ಹರಿಶ್ಚಂದ್ರ'ವೆಂದು ಲೇಖಕರೇ ಹೇಳಿಕೊಂಡಿದ್ದಾರೆ. ಸೀತೆಯ ಬಗ್ಗೆ, ರಾಣಿ ಚಂದ್ರಮತಿಯ ಬಗ್ಗೆ, ಪ್ರಜಾಕೋಟಿಯಲ್ಲಿ ಸ್ತ್ರೀ ಸಮುದಾಯದ ಸ್ಥಿತಿಗತಿಯ ಬಗ್ಗೆ, ಶೂದ್ರ ಸೇವಾವೃತ್ತಿಯ ಬಗ್ಗೆ, ವೇದಶಾಸ್ತ್ರ ಮನುಸ್ಮೃತಿಗಳಿಂದಾದ ಅನ್ಯಾಯಗಳನ್ನು ಎತ್ತಿ ತೋರಿಸುತ್ತಾ, ವೇದಗಳೇ, ಧರ್ಮಶಾಸ್ತ್ರಗಳೇ ಎಲ್ಲ ಅನ್ಯಾಯಗಳ ಮೂಲವೆಂದು ಪ್ರತಿಪಾದಿಸುತ್ತಾ ಜ್ಯೋತಿಷ್ಯವನ್ನೂ ಬಲಿಪೀಠಕ್ಕೆ ಎಳೆದು ತಂದಿದ್ದಾರೆ. ಒಂದು ರೀತಿಯಲ್ಲಿ ಇದನ್ನು ಸಮರ್ಥಿಸಿಕೊಂಡರೂ ಇದು ಉದ್ದೇಶಪೂರ್ವಕವಾಗಿ ಎಳೆದು ತಂದ ಪಿಕಲಾಟವಾಗಿ ಕೆಲವರಿಗಾದರೂ ಕಾಣದಿರದು. ಆದಂತಿರಲಿ. ಏನಿದ್ದರೂ ಈ ಗ್ರಂಥವು ಸಂಪ್ರದಾಯ ಪ್ರಿಯರಲ್ಲಿ ಕೋಲಾಹಲವೆಬ್ಬಿಸದಿರದು. ಅವಕ್ಕಾಗಿ ಒಂದು ಸರಳ ವಿಚಾರಸಂಕಿರಣ ನಡೆಸಿದರೆ ಬಹಳ ಚೆನ್ನಾದೀತು.

ಏಕೆಂದರೆ ಸತ್ಯಹರಿಶ್ಚಂದ್ರನ ಆ ಹಳೆಯ ಸತ್ಯಕ್ಕಿಂತ ಬೇರೆಯಾದ ಸತ್ಯವನ್ನು ಕೇಶವರು ಪ್ರತಿಪಾದಿಸಿದ್ದಾರೆ.

ಇನ್ನು ನನ್ನಂಥ ಸಾಮಾನ್ಯ ಓದುಗರಲ್ಲಿ ಉಂಟಾಗುವ ಪ್ರತಿಕ್ರಿಯೆಯನ್ನು ಈ ರೀತಿ ಅನುಮಾನಿಸಬಹುದು. ವಧೂವರರನ್ನು ಲಕ್ಷ್ಮೀನಾರಾಯಣ ಸ್ವರೂಪರೆಂದು ಪರಿಭಾವಿಸುವ ವಧುವನ್ನು ಗೃಹಲಕ್ಷ್ಮಿಯೆಂದು ಆರಾಧಿಸುವ, ಕಾರ್ಯೇಷು ಮಂತ್ರೀ ಎಂದು ಗೌರವಿಸುವ ಭೋಜ್ಯೇಷು ಮಾತಾ ಎಂದು ಆದರಿಸುವ ಉಚ್ಚಾದರ್ಶನವನ್ನು ಎತ್ತಿ ಹಿಡಿಯುವ, ಮಾತೃದೇವೋಭವ ಎಂದು ಮೊದಲ ಪಾಠ ಕಲಿಸುವ ಮಂತ್ರಗಳು, ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಎನ್ನುವ, ಪಿತಾರಕ್ಷತಿ ಕೌಮಾರ್ಯೇ, ಭರ್ತಾ ರಕ್ಷತಿ ಯೌವ್ವನೇ, ಪುತ್ರೋ ರಕ್ಷಂತು ವಾರ್ಧಕ್ಯೇ, ಎಂದು ಪುರುಷ ಜಗತ್ತಿಗೆ ಅಪ್ಪಣೆ ಮಾಡಿ ಸ್ತ್ರೀಯರಿಗೆ ಸದಾ ಕಾಲವೂ ರಕ್ಷಣೆ ನೀಡಬೇಕೆಂದು ವಿಧಿಸಿದ ಧರ್ಮಶಾಸ್ತ್ರಗಳು ಮುಂದೆ ಕಾಲ ಸರಿದಂತೆ ದುರುಳ ಸ್ವಾರ್ಥಿಗಳ ಕೈಯಲ್ಲಿ ಸಿಲುಕಿಯೋ ಕಾಲಧರ್ಮಕ್ಕನುಗುಣವಾಗಿ ಕೂಡಿಕೊಂಡ ತೀರ್ಮಾನಗಳಿಂದಲೋ ವಿಕೃತಗೊಂಡು ಸಮಾಜದಲ್ಲುಂಟಾದ ವ್ಯತ್ಯಯಗಳಿಂದ ರೂಢಿಗತವಾಗಿ ಸೇರಿಹೋದ ಸ್ಥಿತಿಗತಿಗಳು ವ್ಯಥೆ ನೋವುಗಳನ್ನು ಕೆರಳಿಸುವು

ದಂತೂ ನಿಜ. ಶತಶತಮಾನಗಳಿಂದ ನಲುಗಿ ಹೋದ ಅಸಹಾಯ ಜೀವಿಗಳ ದುರಂತ ಚಿತ್ರಗಳು ಮೂಡುವುದು ನಿಜ.

ಕೇಶವರು ತಮ್ಮ ನಾಟಕದ ವಿಶೇಷ ಪಾತ್ರಗಳಾದ ಅಗ್ನಿಮಿತ್ರ, ವಿಶ್ವದೇವರೇ ಮೊದಲಾದ ದಾನ ಸ್ವೀಕಾರಕ್ಕೆಂದೇ ತುದಿಗಾಲಲ್ಲಿ ನಿಂತಿರುವ ಮಾತ್ರವಲ್ಲ, ಧರ್ಮ ರಕ್ಷಣೆಯ 'ಗುರುತರ' ಹೊಣೆ ಹೊತ್ತವರ ಬಾಯಿಂದ, ಆಯಾಯ ಪ್ರತಿಪಾದನೆಗಳ ಮಂತ್ರಗಳನ್ನು ಅರ್ಥಸಮೇತವಾಗಿ ಉದ್ಧರಿಸಿದ್ದರೆ, ಶ್ರೀಯುತರ ಪ್ರತಿಪಾದನೆಗೆ ತೂಕ ಹೆಚ್ಚುತ್ತಿತ್ತು. ಅಲಂಕಾರ ಸೌಂದರ್ಯ ಎರಡೂ ಸಿಗುತ್ತಿತ್ತು. ಮತ್ತು ನಿಜ ಶಾಸ್ತ್ರಗಳು ಯಾವುವು, ಅನುಕೂಲ ಶಾಸ್ತ್ರಗಳು ಯಾವುದೆಂದು ಬಹಿರಂಗವಾಗುತ್ತಿದ್ದುವು.

ಕೇಶವರಂತೆ ಮುಂದೆ ಭವಿಷ್ಯದಲ್ಲಿ ನಮ್ಮ ಪುರಾಣಗಳೊಳಗಿನ ಛಿದ್ರಗಳನ್ನು, ಅಂತರ್ವಿರೋಧಗಳನ್ನು, ಅನ್ವೇಷಿಸಿ ಹೊರಪಡಿಸಿ ನಗ್ನಗೊಳಿಸುವವರು ಬಹಳಷ್ಟು ಜನ ಬರಬಹುದು. ಸತ್ಯಶೋಧನೆ ಎಲ್ಲ ಕಡೆ ಅಗತ್ಯವೇ. ಆದರೆ ಪುರಾಣಗಳಲ್ಲಿ ಕನಸುಗಾರಿಕೆ ಎಷ್ಟು ವಾಸ್ತವಾಂಶವೆಷ್ಟು ಎಂಬ ಆಧಾರವಿಲ್ಲದೆ ಮಾಡುವ ಟೀಕೆ ಟಿಪ್ಪಣಿಗಳು–ಇಲ್ಲದಿಹ ಕನಸೊಂದ ಕಣ್ಮುಂದೆ ಕಾಣುತಲಿ ನಾಟರವ ಬೇನೆಯಲಿ ಬಳಲುವಂತಾದೀತು ಏಕೆಂದರೆ ಪುರಾಣಗಳಲ್ಲಿ ಎತ್ತಿಹಿಡಿಯಲಾದ ಆದರ್ಶಗಳು ಭಾವೋದ್ದೀಪನೆಗಾಗಿ ಉತ್ಪ್ರೇಕ್ಷೆ ಮತ್ತು ಅದ್ಭುತಾಲಂಕಾರಗಳಿಂದ ಓತಪ್ರೋತವಾಗಿದ್ದು ಅವುಗಳ ಉದ್ದೇಶಗಳು ಹೆಚ್ಚಾಗಿ ಏಕಮುಖವಾಗಿರುತ್ತವೆ. ರಾಜಾ ಹರಿಶ್ಚಂದ್ರ ನಾಟಕ ನೋಡಿದ ಮೋಹನದಾಸ ಮಹಾತ್ಮ ಗಾಂಧಿಯಾದ ಶ್ರೀರಾಮನ ಪಿತೃವಾಕ್ಯ ಪರಿಪಾಲನೆ, ಏಕಪತ್ನೀವ್ರತ, ಭರತನ ಭ್ರಾತೃಪ್ರೇಮ ಇತ್ಯಾದಿ ತ್ಯಾಗ, ಪ್ರೇಮ ಬಲಿದಾನಗಳು ವ್ಯಕ್ತಿಯನ್ನು ಮಾನವತೆಯಿಂದ ದೈವತ್ವಕ್ಕೇರಿಸುವ ಆದರ್ಶವನ್ನು ತೋರಿಸುವುದಕ್ಕಾಗಿಯೇ ರಚನೆಗೊಂಡ ಕಥಾನಕಗಳು. ಸಮಾಜ ನಿರ್ಮಾಣಕ್ಕಾಗಿ ಪದೇ ಪದೇ ಬೋಧಿಸಲಾಗುತ್ತಿದ್ದರೂ ಅವು ಇಂದಿನ ಕೀಳು ಮಟ್ಟದ ಜಾಹೀರಾತಿಗೆ ಸಮವೆಂದು ಹೇಳಿದರೆ–ಹೊಸ ಚಿಗುರೇ ಸಾಕೆಂದು ಮರದ ಬೇರು ಮಾತ್ರವಲ್ಲ ಕಾಂಡವನ್ನೇ ಕಡಿದೊಗೆದಂತೆ!

ಕಾಲ ಕಾಲಕ್ಕೆ ಬದಲಾಗುತ್ತಿರುವ ಸಾಮಾಜಿಕ ಜೀವನ ಮೌಲ್ಯಗಳಿಂದಾಗಿ ಸ್ಥಿರವಾಗಿರುವ ಪುರಾತನ ವ್ಯಕ್ತಿ ಚಿತ್ರಣಗಳಲ್ಲಿ ಲೋಪ ದೋಷಗಳು ಕಾಣುವುದು ಸಹಜ. ಅವಕ್ಕೆ ಹೊಸ ರೂಪ ಕೊಟ್ಟು, ತಿದ್ದುವುದು ಆವಶ್ಯಕವಾಗಬಹುದು. ಅಂತೆಯೇ ಉತ್ತರರಾಮ ಚರಿತ್ರೆಯಲ್ಲಿ ಸೀತಾರಾಮರ ಬಲಿದಾನವು ಪ್ರಜಾಪರಿಪಾಲನೆಯ ಪರಾಕಾಷ್ಠೆಯನ್ನು ತೋರಿಸುವ ಅಪೇಕ್ಷೆಯಿಂದ ಬಯಲಾಗಿದ್ದಿರಬಹುದು. ಆದರೆ ಕಾಲ ಸರಿದಂತೆ ಅದು ರಾಮನ ವ್ಯಕ್ತಿತ್ವಕ್ಕೆ ಕಳಂಕವಾಗಿ ರೂಪುತಳೆದ ದುರಂತ ನಾಟಕವೆಂದು ಜನಾಭಿಪ್ರಾಯ ಮೂಡಿದ್ದರಲ್ಲಿ ಆಶ್ಚರ್ಯವಿಲ್ಲ. ಈ ದೃಷ್ಟಿಯಿಂದ 'ಬುದ್ಧ ಹರಿಶ್ಚಂದ್ರ'ದಲ್ಲಿ ಹರಿಶ್ಚಂದ್ರನ ಪಾತ್ರವನ್ನು ಅಂಥದೇ ಒಂದು ದುರಂತವಾಗಿ ನಿರೂಪಿಸಿರುವುದು, ಸತ್ಯವಾದದಲ್ಲಿ ಬಹಳ ಅಧರ್ಮ ಅಸತ್ಯ

ಗಳು ಸೇರಿವೆಯೆಂದು ಪ್ರತಿಪಾದಿಸಿರುವುದು, ಕೇಶವರೇ ಹೇಳಿಕೊಂಡಂತೆ ವಕ್ರ ಚಿಂತನೆ ಎಂದರೂ ಮರ್ಮ ಭೇದಕವಾಗಿ ಓದುಗರು ಸತತವಾಗಿ ಚಿಂತನೆಯ ತಿರುಗಣಿ ಮಡುವಿನೊಳಗೆ ತಿರುಗುವಂತೆ ಮಾಡುವುದಂತೂ ನಿಶ್ಚಯ.

ಸರಸ್ವತಿ ಬಡೆಕ್ಕಿಲ
ಮನೆ ಸಂಖ್ಯೆ ೧೨, ದೀಪಾ ಹೌಸಿಂಗ್
ಕಾಂಪ್ಲೆಕ್ಸ್, ದೀಪಾನಗರ, ಬೋಗಾದಿ
ಮೈಸೂರು–೬

ಕನ್ನಡ ಕಾವೇರಿ—ಲೇಖಕರು: ಜೀನಹಳ್ಳಿ ಸಿದ್ಧಲಿಂಗಪ್ಪ, ಶ್ರುತಿ ಪ್ರಕಾಶನ, ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ, ೧೯೯೯ ಪುಟ ೫೬, ಬೆಲೆ ೨೫ ರೂ.

'ಕನ್ನಡ ಕಾವೇರಿ' ಜೀನಹಳ್ಳಿ ಸಿದ್ಧಲಿಂಗಪ್ಪನವರು ಮಕ್ಕಳಿಗಾಗಿಯೇ ಬರೆದ ಐದನೆಯ ಕವನ ಸಂಕಲನ. ಇದರಲ್ಲಿ ೧೯ ಕವನಗಳಿವೆ. ಮಕ್ಕಳ ಮನದಲ್ಲಿ ಉದ್ಭವಿಸುವ ಹಾಗೂ ಪೋಷಕರು ಚಿಂತಿಸಬಹುದಾದ ವಿಷಯಗಳನ್ನು ಈ ಕವನಗಳಲ್ಲಿ ಅಭಿವ್ಯಕ್ತಿಸಲು ಕವಿ ಯತ್ನಿಸಿದ್ದಾರೆ. ಈ ಕವನಸಂಕಲನದಲ್ಲಿ ವಿವಿಧ ಬಗೆಯ ಕವನಗಳಿವೆ. ಮೊದಲ ಮೂರು ಕವನಗಳು ಕಿವುಡ ಮಕ್ಕಳನ್ನು ಕುರಿತು ಬರೆದಂಥವು. ಹುಟ್ಟಿನಿಂದಲೇ ಕಿವುಡರಾದ ಮಕ್ಕಳ ಲಾಲನೆ, ಪಾಲನೆ, ಪೋಷಣೆ ಮಾಡಿ ಇತರ ಸಾಮಾನ್ಯ ಮಕ್ಕಳಂತೆಯೇ ಅವು ಕೂಡ ಸರಿಸಮನಾಗಿ ಬೆಳೆಯುವಂತೆ ಮಾಡಲು ಈ ಕವನಗಳು ಅನೇಕರಿಗೆ ಸ್ಫೂರ್ತಿಯನ್ನು ನೀಡುವಂಥವು.

ಬಾಬಾ ಗಿಳಿಯ, ಹಕ್ಕಿಮರಿ, ಕಾಗೆ–ಬೆಕ್ಕು–ಹದ್ದು, ಜೇನುಹುಳುವೆ ಎಂಬ ಕವನಗಳು ಪ್ರಾಣಿ–ಪಕ್ಷಿಗಳನ್ನು ಕಂಡು ಸಹಜ ಕುತೂಹಲದಿಂದ ಅವುಗಳ ಬಗೆಗೆ ಮಕ್ಕಳು ಆಡಿ, ಹಾಡಿ ಪ್ರಶ್ನಿಸುವಂತೆ ಇವೆ. ಹೇಗಮ್ಮ–ಹೇಳಮ್ಮ?—ಎಂಬ ಕವನದಲ್ಲಿ ತನ್ನ ಸುತ್ತಮುತ್ತಲಿನ ಪರಿಸರ, ನದಿ–ಸಮುದ್ರ, ಆಕಾಶಕಾಯಗಳು ಇತ್ಯಾದಿಗಳ ಬಗೆಗೆ ಮಗು ಪ್ರಶ್ನಿಸಿರುವ ರೀತಿ ಹೀಗಿದೆ:

ಹುಲಿ ಆನೆ ಸಿಂಹ ಕರಡಿ ತೋಳಗಳು
ಕಾಡಲೆ ಇರುವುವು ಏಕಮ್ಮ?
ಊರಿನ ಸುತ್ತಮುತ್ತ ಬಂದರೆ
ಏನಾಗಬಹುದು ತಿಳಿಸಮ್ಮ?

'ಹಕ್ಕಿಮರಿ' ಕವನ 'ಕಾಗೆಯೊಂದು ಹಾರಿ ಬಂದು ಮರದ ಮೇಲೆ ಕುಳಿತುಕೊಂಡು....' ಎಂಬ ಪದ್ಯದ ಅನುಕರಣೆ ಎನಿಸುತ್ತದೆ.

'ನಾನೊಂದು ಒಗಟು ಹೇಳುವೆನಣ್ಣ' ಮಕ್ಕಳಿಗಾಗಿ ಹಾಡಿನ ರೂಪದಲ್ಲಿ ಒಗಟನ್ನು ಹೇಳುವಂಥದು. ಒಗಟುಗಳು ಮಕ್ಕಳ ಮನಸ್ಸನ್ನು ರಂಜಿಸುವುದಲ್ಲದೆ ಅವರಲ್ಲಿ ತಾರ್ಕಿಕ ಮನೋಭಾವನೆಯನ್ನು ಬೆಳೆಸು

ತ್ತವೆ. 'ತಿಮ್ಮ-ಹಮ್ಮ' ಕವನದಲ್ಲಿ ಶ್ರಮ ಶಕ್ತಿಯ ಗೌರವದ ಬಗ್ಗೆ ಪುಟಾಣಿಗಳಿಗೆ ತಿಳಿವಳಿಕೆ ನೀಡಿದ್ದಾರೆ.

ಈ ಪುಸ್ತಕಕ್ಕೆ ಶೀರ್ಷಿಕೆಯಾಗಿರುವ ಕವನ 'ಕನ್ನಡ ಕಾವೇರಿ'. ಇದರಲ್ಲಿ ಕಾವೇರಿ ನದಿ ಹುಟ್ಟಿ ಹರಿಯುವ ವಿಚಾರ, ಅದರ ಬಗ್ಗೆ ಎದ್ದ ವಾದ ವಿವಾದಗಳನ್ನು ಹೇಳುತ್ತಾ, ಹಾಗೆಲ್ಲ ಮಾಡದೆ ಎಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದು ಕವಿ ಸಾರಿ ಹೇಳಿದ್ದಾರೆ. 'ಹಸಿರು-ಹೆಸರು' ಕವನದಲ್ಲಿ ನಶಿಸಿ ಹೋಗುತ್ತಿರುವ ಸಸ್ಯ ಸಂಪತ್ತನ್ನು ಉಳಿಸಿಕೊಳ್ಳಲು ಮಕ್ಕಳಿಗೆ ಕರೆಯಿತ್ತಿದ್ದಾರೆ. ಮಕ್ಕಳಿಗೆ ಹಿತಬೋಧೆ ಮಾಡುವ, ಎಳೆಯ ಮನಸ್ಸನ್ನು ಸನ್ಮಾರ್ಗಕ್ಕೆ ತಿರುಗಿಸುವ ಕವನ 'ಮದರ್ ತೆರೇಸಾ' ಇಂಥ ನಿಷ್ಕಳಂಕ ನಿಸ್ವಾರ್ಥ ಜೀವಿ, ಪರೋಪಕಾರಿಯನ್ನು ಕುರಿತು ಮಕ್ಕಳಿಗೆ ಸರಳವಾಗಿ ಹೇಳುವುದರೊಂದಿಗೆ ಈ ಕೃತಿ ಮುಕ್ತಾಯವಾಗಿದೆ.

ಈ ಸಂಕಲನದಲ್ಲಿ ಮಕ್ಕಳಿಗೆ ಉಪಯುಕ್ತವಾದ, ಕುತೂಹಲ ಕೆರಳಿಸುವ, ಹಿತನುಡಿಯುವ, ತಿದ್ದುವ, ಜೀವಿಗಳಲ್ಲಿ ಅನುಕಂಪ ಉಂಟು ಮಾಡುವ ಕವನಗಳಿವೆ. ಮಕ್ಕಳಿಗೆ ಪ್ರಿಯವಾಗುವ ಸರಳ, ಸುಲಭಭಾಷೆ ಇಲ್ಲಿದೆ. ಈಗಾಗಲೇ ಮಕ್ಕಳಿಗಾಗಿ ಕೆಲವು ಕೃತಿಗಳನ್ನು ಪ್ರಕಟಿಸಿರುವ ಶ್ರೀ ಜೀನಹಳ್ಳಿ ಸಿದ್ಧಲಿಂಗಪ್ಪ ಈ ಸಂಕಲನದ ಮೂಲಕ ಮತ್ತೊಂದು ಯಶಸ್ವಿ ಪ್ರಯತ್ನಮಾಡಿದ್ದಾರೆ.

ಡಾ|| ಅಕ್ಕಮಹಾದೇವಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು ೬

ಕಾವೇರೀ ಸೆ ಗಂಗಾಕೀ ಓರ್ (ಕಾವೇರಿಯಿಂದ ಗಂಗೆಯ ಕಡೆಗೆ)— ಮೂಲ ಲೇಖಕಿ : ಲತಾ ರಾಜಶೇಖರ್, ಅನು : ಡಾ|| ಲಕ್ಷ್ಮೀನಾರಾಯಣ ಅರೋರ ಮತ್ತು ಉಮಾ ಸರಸ್ವತೀ, ಪ್ರಕಾಶಕರು : ಕಾವೇರಿ ಪ್ರಕಾಶನ, ಮೈಸೂರು, ಪುಟ : ೭೨, ಬೆಲೆ : ೫೦ ರೂ.

ಕನ್ನಡ ಕವಿತೆಗಳ ಹಿಂದೀ ಅನುವಾದದ ಹೂರಣ ಈ ಕೃತಿಯಲ್ಲಿದೆ. ಕೋಗಿಲೆ ಕೂಗಿದಂತೆ, ಬೆಳಕಿನ ಹನಿಗಳು, ಶೇಫಾಲಿಕಾ, ಬೆಳಗಿನ ಎದೆಹಾಲು ಎಂಬ ನಾಲ್ಕು ಕವನ ಕನ್ನಡ ಕವಿತೆಗಳ ಸಂಗ್ರಹಗಳನ್ನು ಹೊರ ತಂದು ಕನ್ನಡದ ಭರವಸೆ ಹುಟ್ಟಿಸುವ ಕವಯಿತ್ರಿಯಾಗಿರುವ ಲತಾರಾಜಶೇಖರ್ ಅವರ ಆಯ್ದ ೫೧ ಕವಿತೆಗಳನ್ನು ಹಿಂದಿ ಭಾಷೆಗೆ ಡಾ|| ಲಕ್ಷ್ಮೀನಾರಾಯಣ ಅರೋರ ಮತ್ತು ಉಮಾಸರಸ್ವತಿಯವರು ಅನುವಾದ ಮಾಡಿದ್ದಾರೆ.

ಕೋಮಲ, ಮಧುರ ಮತ್ತು ಭಾವ

ಪೂರ್ಣವಾದ ಕವಿತೆಗಳು ಅನುವಾದದಲ್ಲಿಯೂ ಆ ಸತ್ವವನ್ನು ಉಳಿಸಿಕೊಂಡಿರುವುದು ಪ್ರಶಂಸಾರ್ಹವಾಗಿದೆ. ಕೆಲವು ಕವನಗಳು ಪ್ರೇಮಮಯೀ ಭಾವನೆಗಳನ್ನು ಅರಳಿಸಿದರೆ ಮತ್ತೆ ಕೆಲವು ಕವನಗಳು ವಿರಹದ ಛಾಯೆಯನ್ನು ಬಿಂಬಿಸುತ್ತವೆ. ಹಲವು ಕವನಗಳು ಗಂಭೀರವಾದ ಜೀವನ ಚಿಂತನೆಗಳನ್ನು ತೆರೆದಿಡುತ್ತವೆ.

'ತುಮ್ಹಾರೀ ಯಾದ್ ಕಿಯೆ ಬಿನಾ ನ ಕೋಯಿ ದಿನ್ ಢಲಾ, ನ ಕೋಯಿ ರಾತ್ ಕಟೀ'—ನಿನ್ನ ನೆನಪು ಇಲ್ಲದೇ ಯಾವುದೇ ದಿನ ಸರಿಯುವುದಿಲ್ಲ, ಯಾವುದೇ ರಾತ್ರಿ ಕಳೆಯುವುದಿಲ್ಲ; 'ತೇರೆ ಪ್ಯಾರ್ ಭರೇ ಭಾವ್, ಮೀಠೀ ಭಾತೇ, ವಾತ್ಸಲ್ಯ ಕೇ ಲಿಯೇ ಮೈ ಹಾರ್ ಗಯೀ ಸಜನಾ'—ನಿನ್ನ ಪ್ರೀತಿ ತುಂಬಿದ ಭಾವ, ಮಧುರ ನುಡಿ, ವಾತ್ಸಲ್ಯಗಳಿಂದ ನಾನು ಸೋತುಹೋದೆ; 'ಮೌನ್ ಕೆ ಚಟ್ಟಾನ್ ಸೆ ಟಕರಾಕರ್ ಚೂರ್ ಚೂರ್ ಹೋನೇಕಾ ಅನುಭವ್' —ಮೌನದ ಬಂಡೆಗಳಿಂದ ಹೊಡೆಸಿಕೊಂಡು ಚೂರುಚೂರಾದ ಅನುಭವ; 'ಕಲಾ ನಹೀ ಹೈ ಕವಿತಾ ಮೇರೆ ಲಿಯೇ, ಪದಗುಚ್ಛೋಂಕಾ ಜಾಲ್ ಭೀ ನಹೀ, ಅಸ್ತಿತ್ವ ಹೈ ವಹ್ ಮೇರಾ'—ಕವಿತೆ ನನಗೆ ಕಲೆ ಅಲ್ಲ, ಪದಗುಚ್ಛಗಳ ಜಾಲವೂ ಅಲ್ಲ, ಅದು ನನ್ನ ಅಸ್ತಿತ್ವ. ಇಂತಹ ಸಾಲುಗಳು ಮನಸ್ಸಿಗೆ ನಾಟುತ್ತವೆ.

ಏಳು ಜ್ಞಾನಪೀಠ ಪ್ರಶಸ್ತಿಗಳ ಮೂಲಕ ಕನ್ನಡ ಭಾರತೀಯ ಸಾಹಿತ್ಯ ಪ್ರಪಂಚಕ್ಕೆ ಅಚ್ಚರಿಯನ್ನುಂಟುಮಾಡಿದೆ. ಈ ಅಚ್ಚರಿಯನ್ನು ನಿವಾರಿಸಿ ಕನ್ನಡ ಸಾಹಿತ್ಯ ಪರಂಪರೆಯ ಬಗೆಗೆ ಅಭಿಮಾನ ಮೂಡಿಸುವ ಕೆಲಸ ನಮ್ಮ ಹೊಣೆಗಾರಿಕೆಯೂ ಆಗಿದೆ. ಇಂಥ ಪ್ರಯತ್ನಗಳಲ್ಲಿ ಕನ್ನಡದ ಸತ್ವಪೂರ್ಣ ಸಾಹಿತ್ಯವನ್ನು ಹಿಂದಿಗೆ ಅನುವಾದಿಸುವುದೂ ಒಂದು ಎಂದು ಹೇಳಬಹುದು. ಆದುದರಿಂದ ಈ ರೀತಿಯ ಅನುವಾದಗಳಿಗೆ ವಿಶೇಷಮೌಲ್ಯ ಈ ಸಂದರ್ಭದಲ್ಲಿದೆ.

ಡಾ. ಮಂಜುಳಾ ಹುಲ್ಲಹಳ್ಳಿ
ಉಪನ್ಯಾಸಕಿ, ವಿವೇಕಾನಂದಪದವೀಪೂರ್ವ ಕಾಲೇಜು, ಜಯಲಕ್ಷ್ಮೀಪುರಂ
ಮೈಸೂರು

ಓದುಗರ ಅನಿಸಿಕೆ

ಸನ್ಮಾನ್ಯರೇ,

ಕಾರಂತ ನಮನ

ಕಾರಂತರ ವಿಶೇಷ ಸಂಚಿಕೆಯನ್ನು ಓದುತ್ತಿದ್ದಾಗ ನನಗೆ ನಾನು ಚಿಕ್ಕವಳಿದ್ದಾಗ ಅವರನ್ನು ಪುತ್ತೂರಿನಲ್ಲಿ ನೋಡಿದ ನೆನಪಾಯಿತು. ಪುತ್ತೂರು ನಾನು ಹುಟ್ಟಿದ ಊರು. ಸುಮಾರು ೨೦ ವರ್ಷಗಳಷ್ಟು ಸಮಯ ನಾನು ಆ ಊರಿನಲ್ಲಿದ್ದೆ. ೧೯೬೩ರಲ್ಲಿ ನನ್ನ ವಿವಾಹವಾದ ನಂತರ ನಾನು ಪುಣೆಗೆ ಹೋದೆ. ಪುತ್ತೂರಿನಲ್ಲಿ ಆಯುರ್ವೇದ ಡಾಕ್ಟರ್ ಆಗಿದ್ದ ನನ್ನ ತಂದೆ ಬಡೆಕ್ಕಿಲ ಶಂಭುಶರ್ಮರ ಕ್ಲಿನಿಕ್‌ನಲ್ಲಿ ನಾನು ಒಮ್ಮೊಮ್ಮೆ ಕಾರಂತರನ್ನು ಕಾಣುತ್ತಿದ್ದೆ. ಪುತ್ತೂರಿನ ಟೌನ್ ಹಾಲಿನಲ್ಲಿ ಅವರ ಭಾಷಣವಿದ್ದಾಗಲೆಲ್ಲಾ ನಾನು ನನ್ನ ಅಕ್ಕಂದಿರ ಮತ್ತು ಅಣ್ಣಂದಿರ ಜತೆ ಅವರ ಭಾಷಣ ಕೇಳಲು ಹೋಗುತ್ತಿದ್ದೆ. ನಮ್ಮ ಬೋರ್ಡ್ ಹೈಸ್ಕೂಲಿನ ಪ್ರತಿ ವರ್ಷದ ಸ್ಕೂಲ್‌ಡೇಗೆ ಕಾರಂತರು ನಾಟಕ ಹೇಳಿಕೊಡುತ್ತಿದ್ದರು. ಹೀಗೆ ಅವರು ಹೇಳಿಕೊಡುತ್ತಿದ್ದ ನಾಟಕಗಳಲ್ಲಿ ಲವ-ಕುಶ ನಾಟಕ ಈಗಲೂ ನನ್ನ ಕಣ್ಣ ಮುಂದೆ ಕಾಣಿಸುತ್ತಿದೆ. ಲವ-ಕುಶ ನಾಟಕದಲ್ಲಿ ನನ್ನ ಇಬ್ಬರು ಅಕ್ಕಂದಿರು ಪಾರ್ಟ್ ಮಾಡಿದ್ದರು. ಅವರ ನಾಟಕ ಪ್ರಾಕ್ಟೀಸು ನೋಡಲು ನಾನೂ ಅವರೊಂದಿಗೆ ಹೋಗುತ್ತಿದ್ದೆ. ನಾನು ಆಗ ೭ನೇ ತರಗತಿಯಲ್ಲಿದ್ದೆ. ಕಾರಂತರ ಹಾಡು ಮತ್ತು ಅವರ ಸ್ವರ ಕೇಳಲು ನನಗೆ ತುಂಬಾ ಇಷ್ಟವಾಗುತ್ತಿತ್ತು. ಆ ನಾಟಕದಲ್ಲಿ ನನಗೂ ಭಾಗವಹಿಸಬೇಕೆಂಬ ಆಸೆಯಾಗುತ್ತಿತ್ತು. ಆ ವರ್ಷದ ಸ್ಕೂಲ್‌ಡೇಯಲ್ಲಿ ನಡೆದ ನಾಟಕಗಳಲ್ಲಿ ಲವ-ಕುಶ ನಾಟಕ ಅತ್ಯುತ್ತಮ ನಾಟಕವಾಗಿತ್ತು.

ನಾನು ಪುಣೆಯಲ್ಲಿದ್ದಾಗ ಅಲ್ಲಿಯ ಕನ್ನಡ ಸಂಘದ ವಾರ್ಷಿಕೋತ್ಸವಕ್ಕೆ ಕಾರಂತರನ್ನು ಅಧ್ಯಕ್ಷ ಸ್ಥಾನಕ್ಕೆ ಆಮಂತ್ರಿಸಿದ್ದರು. ತಳಿರು ತೋರಣಗಳಿಂದ ಕೂಡಿದ ಅಲ್ಲಿಯ ಸ್ಟೇಜಿನ ಪರದೆಯ ಮೇಲೆ ಕನ್ನಡ ಸಂಘದ ವಾರ್ಷಿಕೋತ್ಸವವೆಂದು ಇಂಗ್ಲಿಷ್‌ನಲ್ಲಿ ಬರೆದಿತ್ತು. ಎಲ್ಲಿಯೂ ಕನ್ನಡದ ಬರಹವಿರಲಿಲ್ಲ. ಕಾರ್ಯದರ್ಶಿ ಮತ್ತು ಇನ್ನಿತರ ಗಣ್ಯ ವ್ಯಕ್ತಿಗಳು ತಮ್ಮ ಮಾತನ್ನು ಇಂಗ್ಲಿಷ್‌ನಲ್ಲಿ ಹೇಳಿದ್ದರು. ಕಾರಂತರ ಸರದಿ ಬಂದಾಗ ಅವರು ಎದ್ದು ನಿಂತು

ಸ್ವಲ್ಪ ಕೋಪದಿಂದ "ಕನ್ನಡ ಸಂಘದ ವಾರ್ಷಿಕೋತ್ಸವವೆಂದು ನೀವು ನನ್ನನ್ನು ಆಮಂತ್ರಿಸಿದ್ದೀರಿ, ಆದರೆ ಇಲ್ಲಿ ಕನ್ನಡ ಭಾಷೆ ಎಲ್ಲೂ ಕಾಣಿಸುತ್ತಿಲ್ಲ ಮತ್ತು ಕೇಳಿಸುತ್ತಿಲ್ಲ. ನಾನು ನನ್ನ ಮಾತುಗಳನ್ನು ಕನ್ನಡದಲ್ಲೇ ಹೇಳುತ್ತೇನೆ" ಎಂದು ಪ್ರಾರಂಭಿಸಿದ ಅವರು ಅನಂತರ ನಗುತ್ತಾ ತಮ್ಮ ಹಾಸ್ಯ ಪೂರಿತ ಭಾಷಣವನ್ನು ಕನ್ನಡ ಭಾಷೆಯಲ್ಲಿ ಮಾಡಿ ನಮ್ಮನ್ನೆಲ್ಲಾ ನಗುವಂತೆ ಮಾಡಿದರು.

ಮೈಸೂರು — ಇತಿ ನಿಮ್ಮ ವಿಶ್ವಾಸಿ,
ನವೆಂಬರ್ ೨೫, ೧೯೯೯ — ಭಾರತಿಭಟ್

ಸಂಪಾದಕರಿಗೆ,

ನೀವು ಅಭಿಮಾನಪೂರ್ವಕ ಕಳುಹಿಸಿರುವ 'ಪುಸ್ತಕ ಪ್ರಪಂಚ' ದ ಎರಡು ಪ್ರತಿಗಳು ತಲುಪಿ ಸಂತೋಷವಾಯಿತು, ಅಭಿನಂದನೆಗಳು.

ಉಪಯುಕ್ತ ಲೇಖನಗಳಿಂದೊಡಗೂಡಿ ಪುಸ್ತಕವು ಉತ್ತಮವಾಗಿ ಮೂಡಿ ಬಂದಿದೆ.

ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹವಿರಲಿ.

ಶ್ರೀ ಧರ್ಮಸ್ಥಳ — ಇತಿ
ತಾರೀಕು ೪–೧೨–೯೯ — ಡಿ. ವೀರೇಂದ್ರ ಹೆಗಡೆಯವರು

ಮಾನ್ಯ ಸಂಪಾದಕರಿಗೆ ಸಪ್ರೇಮ ವಂದನೆಗಳು,


ನವೆಂಬರ್ ೯೯ರ ಸಂಚಿಕೆ ಕೈಸೇರಿತು. ಮುಂಬಯಿನಗರದ ವೈವಿಧ್ಯಮಯ ಜೀವನದ ಎಡರು-ತೊಡರುಗಳ ವಾಸ್ತವಿಕೆಯನ್ನು ಶ್ರೀಮತಿ ಶೋಭಾ ಪ್ರಮೋದ್‌ರವರು 'ನರಕದ ಎರಡು ಮುಖಗಳು' ಲೇಖನದಲ್ಲಿ ತುಂಬಾ ಅರ್ಥಪೂರ್ಣವಾಗಿ ವಿಮರ್ಶಿಸಿದ್ದಾರೆ. ಇದಕ್ಕಾಗಿ ಅವರಿಗೆ ವಂದನೆಗಳು. ಇತರ ವಿವಿಧ ಲೇಖನಗಳು ಚೆನ್ನಾಗಿವೆ.

ಇನ್ನಿತರ ನಗರ ಜೀವನಗಳ ಮೇಲೆ ಬೆಳಕು ಚೆಲ್ಲುವಂತ ಲೇಖನಗಳು ಮೂಡಿಬರಲೆಂದು ಆಶಿಸುತ್ತೇನೆ.

ಮೈಸೂರು — ಇತಿ ನಿಮ್ಮ
ದಿನಾಂಕ ೬–೧೨–೯೯ — ಜಿ. ಶಿವಾಜಿರಾವ್

Reg. No KRNN-29 / WPP 6

Licence No. 21
Licenced to Post with Payment



Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006